**ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)** :- ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ಬಂದರುಗಳು (ಇಳಿದಾಣ ಮತ್ತು ಸಾಗಣೆ ಶುಲ್ಕಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** :- ಪ್ರಸ್ತಾವ ಏನೆಂದರೆ,

"2007ರ ಕರ್ನಾಟಕ ಬಂದರುಗಳ (ಇಳಿದಾಣ ಮತ್ತು ಸಾಗಣೆ ಶುಲ್ಕಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಅನುಬಂಧ – 2)**

## ಆ) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 2006

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** :- ಮಾನ್ಯ ಅಧ್ಯಕ್ಷರೇ, 2006ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** :- ಮಾನ್ಯ ಅಧ್ಯಕ್ಷರೆ, ಈಗ ಇರುವಂತಹ KMC Act ನಲ್ಲಿ Corporation Ward ಗಳ ಸಂಖ್ಯೆ 100 ಇರುವುದನ್ನು ಇವತ್ತು 150 ಸಂಖ್ಯೆಗೆ ಏರಿಸುವುದಕ್ಕೆ ಈ ಒಂದು ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತಿದ್ದೇನೆ. ಬೆಂಗಳೂರು ನಗರ ಬಹಳ ವೇಗವಾಗಿ ಬೆಳವಣಿಗೆಯನ್ನು ಕಂಡಿರುವಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿರತಕ್ಕಂತಹ BMP, TMC, CMC ಮತ್ತು 750 ಗ್ರಾಮ ಪಂಚಾಯಿತಿಗಳ memberಗಳು ಇರುವಂತಹ ಈ ಹಳ್ಳಿಗಳನ್ನು ಕೂಡ ಈ ಒಂದು ವ್ಯಾಪ್ತಿಗೆ ತರುವುದಕ್ಕೆ ಈ ವಿಧೇಯಕವನ್ನು ಸದನದಲ್ಲಿ ತಂದಿದ್ದೇನೆಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)** :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ದಿಢೀರನೆ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಇರುವಂತಹ 100 ಸದಸ್ಯರ ವಾರ್ಡ್‌ಗಳನ್ನು 150 ವಾರ್ಡ್‌ಗಳನ್ನು ಮಾಡುವುದಕ್ಕೆ

ಈ ವಿಧೇಯಕವನ್ನು ಇಟ್ಟಿದ್ದಾರೆ. ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಿದೆ ಎನ್ನುವ ಮಾತು ಇದೆ. ಇವತ್ತು ಸಮಗ್ರವಾಗಿ ಏಕೆ ಮಾಡಬೇಕಾಗಿದೆ ಮತ್ತು ಮಾಡತಕ್ಕಂಥ ಒತ್ತಡ ಏನಿದೆ? ಇದರಿಂದ ಆಗತಕ್ಕಂಥ ಲಾಭ ಏನಿದೆ, admitted point of view, ಬೇರೆ ದೃಷ್ಟಿಯಿಂದಲೂ, ವಿಚಾರಗಳು statement of objects ನಲ್ಲಿ ಕೂಡ ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು 100 ಇದ್ದುದ್ದನ್ನು 150 ವಾರ್ಡ್ ಮಾಡಿದ್ದೇವೆಂದು ಹೇಳಿದ್ದಾರೆ. ಇದನ್ನು ಬೆಳಗಾವಿ ಅಧಿವೇಶನದಲ್ಲಿ ಕೂಡ ಮಂಡಿಸಿದ್ದೀರಿ. ಇವತ್ತು ಬೆಂಗಳೂರು ನಗರದ infrastructure development ನೋಡಿ. 1940ರಲ್ಲಿ ಬೆಂಗಳೂರಿನ population 3,00,000 ಇತ್ತು. ಈಗ nearly 1,00,00,000 population ಇದೆ. This is the fastest growing city in the country. ಇಲ್ಲಿ 74% population ಬೆಳೆಯುತ್ತಿದೆ. ಇಡೀ ವಿಶ್ವದಲ್ಲೇ, this is the air city. ಇವತ್ತಿನ ದಿವಸ IT, BT ಬಂದಮೇಲೆ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿದೆ. ನನ್ನ ಕಾಲದಲ್ಲಿ flyover ಮಾಡಿದ್ದು, ಅದನ್ನು ಇವರು ಉದ್ಘಾಟನೆ ಮಾಡಿದ್ದಾರೆ. ಹೈದರಾಬಾದ್‌ನಲ್ಲಿ traffic congestion ಬಹಳ ಕಡಿಮೆ ಇದೆ. ಆ city ಯಲ್ಲಿ 28 flyovers ಆಗಿದೆ. ಇನ್ನೂ ಕೂಡ ಹೆಚ್ಚಿನ flyovers ಆಗಬೇಕು. ಇಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಿ ಮುಟ್ಟುವುದಕ್ಕೆ ಸರಿಯಾದ ಸೌಕರ್ಯವಿಲ್ಲ. Traffic point of view, ಇವತ್ತು ಆದಷ್ಟು ಕೂಡ ಸೌಕರ್ಯವನ್ನು ಕೊಡಬೇಕಾಗಿದೆ. ಇವತ್ತು police Department ನವರು ಕೂಡ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎನ್ನುವ ದೃಷ್ಟಿಯಿಂದ traffic ಗೆ fund ಏನಿತ್ತು ಅದು ಬೇರೆ ಕಡೆಗೆ divert ಆಗುತ್ತಿದೆ. ಅದಕ್ಕೆ ನಾನು ಎರಡು-ಮೂರು ಬಾರಿ ಸಭೆ ಕರೆಸಿ ಮಾತನಾಡಿದ್ದೇನೆ. ತಾವು ಅದರ ಬಗ್ಗೆ ಕೂಡ ಗಮನವನ್ನು ಕೊಡಬೇಕು. ಇನ್ನು ಕುಡಿಯುವ ನೀರು, ಕುಡಿಯುವ ನೀರಿನ ಬಗ್ಗೆ ಹಳ್ಳಿ ಪ್ರದೇಶಗಳಲ್ಲಿರುವ ಸಮಸ್ಯೆ ಬಂದಾಗ ನಾವು ಮರೆಯುತ್ತೇವೆ. ಬೆಂಗಳೂರು ಇಡೀ ಜಗತ್ತಿನಲ್ಲಿ 5ನೇ ಪಟ್ಟಣ, 6th in the world. ನಾವು lower levelನಿಂದ higher level ಗೆ 1,500 ft ನೀರನ್ನು pump ಮಾಡಬೇಕಾಗುತ್ತದೆ. Bangalore is a rock area. ಎಷ್ಟು bore well ಹಾಕಿದರೂ ಕೂಡ ಬರುವುದಿಲ್ಲ. ನಾವು ಅದಕ್ಕೆ suggest ಮಾಡಿದ್ದು Metropolitan Authority ಆಗಬೇಕು. BDA ನವರು ಏನು site ಮಾಡುತ್ತಾರೆ, ನಾವು ಇಷ್ಟು site ಮಾಡುತ್ತಿದ್ದೇವೆ, ಅಲ್ಲಿಯವರೆಗೆ ನೀರು ಕೊಂಡೊಯ್ಯುವಂತಹದ್ದರ

ಬಗ್ಗೆ ನೀವು ಮಾತನಾಡಬೇಕು. ಅದು BDA ಅಥವಾ Housing Board ಆಗಲಿ. Electricity Board, ಇವತ್ತು ನಮ್ಮ Bombay Development Authority ಏನಿದೆ Bombay ನಲ್ಲಿ ಎಷ್ಟೇ ಜನಸಂಖ್ಯೆ ಬೆಳೆದರೂ ಕೂಡ ಅಲ್ಲಿ ಒಂದು gravity ಇದೆ, ಮೇಲಿನಿಂದ ಕೆಳಗಡೆಗೆ ನೀರು ಹರಿದು ಬರುತ್ತದೆ. ಇವತ್ತು ಕಲ್ಕತ್ತಾ, ಮದ್ರಾಸ್, ಆಂಧ್ರಪ್ರದೇಶದಲ್ಲಿ ಇದೆ. ಆದರೆ ಇವತ್ತು ನಮ್ಮ ಬೆಂಗಳೂರು ನಗರಕ್ಕೆ ಕೊರತೆ ಇದೆ. ಇವತ್ತು ನಾನು ಹೇಳುವುದಿಷ್ಟೇ Financial Statement ನಲ್ಲಿ nil ಎಂದು ಹೇಳಿದ್ದೇನೆ. ಏಕೆಂದರೆ ತಾವು 100 ರಿಂದ 150ಕ್ಕೆ TA:DA ಕೊಡುವಂತಹ ವಿಚಾರದ ಬಗ್ಗೆ ಮಾತ್ರ ಹೇಳುತ್ತಿದ್ದೀರಿ. ಆದುದರಿಂದ ಬೆಂಗಳೂರಿನ ಬಗ್ಗೆ ಸ್ಪಷ್ಟತೆ ಬೇಕು. ಬೆಂಗಳೂರು ನಗರದ ಬಗ್ಗೆ ಏನು ನಕಾಶೆ ಇದೆ, ಇದನ್ನು ಎಲ್ಲಿಯವರೆಗೆ ಬೆಳೆಯುವುದಕ್ಕೆ ಬಿಡುತ್ತೀರಿ? BDAಯವರು ಎಲ್ಲಿಯವರೆಗೆ site ಮಾಡಬಹುದು? Housing Board ನವರು ಕೂಡ ಎಲ್ಲಿಯವರೆಗೆ ಮಾಡಬಹುದು? Housing Board ನವರು ಮಾಡಿದಂತಹ ನೀರು, ಮತ್ತೊಂದು ಏನಾಗುತ್ತದೆ ಎಂದರೆ ಬೆಂಗಳೂರು ನಗರದಲ್ಲಿ ವಾಸಿಸುವಂತಹವರು ಇವತ್ತು ಬಸವನಗುಡಿಯಲ್ಲಿ, ಚಿಕ್ಕಪೇಟೆಯಲ್ಲಿ ಇದ್ದಾರೆ. ಹಳೇ ಬಡಾವಣೆಯಲ್ಲಿ ಇರುವಂತಹ ಜನರಿಗೆ ನೀರು ಹೋಗುವುದಿಲ್ಲ. ಎಲ್ಲೆಲ್ಲಿ ಬಡಾವಣೆಗಳು ಬೆಳೆಯುತ್ತವೆ, all extension people, Bangalore Water Supply Board ಗೆ ಹೇಳುತ್ತಾರೆ, ಆಗುತ್ತದೆ. ಇವತ್ತು ಕಾವೇರಿ 4ನೇ stage ಆಯಿತು. ಬೆಂಗಳೂರು ನಗರಕ್ಕೆ ನೀರು ಒದಗಿಸುವುದಕ್ಕೆ ಜಪಾನ್ ಜೊತೆಯಲ್ಲಿ ಒಂದು ಸಂಧಾನ ಮಾಡಿ 3,384 ಕೋಟಿ ರೂಪಾಯಿಯನ್ನು ತಂದು ಆಗಿನ ಕೇಂದ್ರ ಸಚಿವರಾದ ಗುಲಾಂ ನಬೀ ಆಜಾದ್‌ರವರು ಕೂಡ ಅದಕ್ಕೆ foundation ಹಾಕಿದ್ದಾರೆ. ಮಾನ್ಯ ರಾಮಲಿಂಗಾರೆಡ್ಡಿಯವರ ಮತಕ್ಷೇತ್ರದಲ್ಲಿ ಎರಡು ವರ್ಷಗಳ ಹಿಂದೆ ನಾವು ಪ್ರಾರಂಭ ಮಾಡಿದ್ದೇವೆ. ಅದರ ಬಗ್ಗೆ ಏನು ಕ್ರಮ ಮಾಡಿದ್ದೀರಿ? ಕೇವಲ 100 ವಾರ್ಡ್‌ನಿಂದ 150 ವಾರ್ಡ್‌ಗೆ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಕೇವಲ ಪತ್ರಿಕೆಗಳಿಂದ ಹೆಚ್ಚಿನ ಒಂದು political repercussion ಆಗುತ್ತದೆ. ಏಕೆಂದರೆ ಬೆಂಗಳೂರು ನಗರದ ಚುನಾವಣೆಯನ್ನು ಬೇರೆ ದೃಷ್ಟಿಯಿಂದ ಮುಂದೆ ಹಾಕಿದ್ದೀರಿ. ಅದಕ್ಕೆ ಏನಾದರೂ ಮಾಡಬೇಕು. ಏಕೋ ಬೆಂಗಳೂರು ಬಗ್ಗೆ ಸ್ವಲ್ಪ ಅಂಜಿಕ ಹುಟ್ಟಿದೆ. ಅದಕ್ಕೆ ತಾವು ಚುನಾವಣೆಯನ್ನು ಮುಂದಕ್ಕೆ ಹಾಕಿ, ಇವತ್ತು ಶಂಕೆ ಬೆಳೆಸುತ್ತಿದ್ದೀರಿ, ಮಾನ್ಯ ಮುಖ್ಯಮಂತ್ರಿಯವರು ಇವತ್ತು ಬೆಂಗಳೂರು ನಗರದ ಬಗ್ಗೆ ಏನು ಮುಂದಾಲೋಚನೆ ಇದೆ? ಬೆಳೆಯತಕ್ಕಂಥ

ನಗರದ ಬಗ್ಗೆ ಏನು ಆಲೋಚನೆ ಇದೆ? slum ಬಗ್ಗೆ ಏನು ಆಲೋಚನೆ ಇದೆ? ಇವತ್ತು BDA ನಲ್ಲಿ Slum ಇದೆ, Housing Board ನಲ್ಲಿ slum ಇದೆ, ಬಹಳಷ್ಟು slum ಇದೆ. ನಾನು 27 ವರ್ಷಗಳ ಹಿಂದೆ ಈ ಖಾತೆಯ ಮಂತ್ರಿಯಾಗಿದ್ದೆ. ನಾನು Bangalore Legislators ಅನ್ನು ಕಲ್ಕತ್ತಾಕ್ಕೆ ಕರೆದುಕೊಂಡು ಹೋಗಿದ್ದೆ. ಆಗ ಅಲ್ಲಿ slum ಗಳ ಸಮಸ್ಯೆಯನ್ನು ಅವರು ಹೇಗೆ ಬಗೆಹರಿಸುತ್ತಿದ್ದಾರೆಂಬ ಬಗ್ಗೆ ತಿಳಿಯಲು ಕರೆದುಕೊಂಡು ಹೋಗಿದ್ದೆ. ಆಗ ಮಾನ್ಯ ಕೃಷ್ಣಯ್ಯನವರು ಇದ್ದರು, ದಿವಂಗತ ಡಾ॥ ಜೀವರಾಜ ಆಳ್ವರವರು ಇದ್ದರು, ಎಲ್ಲರನ್ನು ಕರೆದುಕೊಂಡು ಮದ್ರಾಸ್, ಬಾಂಬೆಯಲ್ಲಿ, ದೆಹಲಿಯಲ್ಲಿ, ಇದರ ಬಗ್ಗೆ ಯಾವ ರೀತಿ ಮಾಡುತ್ತಾರೆಂಬ ವಿಚಾರವನ್ನು ತಿಳಿದುಕೊಂಡು ಬಂದಿದ್ದೇವೆ. ಇವತ್ತು ನಾವು ಎಲ್ಲಾ ಕಡೆಗಳಲ್ಲೂ ದಿನೇ ದಿನೇ ಬೆಳೆಯುತ್ತಿರುವ ಬೆಂಗಳೂರು ನಗರ ಏನು ಆಗಿದೆ. With all that, ಇವತ್ತು ಇದಕ್ಕೆ garden city ಎಂದು ಹೆಸರು ಬಂದಿದೆ. ಇದು ಒಳ್ಳೆಯ ನಗರವೆಂದು ಬಂದಿದೆ, Now a days Bangalore has become a cosmopolitan city. ಇವತ್ತು ಜನರು ಬೆಂಗಳೂರಿಗೆ ಬರುತ್ತಿದ್ದಾರೆ. ಆದರೆ ಇವತ್ತಿನ ದಿವಸ ಬೆಂಗಳೂರಿನಲ್ಲಿ ಎಲ್ಲವನ್ನು ಕಾಪಾಡಿಕೊಂಡು ಹೋಗಬೇಕಾಗಿದೆ, ಬಹಳಷ್ಟು ಸಮಸ್ಯೆಗಳು ಇದೆ. ತಾವು ಯಾವಾಗಲೂ ಮಾಡತಕ್ಕಂಥ ರೀತಿಯಲ್ಲಿ ಸಮಾಲೋಚನೆ ಮಾಡುವುದಿಲ್ಲ. ಇವತ್ತು ತಾವು ದಿಢೀರನೆ ತಂದು ಬಿಡುತ್ತೀರಿ, ಬೆಂಗಳೂರಿನಲ್ಲಿ ಎಷ್ಟು ಜನ ಎಕ್ಸ್ ಮಿನಿಸ್ಟರ್ಸ್ ಇದ್ದಾರೆ, ಇವತ್ತು ಬೆಂಗಳೂರಿಗೆ ಸಂಬಂಧಪಟ್ಟ 7 ಜನ ಶಾಸಕರು ಇದ್ದಾರೆ. ತಾವು ಯಾರನ್ನು ಸಭೆಗೆ ಕರೆಸುವುದಿಲ್ಲ, ತಾವು ಬರತಕ್ಕಂಥ ರೀತಿಯಲ್ಲಿ ಸಮಾಲೋಚನೆಯನ್ನು ಮಾಡಬೇಕು. ಕೇವಲ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ. ಬೆಂಗಳೂರಿನ ಸಮಸ್ಯೆಯನ್ನು ಸಮಾಧಾನಕರವಾಗಿ ಮಾಡಬೇಕಾದರೆ, ಇವತ್ತು consultation is very important, consultation ಆಗಬೇಕು. ಇದರಿಂದ ಏನು ಉಪಯೋಗವಾಗುತ್ತದೆಂಬುದು, ಮತ್ತೆ ಇದರಿಂದ ಏನಾಗುತ್ತದೆಂಬುದು ಕೂಡ ಸದನದಲ್ಲಿ ಮನವರಿಕೆ ಮಾಡಿಕೊಂಡು, ಈಗ ಬಹಳಷ್ಟು ಸಂಖ್ಯೆಯಾಗಿದೆ, ಅದು 100 ರಿಂದ 150ಕ್ಕೆ, 150 ಜನ ಸದಸ್ಯರನ್ನು ನಡೆಸುವಂಥ ರೀತಿಯಲ್ಲಿ ತಾವು ಏನೇನು ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಅದನ್ನು ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ವಿವರಣೆಯನ್ನು ಕೊಟ್ಟರೆ ಸರಿಯಾಗುತ್ತದೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) :– ಮಾನ್ಯ ಅಧ್ಯಕ್ಷರೆ, ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರನ್ನಾಗಿ ಮಾಡಿ, ಬೆಂಗಳೂರು ನಗರದ ನೂರು ಜನ ನಗರಪಾಲಿಕೆ ಸದಸ್ಯರ ಬದಲಾಗಿ 150 ಜನ ನಗರಪಾಲಿಕೆ ಸದಸ್ಯರನ್ನು ಮಾಡಬೇಕೆನ್ನುವ bill ಅನ್ನು ಏನು ತಂದಿದ್ದಾರೆ. ಇವತ್ತು ಬೆಂಗಳೂರು ನಗರದ ಅನೇಕ ಸಮಸ್ಯೆಗಳ ಮಧ್ಯೆಯಲ್ಲೂ ಮಾಡುವ ದೃಷ್ಟಿಕೋನವನ್ನು ಉಳ್ಳವರಾಗಿ TMC ಕಾಯಿದೆ 1976 ಅನ್ನು ತಿದ್ದುಪಡಿ ಮಾಡುವ ಮುಖೇನಾ ಇವತ್ತು 1976ರ (7)ನೇ ಪ್ರಕರಣವನ್ನು ತಿದ್ದುಪಡಿ ಮಾಡುವಾಗ, ಈ ಬೆಂಗಳೂರು ನಗರವನ್ನು 150 ವಿಭಾಗಗಳನ್ನಾಗಿ ಏನು ಮಾಡುತ್ತಿದ್ದಾರೆ. ನಾನು ಎರಡು, ಮೂರು ವಿಚಾರಗಳನ್ನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಈ KMC ಕಾಯಿದೆಯನ್ನು ತಾವು ಇವತ್ತು ಏನು ಮಾಡುತ್ತಿದ್ದೀರಿ, ಇದು ಬೆಂಗಳೂರು ನಗರಕ್ಕೆ ಒಂದು ಹೊಸದಾಗಿ ಮಾಡುತ್ತೀರಾ? ಅಥವಾ ಬೆಂಗಳೂರು ನಗರದಂತೆ ಇನ್ನಿತರೇ ಮಹಾನಗರ ಪಾಲಿಕೆಗಳು ಏನು ಇವೆ, ಅದು ಮಂಗಳೂರು ಇರಬಹುದು, ಗುಲ್ಬರ್ಗಾ, ಹುಬ್ಬಳ್ಳಿ, ಧಾರವಾಡ, ಮೈಸೂರು, ಇವೆಲ್ಲಕ್ಕೂ ಹೊರತುಪಡಿಸಿ, ಬೆಂಗಳೂರನ್ನು ಮಾತ್ರ ಯಾವುದಾದರೂ ಒಂದು ಮಿತಿಯಲ್ಲಿ ತರುವಂಥಾ ರೀತಿಯಲ್ಲಿ ಕಾನೂನಿನ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ಈ ಬೃಹತ್ ಬೆಂಗಳೂರನ್ನು ಮಾಡುವಂಥ ಸಂದರ್ಭದಲ್ಲಿ Metropolitan Board ಅನ್ನು ಮಾಡಿ, ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾಗಿರುವಂಥ BWSSB, BDA, BMRDA, BMTC, KUIDFC, Slum clearance board, ಮತ್ತೆ Housing Board, ಇದರ ಜೊತೆಯಲ್ಲಿ ಪೊಲೀಸ್ ಇಲಾಖೆ, ಇವೆಲ್ಲವನ್ನು ಒಂದೇ Umbrella ದ ಅಡಿಯಲ್ಲಿ ತರುವಂಥಾ ಒಂದು ಯೋಜನೆಯನ್ನು ತಾವು ಏನಾದರೂ ಮಾಡಿದ್ದಿರಾ? ಮಾಡಿದ್ದರೆ, ಅದನ್ನು ಯಾವ ರೀತಿಯಲ್ಲಿ ಕಾನೂನು ರೂಪದಲ್ಲಿ ತರುವಂಥಾದ್ದಕ್ಕೆ, ಈ ಒಂದು ನಿಯಮದಲ್ಲಿ ತಾವು ಎಲ್ಲೂ ಕೂಡ ಸ್ಪಷ್ಟವಾಗಿ ಹೇಳಿಲ್ಲ. KMC ಕಾಯಿದೆ 176(7) ಅನ್ನು ತಾವು ಇದಕ್ಕೆ ಮಾತ್ರ ಏತಕ್ಕೆ ಉಪಯೋಗಿಸುತ್ತಿದ್ದೀರೆಂದರೆ, ಇದು ಕೇವಲ 100 ವಾರ್ಡ್‌ಗಳನ್ನು 150 ವಾರ್ಡ್‌ಗಳನ್ನಾಗಿ ಮಾರ್ಪಾಡು ಮಾಡಿಕೊಂಡು, ಬೃಹತ್ ಬೆಂಗಳೂರನ್ನು 240 ಒಂದು ಚದರ ಕಿ.ಮೀ ಅನ್ನು 800 ಚದರ ಕಿ.ಮೀ ಗೆ ಇವತ್ತು ಏನು ವಿಸ್ತಾರ ಮಾಡುತ್ತಿದ್ದೀರಿ. ಇದರಲ್ಲಿ ಇರುವಂಥ ಸಾಧ್ಯಾ–ಸಾಧ್ಯತೆಗಳನ್ನು ತಾವು ಏನು ಯೋಚನೆ ಮಾಡಿದ್ದೀರಿ. ಅದರ ಬಗ್ಗೆ ದಯಮಾಡಿ, ತಾವು ಸೂಕ್ಷ್ಮವಾಗಿ

ತಿಳಿಸಬೇಕೆಂಬುದು ಒಂದು ವಿಷಯವಾದರೆ, ಇವತ್ತು ಬೃಹತ್ ಬೆಂಗಳೂರನ್ನು ಮಾಡುವಾಗ, 150 ವಿಭಾಗಗಳನ್ನು ಏನು ಮಾಡಿದ್ದೀರಿ. ಈ ವಿಭಾಗಗಳನ್ನು ಮಾಡುವಾಗ, ಈಗಾಗಲೇ ಬೆಂಗಳೂರು ಮಹಾನಗರ ಪಾಲಿಕೆ, 240 ಚದರ ಕಿ.ಮೀಗಳಲ್ಲಿ 100 ವಿಭಾಗಗಳನ್ನು ಮಾಡಿದ್ದೇವೆ. ಇನ್ನು ಉಳಿದಿರುವಂಥ 50 ವಾರ್ಡ್‌ಗಳನ್ನು ಇವತ್ತು ತಾವು ಏನು ತರುತ್ತಿದ್ದೀರಿ. ಇದನ್ನು ಯಾವ ಇತಿಮಿತಿಯಲ್ಲಿ, ಯಾವ ಮಾನದಂಡದಲ್ಲಿ ಈ ವಿಭಾಗಗಳನ್ನು ಮಾಡುತ್ತೀರಿ? ಭೌಗೋಳಿಕವಾಗಿ, ಇವತ್ತು ಹಳೆಯ ಬೆಂಗಳೂರು ಏನು ಇದೆ. ಈ ಹಳೆಯ ಬೆಂಗಳೂರಿನ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡು ತಾವು ಏನಾದರೂ ಮಾಡುವುದಕ್ಕೆ ಹೋದರೆ, ಹೊಸ ಬೆಂಗಳೂರಿನಲ್ಲಿ ಮಾಡುವಂಥ ಒಂದು ವ್ಯವಸ್ಥೆ ಏನು ಇದೆ. ಇಲ್ಲಿರುವಂಥ ಜನಸಂಖ್ಯೆಗೂ ಕೂಡ, ಹೊಸದಾಗಿ ಬಂದಿರುವಂಥ ಜನಸಂಖ್ಯೆಗೂ ಕೂಡ, ಸಾಕಷ್ಟು ವ್ಯತ್ಯಾಸಗಳು ಇವೆ. ಈ ವ್ಯತ್ಯಾಸಗಳನ್ನು ಯಾವ ರೀತಿಯಲ್ಲಿ ಸರಿದೂಗಿಸುತ್ತೀರಿ? ನನಗೆ ಬಂದಿರುವಂಥ ಮಾಹಿತಿ ಪ್ರಕಾರ 7CMC, 2TMC, ಗಳನ್ನು ಸೇರಿಸಿಕೊಂಡು 110 ಹಳ್ಳಿಗಳನ್ನು ಇದಕ್ಕೆ ಸೇರಿಸಿಕೊಂಡಿದ್ದೀರಿ. ಈ ರೀತಿ ಸೇರಿಸಿಕೊಂಡಿರುವ ಹಳ್ಳಿಗಳಲ್ಲಿರುವಂಥ ವ್ಯವಸ್ಥೆಗಳನ್ನು ಯಾವ ರೀತಿಯಲ್ಲಿ ತಾವು ಚಿಂತನೆಯನ್ನು ಮಾಡುತ್ತೀರಿ? ಇದರ ಜೊತೆಯಲ್ಲಿ ತಾವು ಬೆಂಗಳೂರು ನಗರದಲ್ಲಿ, ತಾವು ಭೌಗೋಳಿಕವಾಗಿ ಏನಾದರೂ ಮಾಡುವಾಗ, ಬೆಂಗಳೂರು ನಗರವನ್ನು ವಿಸ್ತಾರ ಮಾಡುವಂಥ ಸಂದರ್ಭದಲ್ಲಿ, ತಾವು ತೆಗೆದುಕೊಂಡಿರುವಂಥ ತೀರ್ಮಾನವನ್ನು ಯೋಚನೆ ಮಾಡಿದಾಗ 100 ವಾರ್ಡ್‌ಗಳಿಂದ 150 ವಾರ್ಡ್‌ಗಳನ್ನು ಏನು ಮಾಡುತ್ತಿದ್ದೀರಿ. ಇವತ್ತು ನನಗೆ ಬಂದಿರುವಂಥ ಮಾಹಿತಿ ಪ್ರಕಾರ 40,000 ಅಥವಾ 50,000 ಜನಸಂಖ್ಯೆಗೆ ಅನುಗುಣವಾಗ ಒಂದು ವಿಭಾಗವನ್ನು ಮಾಡಬೇಕೆಂಬ ತೀರ್ಮಾನವನ್ನು ಮಾಡಿದ್ದೀರಿ. ತಾವು ಈ ರೀತಿ ಹೊಸ ಬೆಂಗಳೂರಿಗೆ ಏನಾದರೂ 40,000, 50,000 ಜನಸಂಖ್ಯೆಯನ್ನು ತೆಗೆದುಕೊಂಡರೆ, ಪ್ರಾಯಶಃ ಇವತ್ತು ಬೆಂಗಳೂರು 240 ಚದರ ಕಿ.ಮೀ.ಗಳಲ್ಲಿ 100 ವಾರ್ಡ್‌ಗಳನ್ನು ಮಾಡಿದ್ದೀರಿ. ಅಲ್ಲಿ ಉಳಿದಿರುವಂಥ ಇನ್ನು 500ಕ್ಕೂ ಮೇಲ್ಪಟ್ಟು ಚದರ ಕಿ.ಮೀ. ಏನು ಇದೆ. ಇದನ್ನು ಯಾವ ರೀತಿ ಮಾಡುತ್ತೀರಿ. ಅಲ್ಲಿ ಜನಸಂಖ್ಯೆ ಕಡಿಮೆ ಇರುತ್ತದೆ. ಇಲ್ಲಿ ಜನಸಂಖ್ಯೆ ಜಾಸ್ತಿ ಇದೆ. ಆದುದರಿಂದ ಇದನ್ನು ತೆಗೆದುಕೊಳ್ಳುವಾಗ, 50,000 ಜನಸಂಖ್ಯೆಯನ್ನು ತಾವು ಮಾನದಂಡವಾಗಿ ಇಟ್ಟುಕೊಂಡರೆ, ಹೊಸ ಮಹಾನಗರ ಪಾಲಿಕೆಗೆ ಮುಂದಿನ 10, 15 ವರ್ಷಗಳಲ್ಲಿ, ಅದು ಎರಡು ಲಕ್ಷ, ಮೂರು ಲಕ್ಷ,

ನಾಲ್ಕು ಲಕ್ಷ ಜನಸಂಖ್ಯೆ ಜಾಸ್ತಿಯಾಗುತ್ತದೆ. ಇದಕ್ಕೆ ಏನಾದರೂ ಒಂದು ಇತಿಮಿತಿಯನ್ನು ತಾವು ಕಾರ್ಯಕ್ರಮಗಳನ್ನು ಏನಾದರೂ ರೂಪಿಸಿಕೊಳ್ಳುತ್ತೀರಾ? ಇದರ ಜೊತೆಯಲ್ಲಿ Bangalore Metropolitan Board ಅನ್ನು ಮಾಡದೇ, ಎಲ್ಲೋ ಒಂದು ಕಡೆ ಬೆಂಗಳೂರನ್ನು BBMP ಯನ್ನು ಮಾಡಿ, ಬೆಂಗಳೂರನ್ನು ಬೃಹತ್ ಬೆಂಗಳೂರನ್ನು ಮಾಡಿ, ಈ ಮೇಯರ್‌ರವರ election ಅನ್ನು ತಾವು Mayoring Council ಮಾಡುತ್ತೀರಾ? ಇಲ್ಲ, ಈಗ ಇರುವಂಥ ವ್ಯವಸ್ಥೆಯನ್ನೆ ತಾವು ಮುಂದುವರೆಸುತ್ತೀರಾ? ಇಲ್ಲ, 20 ತಿಂಗಳುಗಳು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಇರುವ ಹಾಗೆ ಇದನ್ನು ಏನಾದರೂ ಮಾಡುತ್ತೀರಾ? ಇದರ ಬಗ್ಗೆ ಕೂಡ ತಾವು ಬೆಳಕನ್ನು ಚೆಲ್ಲಬೇಕಾಗುತ್ತದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಬೇರೆ ಬೇರೆ ನಗರಗಳಲ್ಲಿ ವಿಶೇಷವಾಗಿ ಅಹಮದಾಬಾದ್ ನಗರವಿರಬಹುದು, ಮತ್ತೆ ಇನ್ನಿತರೆ ರಾಷ್ಟ್ರಗಳಲ್ಲಿ ಇರುವಂಥ ವ್ಯವಸ್ಥೆ Mayoring Council ಅನ್ನು ಮಾಡಿ, ಮೇಯರ್‌ರವರಿಗೆ 5 ವರ್ಷಗಳ ಅಧಿಕಾರವನ್ನು ಕೊಟ್ಟು, ಆ ಮೇಯರ್‌ರವರ ಅಧಿಕಾರ ವ್ಯಾಪ್ತಿಯಲ್ಲಿ, ಬರುವಂಥ ಬೆಂಗಳೂರಿನ ಮೂಲಭೂತ ಸೌಕರ್ಯಗಳನ್ನು ನೀಡುವಂಥಾ ಸಂಸ್ಥೆಗಳಾಗಿವೆ. ಅದು BDA, BWSSB, BMRDA, KUIFCI, Slum Clearance Board, ಇವೆಲ್ಲವನ್ನು ಕೂಡ ಒಂದಕ್ಕೆ ತಂದಾಗ, ಬೆಂಗಳೂರನ್ನು ಏನಾದರೂ ಮಾಡಿ, ಜನ ಸಾಂದ್ರತೆಯ ವ್ಯವಸ್ಥೆ, ಮೂಲಭೂತ ಸೌಕರ್ಯಗಳು, ಬೇಕಾಗಿರುವಂಥಾದ್ದೆಲ್ಲವನ್ನು ನಾವು ತರಬಹುದು. ಈಗ ಇರುವಂಥಾ ವ್ಯವಸ್ಥೆಯನ್ನೆ ಮಾಡಿ, ಬೆಸ್ಕಾಂನವರು ಬೆಸ್ಕಾಂನವರ ಕೆಲಸವನ್ನು ಮಾಡುವುದು. ಜಲಮಂಡಳಿಯವರು ಜಲ ಮಂಡಳಿಯ ಕೆಲಸವನ್ನು ಮಾಡುವುದು. Housing Board ನವರು Housing Board ಕೆಲಸವನ್ನು ಮಾಡುವುದು. BMRDಯವರು ಅವರ ಕೆಲಸವನ್ನು ಮಾಡುವುದು. ಅವರವರ ಕೆಲಸವನ್ನು ಅವರವರೇ ಮಾಡಿದಾಗ, ಅದಕ್ಕೆ ಅಂಥಾ ಒಂದು ಶ್ರೇಷ್ಟತೆಯಾಗಲಿ, ನೀವು ತೆಗೆದುಕೊಂಡಿರುವಂಥಾ ಕಾರ್ಯಕ್ರಮಕ್ಕೆ, ನೀವು ತೆಗೆದುಕೊಂಡಿರುವಂಥ ತೀರ್ಮಾನಕ್ಕೆ ಬೆಂಗಳೂರು ನಗರದ ಜನರಿಗೆ ನಾವು ಏನನ್ನು ಕೊಡಬೇಕೆಂಬ ಆಲೋಚನೆ ನಿಮಗೆ ಇದೆ. ಈ ಆಲೋಚನೆಯಲ್ಲಿ ನೀವು ಸಫಲತೆಯನ್ನು ಕಾಣುವುದು ಕಷ್ಟವಾಗುತ್ತದೆ. ಇದು ಏತಕ್ಕೆ ಕಷ್ಟವಾಗುತ್ತದೆಂದರೆ, ಇವತ್ತು ಒಂದು ವರ್ಷಕ್ಕೆ ಮೇಯರ್ ಅವರ election ಅನ್ನು ಏನು ಮಾಡುತ್ತೇವೆ. ಒಂದು ವರ್ಷದಲ್ಲಿ ಏನೇನು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ದಯಮಾಡಿ

ಈ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ 5 ವರ್ಷಗಳಿಗೆ ಮಹಾ ನಗರಪಾಲಿಕೆಯ ಸದಸ್ಯರೆ, ಒಬ್ಬ ಮೇಯರ್ ಅನ್ನು ಆಯ್ಕೆ ಮಾಡುವುದಾ? ಇಲ್ಲ, Mayor in council ಮಾಡುವುದಾ? ದಯಮಾಡಿ ತಾವು ಸ್ಪಷ್ಟವಾಗಿ ತಿಳಿಸುವುದು, ಸೂಕ್ಷ್ಮವೆನ್ನುವುದನ್ನು direct election, Mayoring Council, ಆಗ ಯಾವುದೇ ಮರ್ಜಿ ಇರುವುದಿಲ್ಲ. ಇದು ಈಗಾಗಲೇ ಇದೆ, ಇದು ಮದ್ರಾಸ್‌ನಲ್ಲಿ ಇತ್ತು, ಮತ್ತೆ ಅದನ್ನು ತೆಗೆದಿದ್ದಾರೆ. ಆಂಧ್ರ ಪ್ರದೇಶದಲ್ಲಿ ಇದೆ, ವಿಜಯವಾಡದಲ್ಲಿ ಇದೆ, ಅಹಮದಬಾದ್‌ನಲ್ಲಿ ಇದೆ. ಇದನ್ನು ಮಾಡಬೇಕೆಂಬ ಬಗ್ಗೆ ತಮ್ಮ ಯೋಚನೆ ಏನು ಇದೆ. ದಯಮಾಡಿ ಇದನ್ನು ಮಾಡಿದರೆ, ತಾವು ಇತಿಹಾಸದಲ್ಲಿ ಉಳಿದುಕೊಳ್ಳುತ್ತೀರಾ? ಒಂದು ಸತ್ಯ, ತಾವು ಮೂಲಭೂತ ಸೌಕರ್ಯಗಳಿಗೆ ಯಾವ ರೀತಿ ಆದ್ಯತೆಯನ್ನು ಕೊಡುತ್ತಿರೋ ನನಗೆ ಗೊತ್ತಿಲ್ಲ. ತಾವು ಸಾಕಷ್ಟು ಹಣವನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಇವತ್ತು ಕೊಟ್ಟಿರುವಂಥಾದ್ದನ್ನು ನಾವು ಬಜೆಟ್‌ನಲ್ಲಿ ನೋಡಿದ್ದೇವೆ. ಹೋದ ಸಾರಿ ಸನ್ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರನ್ನು ಬೃಹತ್ ಬೆಂಗಳೂರು ಎಂದ ಮಾಡಬೇಕೆಂದಾಗ ನಾನು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳಿದ್ದೆ. ಇವತ್ತು ಕಾವೇರಿ ನೀರಿಗೆ ಸಮಸ್ಯೆಯಾಗಿದೆ, ತಿಪ್ಪಗೊಂಡನಹಳ್ಳಿಯಲ್ಲಿ ಪೂರ್ತಿಯಾಗಿ ನೀರಿಲ್ಲ, ಹೆಸರುಘಟ್ಟದ ಕೆರೆ ಬತ್ತಿಹೋಗಿದೆ. ಇನ್ನು ಕೇವಲ 10 ವರ್ಷಗಳಲ್ಲಿ ಬೆಂಗಳೂರು ನಗರದ ಜನಸಂಖ್ಯೆ ಒಂದೂವರೆ ಎರಡು ಕೋಟಿಯಷ್ಟಾಗುತ್ತದೆ. ಈ ಜನರ ನೀರಿನ ಬವಣೆಯನ್ನು ನೀಗಿಸತಕ್ಕಂಥಾದ್ದಕ್ಕೆ ಏನಾದರೂ ಚಿಂತನೆಯನ್ನು ಮಾಡಿರುವಿರಾ? Tribunalನ ತೀರ್ಮಾನದ ಪ್ರಕಾರ ಇನ್ನು ಕೇವಲ 6-7 T.M.C. ನೀರನ್ನು ತಾವು ಉಪಯೋಗ ಮಾಡಿಕೊಳ್ಳುವುದು ಬಿಟ್ಟರೆ ಬೇರೆ ಯಾವುದೇ ಮೂಲವಿರುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇಲಿ ತಂದಿರತಕ್ಕಂಥ Billಗೂ amenities ಗೂ ಏನೂ ಸಂಬಂಧವಿಲ್ಲ. ಆದರೂ ಕೂಡ ಈ ಸಂದರ್ಭದಲ್ಲಿ ನಾನು ನಿಮ್ಮಲ್ಲಿ ನಿವೇದನೆ, ವಿನಂತಿ ಮಾಡುವುದು ಇಷ್ಟೇ, ಬೃಹತ್ ಬೆಂಗಳೂರನ್ನು ಮಾಡುವ ಸಂದರ್ಭದಲ್ಲಿ ಬೆಂಗಳೂರಿನ ಮುಂದಿನ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಕುಡಿಯುವ ನೀರಿನ ಸಮಸ್ಯೆ ಒಂದು ಕಡೆಯಾದರೆ, ಬೃಹತ್ ಬೆಂಗಳೂರನ್ನು ಮಾಡುವಾಗ ಶಾಲಾ ಕಾಲೇಜುಗಳಿಗೆ, ಆಸ್ಪತ್ರೆಗಳಿಗೆ, ಬೇರೆ ಬೇರೆ ನಾಗರೀಕ ಸವಲತ್ತುಗಳಿಗೆ ಉಪಯೋಗಿಸತಕ್ಕಂಥಾದ್ದಕ್ಕೆ, civil amenities ಗಳಿಗೆ ತಾವು ಜಾಗಗಳನ್ನು ಎಲ್ಲಿ ಗುರುತಿಸಿದ್ದೀರಿ? ಬೃಹತ್ ಬೆಂಗಳೂರನ್ನು ತಾವು ಘೋಷಣೆ ಮಾಡಿ ಈಗಾಗಲೇ

ಮೂರು ತಿಂಗಳಾಯಿತು. ಬೆಂಗಳೂರು ನಗರದ ಸುತ್ತಮುತ್ತ ಇರತಕ್ಕಂಥ ಜಾಗಗಳೇನಿವೆ, ಅದು C.M.C.ಗಳು ಮತ್ತು T.M.C.ಗಳಲ್ಲಿರತಕ್ಕಂಥಾದ್ದು ಇರಬಹುದು ಅಥವಾ ಹಳ್ಳಿ, ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಜಾಗಗಳಿಗೆ ಏನಾದರೂ ಒಂದು ರೂಪವನ್ನು ಕೊಡಬೇಕಾಗುತ್ತದೆ. ಇದರ ಜೊತೆಗೆ, ಕೆರೆಕಟ್ಟೆಗಳು, ಸರ್ಕಾರಿ ಶಾಲೆಗಳು, ಪಶು ಚಿಕಿತ್ಸಾಲಯಗಳಂಥ ಮೂಲಭೂತ ಸೌಕರ್ಯಗಳನ್ನು ನೀಡುವಂಥ ವ್ಯವಸ್ಥೆಗೆ ನಾವು ಕಠಿಣವಾದ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಬೆಂಗಳೂರಿನ ಚಿತ್ರಣವನ್ನು ತಾವು ಇವತ್ತು ಏನು ತೆಗೆದುಕೊಂಡಿದ್ದೀರಿ, ಇನ್ನು ಹತ್ತು ವರ್ಷಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಇಲ್ಲಿನ ನಾಗರೀಕರು ಸಂಕಷ್ಟಕ್ಕೆ ಗುರಿಯಾಗುವಂಥಾದ್ದಾದರೆ ಇದನ್ನು ತಾವು ಯಾವ ರೀತಿ ಬಗೆಹರಿಸುತ್ತೀರಿ? ವಿದ್ಯುತ್ ಸರಬರಾಜಿನಲ್ಲಿ ಬೆಂಗಳೂರು ನಗರದಲ್ಲೂ ಇವತ್ತು ತೊಂದರೆಯಾಗುತ್ತಿದೆ. ಇಷ್ಟೊಂದು ದುಡ್ಡು ಬೆಂಗಳೂರನ್ನು ಮಾಡುವಾಗ ಅದಕ್ಕೆ ಬೇಕಾದ ವಿದ್ಯುತ್ತನ್ನು ಎಲ್ಲಿಂದ ತರುತ್ತೀರಿ? ಕುಡಿಯುವ ನೀರನ್ನು ಎಲ್ಲಿಂದ ತರುತ್ತೀರಿ? ಇವತ್ತು ತಿಪ್ಪಗೊಂಡನಹಳ್ಳಿಯಲ್ಲಿ ನೀರಿಲ್ಲ. ತಿಪ್ಪಗೊಂಡನಹಳ್ಳಿಗೆ ಹೇಮಾವತಿ ನದಿಯ ನೀರನ್ನು ತರುವ ಬಗ್ಗೆ ತಾವು ಏನಾದರೂ ಚಿಂತನೆಯನ್ನು ಮಾಡಿರುವಿರಾ? ಮೂಲಭೂತವಾಗಿ ಬಹಳ ಪ್ರಮುಖವಾಗಿರತಕ್ಕಂಥಾದ್ದು ಎಂದರೆ, ಈ ನಗರದ ಎಲ್ಲ ಜನರಿಗೆ ಸವಲತ್ತುಗಳನ್ನು ನೀಡತಕ್ಕಂಥಾದ್ದು, ಕುಡಿಯುವ ನೀರನ್ನು ಕೊಡತಕ್ಕಂಥಾದ್ದು ಆಗಬೇಕು. ಇದರ ಜೊತೆಗೆ ರಸ್ತೆಗಳು, ಆಟದ ಮೈದಾನಗಳು, ಶಾಲಾಕಾಲೇಜುಗಳು, ಆಸ್ಪತ್ರೆಗಳು, ಪಾರ್ಕುಗಳು ಇವೆಲ್ಲವನ್ನೂ ಕೂಡ ಅಭಿವೃದ್ಧಿ ಪಡಿಸತಕ್ಕಂಥಾದ್ದಕ್ಕೆ ನೀವು ಯಾವ ರೀತಿಯ ಚಿಂತನೆಯನ್ನು ಮಾಡಿದೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕಾಗುತ್ತದೆ. ನಾನು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದು ಇಷ್ಟೇ, ಬೃಹತ್ ಬೆಂಗಳೂರಿನ ನಿಮ್ಮ ಕನಸಿನ ಕೂಸು ಒಂದು ದೊಡ್ಡ ಹೆಮ್ಮರವಾಗಿ ಬೆಳೆಯಬೇಕಾದರೆ, ಮಹಾಪೌರರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕಾಗುತ್ತದೆ. ಇವತ್ತು ಇರತಕ್ಕಂಥ ಮೇಯರ್‌ರವರ ಕೆಲಸ ಕೇವಲ ಉತ್ಸವ ಮೂರ್ತಿಯಂತಿದ್ದು, ಒಂದು ರೂಪಾಯಿಯ ಕೆಲಸ ಮಾಡಲೂ ಅವರಿಗೆ ಅಧಿಕಾರವಿಲ್ಲ. ಕಮಿಟಿಗಳಿಗೆ ಇರತಕ್ಕಂಥ ಅಧಿಕಾರವೂ ಕೂಡ ಅವರಿಗಿಲ್ಲ. ಅದಕ್ಕಾಗಿ, ಅವರ ಸ್ವಾಯತ್ತತೆಯನ್ನು ದೃಢೀಕರಣ ಮಾಡಬೇಕಾದರೆ ನಾವು ಮೇಯರ್‌ರವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕಾಗುತ್ತದೆ. ಮೇಯರಿಂಗ್ ಕೌನ್ಸಿಲ್ ಮಾಡುವುದು ಒಳ್ಳೆಯದು. ಮೇಯರ್‌ರವರ ಅವಧಿಯನ್ನು ಐದು ವರ್ಷಗಳಿಗೆ ಹೆಚ್ಚು ಮಾಡಬೇಕಾಗುತ್ತದೆ.

140-150 ನಗರಪಾಲಿಕೆಯ ಸದಸ್ಯರಿಂದ ಮೇಯರ್‌ರವರು ಚುನಾಯಿತರಾಗಲಿ ಎಂದು ಮಾಡಿದರೆ, ಅದು ಮತ್ತೊಂದು ವಿಧಾನಸಭೆಯೇನೂ ಆಗುವುದಿಲ್ಲ. ಮಂಡಲ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ವ್ಯವಸ್ಥೆಗೆ ಬರುತ್ತದೆ. ದಯಮಾಡಿ ತಾವು ಮತ್ತೊಂದು ಸಲ ಚಿಂತನೆಯನ್ನು ಮಾಡಿ, ಯೋಚನೆಯನ್ನು ಮಾಡಿ. ಬೃಹತ್ ಬೆಂಗಳೂರಿನಲ್ಲಿ 150 ವಾರ್ಡುಗಳನ್ನು ಮಾಡುತ್ತಿದ್ದು, ಭೌಗೋಳಿಕವಾಗಿ ಯಾವುದಾದರೊಂದು ಮಾನದಂಡವನ್ನಿಟ್ಟುಕೊಂಡು, ಹಳೆಯದೊಂದು ಹೊಸದೊಂದು ಎನ್ನುವ ರೀತಿಯಾಗಿ ತೀರ್ಮಾನ ಮಾಡುವಾಗ ಯಾವ್ಯಾವುದಕ್ಕೆ ಎಷ್ಟೆಷ್ಟು ಆದ್ಯತೆ ಕೊಡಬೇಕು ಎನ್ನುವುದನ್ನು ತಾವು ಚಿಂತನೆ ಮಾಡಬೇಕಾಗುತ್ತದೆ. ಇನ್ನೊಂದು 15-20 ದಿವಸಗಳಲ್ಲಿ ತಾವು ಬೆಂಗಳೂರಿನ ಎಲ್ಲ ಜನಪ್ರತಿನಿಧಿಗಳನ್ನು ಕರೆದು ಇದರ ಬಗ್ಗೆ ಬೆಳಕನ್ನು ಚೆಲ್ಲತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಖ್ಯವಾಗಿ, ಮೇಯರಿಂಗ್ ಕೌನ್ಸಿಲ್ ಮಾಡಬೇಕು, ಮೇಯರ್‌ರವರ ಅವಧಿ 5 ವರ್ಷಗಳಾಗಬೇಕು, ಮೇಯರ್‌ರವರಿಗೆ ಹೆಚ್ಚಿನ ಅಧಿಕಾರವನ್ನು ಕಾನೂನಿನ ಚೌಕಟ್ಟಿನಲ್ಲಿ ನೀಡತಕ್ಕಂಥ ಕೆಲಸವನ್ನು ಮಾಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳೇ ಬೆಂಗಳೂರು ನಗರದ ಸಚಿವರಾಗಿರುವುದರಿಂದ ಅದಕ್ಕೆ ಹೆಚ್ಚು ಒತ್ತನ್ನು ಕೊಡಬೇಕು ಎಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ (ವರ್ತೂರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಬೃಹತ್ ಬೆಂಗಳೂರು ವಿಚಾರದಲ್ಲಿ ಒಂದು ಸಭೆಯನ್ನು ಕರೆದಿದ್ದರು. ಆ ಸಭೆ ಮಧ್ಯಾಹ್ನ ಒಂದೂವರೆ ಗಂಟೆ, ಎರಡು ಗಂಟೆಗೆ ಕೊನೆಯಾಯಿತು. ರಾತ್ರಿ cabinet ನಲ್ಲಿ ಇಟ್ಟು ಇದನ್ನು pass ಮಾಡಿಕೊಂಡರು. ಆ ಸಭೆಯಲ್ಲಿ ಬೆಂಗಳೂರಿನ ಎಲ್ಲ ಶಾಸನಸಭೆಯ ಸದಸ್ಯರು, ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು ಎಲ್ಲರೂ ಇದ್ದರು. ನಾವು ಬೆಂಗಳೂರಿನ ಹಿತದೃಷ್ಟಿಯಿಂದ ಕೆಲವು ಸಲಹೆಗಳನ್ನು ಅವರ ಮುಂದೆ ಇಟ್ಟೆವು. ಆಡಳಿತದ ದೃಷ್ಟಿಯಿಂದ, ಅಭಿವೃದ್ಧಿಯ ದೃಷ್ಟಿಯಿಂದ ಇದನ್ನು ಎರಡು ಮಹಾನಗರ ಪಾಲಿಕೆಗಳನ್ನಾಗಿ ಮಾಡಬೇಕು ಎಂದು ಹೇಳಿದೆವು. ಅವರು ಅದನ್ನೇನೂ ಲೆಕ್ಕಿಸಲಿಲ್ಲ. ಆಯಿತು, ಅದು Chief Minister prerogative, Government prerogative. ಮುಂದೆ ಏನಾಯಿತೆಂದರೆ ಇವರು ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ಧೂಳೀಪಟ ಮಾಡಿದರು. ಬೆಂಗಳೂರಿನಲ್ಲಿ ಇಷ್ಟು ಜನ M.L.A.s, M.P.s. ಇದ್ದಾರೆ, ಅವರನ್ನು ಕರೆದು ಬೆಂಗಳೂರು ಹೇಗಿರಬೇಕು

ಎಂದು ಕೇಳುವಂಥ ಒಂದು courtesym, etiquette ಇಲ್ಲದಂಥ ಸರ್ಕಾರ ಇದು. ಇವತ್ತು ಅದರ ಬಜೆಟ್ ಅನ್ನು present ಮಾಡಿದ್ದಾರೆ. ಇದರಲ್ಲಿ ಜನರಿಗೆ ಉಪಯೋಗವಾಗುವಂಥ ವಿಚಾರಗಳಾಗಲೀ ಅಥವಾ ಬೆಂಗಳೂರಿನಲ್ಲಿರುವಂಥ ಸಮಸ್ಯೆಗಳ ಬಗ್ಗೆಯಾಗಲೀ ಇಲ್ಲ. ಮುಂದೆ ನಮ್ಮ ಯೋಜನೆಗಳು ಹೇಗಿರಬೇಕು ಎನ್ನುವುದನ್ನು ಇದರಲ್ಲಿ ತರಲಿಕ್ಕೆ ಅಧಿಕಾರಿಗಳು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಈಗಾಗಲೇ ಮೂರು ತಿಂಗಳು ಕಳೆದಿದೆ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಸ್ಥಿತಿ ಏನಿದೆ, ಅದೇ ಪರಿಸ್ಥಿತಿ ಕೂಡ ಇಲ್ಲಿಯೂ ಇದೆ. ಆದರೆ ಅದಕ್ಕಾಗಿ ಇವರು ಕೊಟ್ಟಿರುವುದೇನು? ಮೂರು ತಿಂಗಳಿಗೆ ಐದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಏಕೆ ಇವರು ಈ ಕೆಲಸವನ್ನು ಮಾಡಬೇಕಾಗಿತ್ತು? ಸಂಬಂಧಪಟ್ಟಂಥ administrative measures, financial resources, ಅದರ ಮೇಲ್ಪಟ್ಟು posting of officers ಇವುಗಳ್ಯಾವುದನ್ನೂ ಮಾಡದೇ ಮಾನ್ಯ ಮುಖ್ಯಮಂತ್ರಿಗಳು ಬೃಹತ್ ಬೆಂಗಳೂರು ಎಂದು announce ಮಾಡಿಬಿಟ್ಟರು. ಕುಡಿಯುವ ನೀರಿಗಾಗಿ ಮೂರು ತಿಂಗಳಿಂದ ಐದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ನಾನು ಹೇಳಿರುವುದಲ್ಲ. ಅವರೇ ಹೇಳಿದ್ದಾರೆ. ಏನೆಂದು ಹೇಳಿದ್ದಾರೆ, ಎಂದರೆ,

> "ಲೈನುಗಳ ವಿಸ್ತರಣೆ, ಬೋರ್‌ವೆಲ್ಲುಗಳ ಮೂಲಕ ನಾಗರೀಕರಿಗೆ ಕುಡಿಯುವ ನೀರು, ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಿಗೂ ಒದಗಿಸಬೇಕಾದುದು ಬೃಹತ್ ಬೆಂಗಳೂರಿನ ಮಹಾನಗರಪಾಲಿಕೆಯ ಜವಾಬ್ದಾರಿಯಾಗಿರುತ್ತದೆ. ಈ ಪ್ರದೇಶಗಳಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ನೆರವಾಗುವಂತೆ ಐದು ಕೋಟಿ ರೂಪಾಯಿಗಳನ್ನು ಪ್ರಸಕ್ತ ಸಾಲಿಗೆ ಬಿಡುಗಡೆ ಮಾಡಿರುವ ಘನ ಸರ್ಕಾರದ ಪ್ರೋತ್ಸಾಹಕ್ಕೆ ಧನ್ಯವಾದಗಳನ್ನು ಸಮರ್ಪಿಸುತ್ತೇವೆ"

ಇಲ್ಲಿ Deputy Chief Minister 8 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ, ಇದುವರೆಗೂ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಇವರು take over ಮಾಡುವ ಕಾಲಕ್ಕೆ 30-40 ಕೋಟಿ ರೂಪಾಯಿಗಳು ನಮ್ಮ Municipality ಗಳಲ್ಲಿ Bank account ನಲ್ಲಿತ್ತು. ಅದನ್ನೂ ಖರ್ಚು ಮಾಡಲಿಕ್ಕೆ ಕೊಡಲಿಲ್ಲ. ಇವತ್ತು ಲಕ್ಷೋಪಲಕ್ಷ ಜನ ಕುಡಿಯುವ ನೀರಿಗಾಗಿ ಹಾಹಾಕಾರ ಮಾಡುತ್ತಿದ್ದಾರೆ. ರಸ್ತೆಗಳ ರಿಪೇರಿಯಿಲ್ಲ, ಮನುಷ್ಯರಿಗೆ ಬೇಕಾದಂಥ ಇತರ ನಾಗರೀಕ

ಸೌಲಭ್ಯಗಳ ಕಡೆಗೆ ಗಮನ ಕೊಡುವಂಥ ಅಧಿಕಾರಿಗಳಿಲ್ಲ. ಜನರ ಹಿತದೃಷ್ಟಿಯಿಂದ ನಾನು Corporation office ಗೆ ಒಂದು ನೂರು ಸಾರಿ ಹೋಗಿದ್ದೇನೆ. ಇವರ ಆಡಳಿತ ಏನು ಮಾಡುತ್ತಿದೆ? ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲಿರುವುದರಿಂದ, ಇದರಲ್ಲಿ ತಂದಿರುವಂಥ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. Major tanks ವಿಚಾರದಲ್ಲಿ ಏನೇನು ಕಾರ್ಯಕ್ರಮವನ್ನು ಮಾಡುತ್ತೇವೆ, ಅದಕ್ಕೆ ಎಷ್ಟು ದುಡ್ಡು ಖರ್ಚು ಮಾಡಲಾಗುವುದು ಎನ್ನುವುದನ್ನು ಇವರು ಹೇಳಿಲ್ಲ. De-silting of tanks ವಿಚಾರವನ್ನು ಹೇಳುವುದಾದರೆ, ಬೆಂಗಳೂರಿನ ಸುತ್ತಮುತ್ತ ಇರುವಂಥ ಎಲ್ಲ ಕರೆಗಳು ಮುಚ್ಚಿಹೋದವು. ಹಾಗಾಗಿ ಇವತ್ತು ಇಲ್ಲಿ ಖಾಯಿಲೆಗಳು ಜಾಸ್ತಿಯಾಗಿವೆ. ಕುಡಿಯುವ ನೀರಿನ ಬೋರ್‌ವೆಲ್‌ಗಳ water table level ಪರಿಪೂರ್ಣವಾಗಿ ಹೋಗಿಬಿಟ್ಟಿದೆ. ಇವತ್ತು ನಾವು ಒಂದು ಸಾವಿರ ಅಡಿ drill ಮಾಡಿದರೂ ಕೂಡ ನೀರು ಸಿಗುವಂಥ ಪರಿಸ್ಥಿತಿ ಇಲ್ಲ. ಹೀಗಿರುವಾಗ de-silting ವಿಚಾರದಲ್ಲಿ ಇವರಿಗೆ ಒಂದು vision ಇಲ್ಲ. ಇರುವಂಥ ಕೆರೆಗಳನ್ನಾದರೂ ಉಳಿಸಿಕೊಳ್ಳಲು ನೀವು ಮುಂದಾಗಬೇಕಲ್ಲವೇ. ಅವುಗಳನ್ನು ರಿಪೇರಿ ಮಾಡಲಿಕ್ಕೆ, ಹೂಳು ತೆಗೆಸಲಿಕ್ಕೆ, ಅಲ್ಲಿ ತುಂಬಿಕೊಂಡಿರುವ ಕೊಳಚೆ ನೀರನ್ನು ಹೊರಗೆ ಹಾಕುವುದನ್ನಾದರೂ ಮಾಡಬೇಕಲ್ಲವೇ? ಅದನ್ನೂ ಮಾಡಲಿಲ್ಲವಲ್ಲ. ಈಗಾಗಲೇ ನಾವು ಕೆರೆಗಳನ್ನು ಕಳೆದುಕೊಂಡಿದ್ದೇವೆ. ಈಗಿರುವುದನ್ನೂ ಕಳೆದುಕೊಳ್ಳೋಣವೇನು? ಶಾಲಾಕಾಲೇಜುಗಳು, ಪ್ರೈಮರಿ ಶಾಲೆಗಳು, ಅಂಗನವಾಡಿಗಳು, 111 ಗ್ರಾಮಗಳು 7 C.M.C. ಮತ್ತು 1 T.M.C. ಪ್ರದೇಶದಲ್ಲಿದ್ದು ಮುಂದೆ ಅವರ ಬದುಕೇನು ಎನ್ನುವ ಬಗ್ಗೆ ಏನೂ ಪ್ರಸ್ತಾಪವಿಲ್ಲ. ಮೂಲಭೂತ ಸೌಕರ್ಯಗಳಾದ water, light, toilets ಅವುಗಳ ಬಗ್ಗೆ ಇವರೇನು ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಹಾಕಿಕೊಂಡಿಲ್ಲ. ಕೊಟ್ಟಂಥ ಸಂದರ್ಭದಲ್ಲಿ, ಯಾವ್ಯಾವ ಪ್ರದೇಶದಲ್ಲಿ population ಏನಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಇವರು ಯೋಜನೆಗಳನ್ನು ಕೊಟ್ಟಿಲ್ಲ. ಪೂರ್ತಿ neglect ಮಾಡಿಬಿಟ್ಟಿದ್ದಾರೆ. 150 ಮಾಡಬೇಕೋ ಅಥವಾ 200 ಮಾಡಬೇಕೋ ಆ ವಿಚಾರಕ್ಕೆ ನಾನು ಬರುವುದೇ ಇಲ್ಲ. ಏನೂ ಏರ್ಪಾಟುಗಳು ಇಲ್ಲದೆಯೇ, ಯಾವ ಯೋಜನೆಗಳು Greater Bangalore ಎಂದು ತರಾತುರಿಯಲ್ಲಿ declare ಮಾಡಿ ಜಾರಿ ಮಾಡಿದರೆ, ಈಗ ನಮ್ಮ ಪರಿಸ್ಥಿತಿ ಏನು? ನಮ್ಮ ಹತ್ತಿರ ಹಣ ಇತ್ತು. ನಮ್ಮ ಹತ್ತಿರ financial resources ಚೆನ್ನಾಗಿ ಇತ್ತು. ಈಗ CMCಗಳ ಹಣವನ್ನೇ ತೆಗೆದುಕೊಂಡು ನಂತರ ಹಣವನ್ನೇ ಬಿಡುಗಡೆ ಮಾಡಲಿಲ್ಲ.

ಇದರಿಂದ, ಕಾಲಕಾಲಕ್ಕೆ ಆಗಬೇಕಾಗಿದ್ದಂಥ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಆ 25-30 ಕೋಟಿ ರೂಪಾಯಿ ಏನಿತ್ತು, ಅದನ್ನಾದರೂ ಕಾಮಗಾರಿಗಳಿಗೆ, ನೀರಿಗೆ, light ಗೆ, ಹೀಗೆ ಬೇರೆ ಬೇರೆ ವಿಚಾರಗಳಿಗೆ ಇವರು ಬಿಡುಗಡೆ ಮಾಡಲಿಲ್ಲವೇಕೆ? ಮೇ 23ನೇ ತಾರೀಖು ಎಲ್ಲಾ ಶಾಲಾ ಕಾಲೇಜುಗಳು ಪ್ರಾರಂಭವಾಗುತ್ತವೆ. ಒಂದೊಂದು ಕಡೆ 4-4, 5-5, 10-10 class room ಗಳ demand ಇದೆ. ಈ ಕಡೆ ಆ demand vs.supply ಗೆ ತಕ್ಕಂತೆ State Government Fund ನಿಂದಲೂ ಹಣ ಬರುವ ಹಾಗಿಲ್ಲ, ಇವರು ಕೂಡ ಈ ಯೋಜನೆಗಳಲ್ಲಿ ಏನೂ ಚಕಾರವೆತ್ತಿಲ್ಲ. ಇನ್ನು ಕೃಷ್ಣರಾಜಪುರ ಮತ್ತು ಮಹದೇವಪುರ ಎಂಬ ಎರಡು ನಗರಸಭೆಗಳಿದ್ದವು. Zonal office ಮಾಡುವಾಗ ತಾಲ್ಲೂಕು Headquarters ಎಂದು ಕೃಷ್ಣರಾಜಪುರ ನಗರಸಭೆಯನ್ನು ಬಿಟ್ಟುಬಿಟ್ಟರು. Whitefield ರಸ್ತೆಯಲ್ಲಿ ಮಹದೇವಪುರ ಎಂದು ಒಂದು CMC ಇದ್ದುದನ್ನು Headquarters ಎಂದು ಮಾಡಿದ್ದಾರೆ. ಈ ಸರ್ಕಾರದ ಆಡಳಿತದಲ್ಲಿ ಯಾವುದಕ್ಕೆ ಬೆಲೆ ಕೊಡುತ್ತಿದ್ದಾರೆ? Taluk Headquarters ಎಂದು ಮಾಡಬೇಕಾಗಿದ್ದ ಕೃಷ್ಣರಾಜಪುರದಲ್ಲಿ ಸರ್ಕಾರದ 34 ಸರ್ಕಾರಿ ಕಛೇರಿಗಳು ಅಲ್ಲಿಯೇ ಇವೆ. Hundred bed hospital ಇದೆ. Police station ಇದೆ, Government First Grade College ಇದೆ, National Highway ಇದೆ, ಈ ಎಲ್ಲಾ ಸೌಲಭ್ಯಗಳು ಇದ್ದರೂ ಸಹ ಆ ಜಾಗವನ್ನು neglect ಮಾಡಿ ಸರ್ಕಾರ ಮಹದೇವಪುರ ನಗರ ಸಭೆಯನ್ನು declare ಮಾಡಿದೆ. ಇದನ್ನು ಮಾಡುವಾಗ ಇವರು ಯಾರನ್ನು consult ಮಾಡಿದ್ದಾರೆ. ಈ ಸರ್ಕಾರ ಇಚ್ಛಾನುಸಾರ, ಸ್ವೇಚ್ಛಾನುಸಾರ ತೀರ್ಮಾನ ಮಾಡುವುದು ಸರಿಯೇ? ಸರ್ಕಾರ ಶಾಶ್ವತ. ಆದರೆ, ಆ ಕುರ್ಚಿಗಳ ಮೇಲೆ ಕುಳಿತುಕೊಳ್ಳುವವರು ಯಾರೂ ಶಾಶ್ವತವಲ್ಲ. ಹಾಗೆಯೇ, ಬ್ಯಾಟರಾಯನಪುರದಲ್ಲಿ ಏರುಪೇರು ಮಾಡಿ anomaly ಮಾಡಿ agitations ಮಾಡುತ್ತಿದ್ದಾರೆ. ನಾನು agitation ಮಾಡಲಿಕ್ಕೆ ಹೋಗಲಿಲ್ಲ. ಏತಕ್ಕೆಂದರೆ, ಜನರಿಗೆ ಗೊತ್ತಾಗಲಿ. ನಿಮ್ಮ ಆಡಳಿತ, ನಿಮ್ಮ ಅಧಿಕಾರಿಗಳು ನಿಮ್ಮ ದುರ್ಬಳಕೆ, ಪ್ರಜಾಪ್ರಭುತ್ವದ ಮೌಲ್ಯಗಳು, ಎಷ್ಟರ ಮಟ್ಟಿಗೆ ನೀವು ಕಾಪಾಡಿಕೊಂಡು ಬಂದಿದ್ದೀರೆಂದು ಜನರು ತೀರ್ಮಾನ ಮಾಡಲಿ. ನಾನೇಕೆ agitation ಮಾಡಬೇಕು? ನಾನು agitation ಮಾಡುವುದಿಲ್ಲ. ಇವರು ಪ್ರಜಾಪ್ರಭುತ್ವದಲ್ಲಿ ಬಹಳ ನಂಬಿಕೆ ಇರುವವರು. Public sentiments, opinion ಏನಿದೆ, ಆ taluk headquarters ಅನ್ನು

ಬಿಟ್ಟು ಇವರುಬೇರೆ ಇನ್ನೊಂದು ಬೀದಿಯಲ್ಲಿ ಹೋಗಿ zonal office ಮಾಡುತ್ತಾರೆ. ಈಗ ಈ taluk officeನ ಮಟ್ಟದಲ್ಲಿರುವಂಥ 33 ಕಛೇರಿಗಳಿಗೆ ಬರುವವರು, Sub-Registrar office ಗಳಿಗೆ ಬರುವವರು ಇವರೆಲ್ಲರೂ ಕೂಡ ಅಲ್ಲಿಗೆ ಬರಬೇಕು. ಕಾಲೇಜಿಗೆ ಬರುವವನು ಕೆಲಸ attend ಮಾಡಿಕೊಂಡು ಹೋಗುತ್ತಿದ್ದ. Hospital ಗೆ ಬರುವವನು ಎಲ್ಲ ಕೆಲಸ ಮುಗಿಸಿಕೊಂಡು ಹೋಗುತ್ತಿದ್ದ. ಈಗ ಅದನ್ನೆಲ್ಲ ತಪ್ಪಿಸಿ ಅದೇ ಒಂದು ಪ್ರಪಂಚ ಮಾಡಿಕೊಂಡರು, ಇದೇ ಒಂದು ಪ್ರಪಂಚ ಮಾಡಿಕೊಂಡರು. Sub-Registrar office ಅನ್ನು notification ಮಾಡಿದ್ದಾರೆ. ಈ ಸರ್ಕಾರಕ್ಕೆ ಅದರ ಮೇಲೆ ಯಾವ control ಸಹ ಇಲ್ಲ. ಇಟ್ಟುಕೊಂಡು ನೀವು Sub-Registrar office ಗಳನ್ನು ಯಾವ norms ಮೇಲೆ open ಮಾಡಿದಿರಿ? Notification ನಲ್ಲಿ ಮಹದೇವಪುರ ಎಂದು ಹಾಕುತ್ತೀರಿ. Office ಅನ್ನು ತೆಗೆದುಕೊಂಡು ಹೋಗಿ Whitefield ನಲ್ಲಿ ಹಾಕುತ್ತೀರಿ. ಈ ಸರ್ಕಾರದಲ್ಲಿ ಏನಾದರೂ sanctity ಇದೆಯೇ? ಯಾವುದಕ್ಕಾದರೂ ಗೌರವ ಇದೆಯೇ? ಇಲ್ಲ. ನೀವು ಹೇಗಾದರೂ ಮಾಡಿಕೊಳ್ಳಿ. ಅಂತೂ ಈ ಮನೆ ಮುಖಾಂತರ ಈ ನಾಲ್ಕು ಮಾತುಗಳನ್ನು ಹೇಳಬೇಕೆಂದು ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದುಕೊಂಡು ನಿಂತಿದ್ದೇನೆ. ನನ್ನ ಅದೃಷ್ಟ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಿದ್ದಾರೆ. ಆದಷ್ಟು ಬೇಗ ಮಾತನಾಡಿ ಮುಗಿಸುತ್ತೇನೆ. ಬೃಹತ್ ಬೆಂಗಳೂರು ಬಗ್ಗೆ ಬೃಹತ್ತಾಗಿ ಮಾತನಾಡಬೇಕಲ್ಲವೆ? ಅಂತರರಾಷ್ಟ್ರೀಯ ಕಂಪನಿಗಳು ಆ ಪ್ರದೇಶದಲ್ಲಿವೆ. ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ, 4 ತಿಂಗಳ ಹಿಂದೆ notification ಮಾಡಿದಾಗ ಅಲ್ಲಿ light ಗಳು ಹೋಗಿದ್ದವು. ಆ Industrial Development Area, Technological Park, ಆ area ಕ್ಕೆ CM ಕೂಡ 2-4 ಸಲ ಬೇರೆ ಬೇರೆ ಯಾವುದೋ development work ಗೆ ಬಂದಿದ್ದರು. ಕಳೆದ ವಾರದಲ್ಲಿ ಸಹ ಅವರು ಅಲ್ಲಿಗೆ ಹೋಗಬೇಕಾಗಿತ್ತು. ಅವರು ಹೋದರೋ ಇಲ್ಲವೋ ಗೊತ್ತಾಗಲಿಲ್ಲ. ಇವತ್ತಿನವರೆಗೂ ಅಲ್ಲಿ street lights ಇಲ್ಲ. ಈ Technology Park ಗಳಲ್ಲಿ ಕೆಲಸ ಮಾಡುವವರಿಗೆಲ್ಲ safety ಇಲ್ಲ,. ರಾತ್ರಿ ಮಾತ್ರ ಅಲ್ಲ; ಹಗಲು ದರೋಡೆ ಮಾಡುತ್ತಿದ್ದಾರೆ. ಇವರ ಆಡಳಿತದವರಿಗೆ ಕಳೆದ 4 ತಿಂಗಳಿಂದ ಹೇಳುತ್ತಿದ್ದೇವೆ. Industrial Development Board ನವರು ಅದು ನಮ್ಮ ಕೆಲಸ ನಾವು ಮಾಡುತ್ತೇವೆಂದು ಹೇಳಿದರು, ಆದರೆ ಮಾಡಲಿಲ್ಲ. Corporation Zonal

Office ಎಂದು ಈಗೇನು create ಮಾಡಿದ್ದಾರೆ, ಇವರು "ಇದು ನಮಗೆ ಬರುವುದಿಲ್ಲ, ಈ ಮಗು ಅವರದು, ಅವರು ಪೋಷಣೆ ಮಾಡಬೇಕು, ಅವರು ಸರಿ ಮಾಡಬೇಕೆಂದು" ಹೇಳುತ್ತಾರೆ. ಈ ಪರಿಸ್ಥಿತಿಯಲ್ಲಿ ಆಕಾಶಕ್ಕೂ ಭೂಮಿಗೂ ಮಧ್ಯದಲ್ಲಿ ನಮ್ಮ ಬದುಕು ಹಾರಾಡುತ್ತಿದೆ. ಇನ್ನು 741 Sq.k.m. ಪ್ರದೇಶವನ್ನು ಸರ್ಕಾರದ ಮಡಿಲಿಗೆ ಹಾಕಿಕೊಂಡಿದ್ದಾರೆ. ಆದರೆ, ಆ 741 sq.k.m. ಗಳಲ್ಲಿ ಯುವಕರಿಗೆ ಬೇಕಾದಂಥ ವಿಚಾರ, ಕುಡಿಯುವ ನೀರಿನ ವಿಚಾರ, ದಾರಿದೀಪಗಳ ವಿಚಾರ, stadium ಗಳ ವಿಚಾರ, ಶಾಲಾಕಾಲೇಜುಗಳ ವಿಚಾರ, ಕಟ್ಟಡಗಳ ವಿಚಾರ, ಮೂಲಭೂತ ಸೌಕರ್ಯಗಳ ವಿಚಾರ, ಇವು ಯಾವುದಕ್ಕೂ ಇವರು ನಾಲ್ಕಾಣೆ ಸಹ allot ಮಾಡಲಿಲ್ಲ. ಈ ಪರಿಸ್ಥಿತಿಯಲ್ಲಿ ಇವರು Greater Bangalore ಮಾಡಲಿಕ್ಕೆ ಹೊರಟಿದ್ದಾರೆ. ಮಳೆ ಇಲ್ಲದೇ ಈ ಪ್ರಕೃತಿ ನಮಗೆ ಶಾಪ ಹಾಕಿದೆ. ಈಗ ಆಜುಬಾಜು ಇದ್ದ ಕೆರೆಗಳು ಎಲ್ಲ ಒಣಗಿಹೋಗಿವೆ ಎಂದು ಮಾನ್ಯ ಸೋಮಣ್ಣನವರು ಹೇಳಿದರು. ತಿಪ್ಪಗೊಂಡನಹಳ್ಳಿಯಲ್ಲಿ work ಮಾಡುತ್ತಿದ್ದ 7 pumb set ಗಳಲ್ಲಿ ಈಗ ಅದು Zero ಗೆ ಬಂದಿವೆ. ಇಂಥ ಕಠಿಣವಾದ ಪರಿಸ್ಥಿತಿಯಲ್ಲಿ ಇವರ ಆಡಳಿತಕ್ಕೆ ಕಣ್ಣಿಲ್ಲ, vision ಇಲ್ಲವೆಂದು ಏಕೆ ಹೇಳುತ್ತಿದ್ದೇನೆಂದರೆ, ಬೆಳ್ಳಂದೂರು ಮತ್ತು ವರ್ತೂರು ಈ 2 major tanks, 60 TMC ನೀರು ಇವತ್ತು ತಮಿಳುನಾಡಿಗೆ ಹರಿದುಹೋಗುತ್ತಿದೆ. "ನೋಡಿಯಪ್ಪಾ, ನೀರಿಗೆ ಬಹಳ ಅಭಾವ ಬಂದಿದೆ. ದಯಮಾರಿ re-cycling along with treatment plant ಹಾಕಿ, ಬೆಂಗಳೂರಿನ eastern portion ಇದೆ, ಎಲ್ಲಾ parkಗಳಿಗೆ ಎಲ್ಲೆಲ್ಲಿ ನಮ್ಮದು circles ಇವೆ, ಇನ್ನೇನು ಬೇರೆಯುವುಗಳಿವೆ, ಕುಡಿಯುವ ನೀರು ಬಿಟ್ಟು ಅವುಗಳಿಗೆಲ್ಲದಕ್ಕೂ ಉಪಯೋಗಿಸಿಕೊಳ್ಳಬಹುದು" ಎಂದು ಅವರ Administrator ಗೆ ನಾನು ಕಾಗದ ಬರೆದೆ. ಬಜೆಟ್ ಮಂಡನೆ ಮಾಡುವ ಸಮಯಕ್ಕೆ ಈ ಒಂದು project ಅನ್ನು ನೀವು special ಆಗಿ ಮಾಡಬೇಕು. Even Chief Minister ರವರ ಗಮನಕ್ಕೆ ಹೋದರೂ ಕೂಡ ಮಾಡಬೇಕೆಂದು ಹೇಳಿದರು ಮತ್ತು ಅದನ್ನು appreciate ಮಾಡಿದರು. ಆದರೆ, ಅದರ ಬಗ್ಗೆ ಒಂದು ಮಾತು ಸಹ ಬಜೆಟ್‌ನಲ್ಲಿ ಹೇಳಲಿಲ್ಲ. ನೀರಿಗೆ ಈಗ ಹಾಹಾಕಾರ ಆಗಿದೆ. Greenery ಹೋಗುತ್ತಿದೆ. ಮಳೆ ಬರುತ್ತಿಲ್ಲ. ಕಾವೇರಿ ನೀರು ತಲುಪುತ್ತಿಲ್ಲ. ಎರಡು CMC ಗಳಿಂದ ಸುಮಾರು 100 ಕೋಟಿ ರೂಪಾಯಿ ಕಾವೇರಿ ನೀರಿಗೆಂದು ನಾವು ದುಡ್ಡು ಕಟ್ಟಿದ್ದೇವೆ. ಇವರು ಎರಡು ಸಲ, ಮೂರು ಸಲ time bound

programme ಹಾಕಿದರು. ಆದರೆ, ಇವತ್ತಿನ ವರೆಗೂ ನೀವು ನೀರು ಕೊಡಲಿಲ್ಲ. Borewell ಗಳನ್ನು ಕೊಡುವುದಿಲ್ಲ, mini tank ಗಳಿಗೆ ಕೊಡುವುದಿಲ್ಲ, ಕಾವೇರಿ ನೀರಿನ ಬಗ್ಗೆ ಈ ಬಜೆಟ್‌ನಲ್ಲಿ ಚಕಾರವೆತ್ತಲಿಲ್ಲ. ನಾವು ಇಷ್ಟು ದಿವಸದೊಳಗಾಗಿ ಖಾತ್ರಿ ಮಾಡಿದ್ದೇವೆ, BWSSB ಗೆ ಖಾತ್ರಿ ಮಾಡಿ ಇಷ್ಟು ದಿವಸಗಳೊಳಗಾಗಿ ಈ 7 CMC, TMC ಗಳಿಗೆ ಹಿಂದೆ ಸರ್ಕಾರ ಏನು approval ಕೊಟ್ಟಿತ್ತು, notification ಮಾಡಿತ್ತು, pipeline work ಮುಗಿದಿತ್ತು, treatment plant ಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೆವು. Treatment plant ಗಳೆಲ್ಲ ಇವತ್ತು ಮುರಿದುಬಿದ್ದುಕೊಂಡು, ತುಕ್ಕು ಹಿಡಿದುಕೊಂಡು, ಅಲ್ಲಿ ಬಾಗಿಲು ಹಾಕಿದ್ದು ಆ ಬಾಗಿಲು ತೆಗೆಯಲಿಲ್ಲ. ಈ ಸರ್ಕಾರಕ್ಕೇನಾದರೂ ಜವಾಬ್ದಾರಿ ಇದೆಯೇ? Treatment plants in and around Bangalore ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇವರಿಗೆ vision ಇಲ್ಲವೆನ್ನುವುದಕ್ಕೆ ಇನ್ನೊಂದು ಮಾತು ಹೇಳುತ್ತೇನೆ. ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ limits ಏನಿತ್ತೋ ಅದಕ್ಕೆ ತಕ್ಕ ಹಾಗೆ ಇವರೇನು ಮಾಡಿದ್ದಾರೆಂದರೆ, treatment plant ಅನ್ನು ಬೆಂಗಳೂರು ಸುತ್ತ ಹಾಕಿದರು. ನೂರಾರು ಕೋಟಿ ರೂಪಾಯಿಗಳಷ್ಟು public ದುಡ್ಡನ್ನು ಖರ್ಚು ಮಾಡಿದ್ದಾರೆ. ಈ Greater Bangalore ಮಾಡುವುದರ ಮೂಲಕ 741 Sq.k.m.ಗೆ ಹೋದ ಮೇಲೆ ಇವತ್ತಿನವರೆಗೂ ಇವರಿಗೆ realization ಆಗಿಲ್ಲ. ಯಾವುದರ ಬಗ್ಗೆ ಎಂದರೆ, ಈ treatment plant ಹಳೆಯ area ಗಳಿಗೆ ಏನು fix ಮಾಡಿದ್ದೇವೆ ಅದನ್ನು ಮಾಡಿದರೆ technical ಆಗಿ viable ಅಲ್ಲ, ಜನಗಳಿಗೋಸ್ಕರ ಇದನ್ನು implementation ಮಾಡುವುದಕ್ಕಾಗುವುದಿಲ್ಲ, ಅದಕ್ಕಾಗಿ ಇವತ್ತು outer area ಎಲ್ಲಿದೆ, ಈ ಬೆಂಗಳೂರು ಹೊಸ ಪ್ರಾಂತ್ಯಗಳಲ್ಲಿ ಜಾಗಗಳನ್ನು ಗುರುತು ಮಾಡಿ treatment plant ಅನ್ನು ಹಾಕಬೇಕು. ಈ ಹಣ ಸಾರ್ವಜನಿಕರ ಹಣವಾಗಿದ್ದು ಅದು ಪೋಲಾಗಬಾರದು ಎನ್ನುವ ಬಗ್ಗೆ ಇವರು ಇವತ್ತಿನವರೆಗೆ ತಲೆ ಉಪಯೋಗಿಸಿಲ್ಲ. ನಾನು ಹೋಗಿ "ಅನ್ಯಾಯವಾಗಿ public ದುಡ್ಡು ಹೋಗುತ್ತದೆ, ದಯಮಾಡಿ ನೀವು start ಮಾಡಿ, start ಮಾಡಿ outside points, ಹೊಸ ಎಲ್ಲೆಗಳನ್ನು ಏನು ಗುರುತು ಮಾಡಿದ್ದಾರೆ, ಆ ಎಲ್ಲೆಗಳ 10–15 ಕಿ.ಮೀ ದೂರದಲ್ಲಿ ನೀವು treatment plant ಅನ್ನು ಹಾಕದಿದ್ದರೆ ಈ ಸಾವಿರಾರು ಕೋಟಿ ರೂಪಾಯಿ public ದುಡ್ಡು ಹೋಗುತ್ತದೆಂದು" ಆ chairman ಗೆ ಹೇಳಿ ಬಂದಿದ್ದೇನೆ. ಆದರೆ, ಇವತ್ತಿನವರೆಗೆ ಈ ಬಗ್ಗೆ ಚಕಾರವಿಲ್ಲ.

ಇವರು ಏನು ಸರ್ಕಾರ ನಡೆಸುತ್ತಾರೆ? ಯಾರಿಗಾಗಿ ಸರ್ಕಾರ ನಡೆಸುತ್ತಾರೆ? ಈ ಆಡಳಿತದಲ್ಲಿ ಇವರು ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ. ಇವರ ಆಡಳಿತ ಹೇಗಿದೆ ಎಂದರೆ, ನೀವೆಲ್ಲ ನಮ್ಮ ಮಕ್ಕಳೆಂದು declare ಮಾಡಿಬಿಟ್ಟರು. ಈ ಯೋಜನೆಗಳಿಗೆ ಮಂಜೂರಾತಿ ಕೊಡುವಾಗ ನಮ್ಮ ಮಕ್ಕಳಲ್ಲವೆಂದು ಹೇಳಿದರು. ಇದೇನು ಮಲತಾಯಿ ಧೋರಣೆ? what is the outlook? Is it the behaviour in this administration? ಹೇಗೆಂದರೆ, school ಗಳಲ್ಲಿ ಮಕ್ಕಳಿಗೆ ನಾವು ಅನ್ನ, ಊಟ, ಬಟ್ಟೆ, ಪುಸ್ತಕ, ಮೂಲಭೂತ ಸೌಕರ್ಯಗಳನ್ನು ನಮ್ಮ Corporation, ಹಳೆಯ ಪ್ರಾಂತ್ಯದಲ್ಲಿರುವವರಿಗೆ ಕೊಡುತ್ತೇವೆಂದು ಈ ಬಜೆಟ್‌ನಲ್ಲಿ ನೀವು ಪ್ರಸ್ತಾಪ ಮಾಡಿದ್ದೀರಿ. ಆದರೆ, 741 Sq. ಕಿ.ಮೀ.ನಲ್ಲಿ 500 Sq.ಕಿ.ಮೀ. ಪ್ರದೇಶದ ಪ್ರಾಂತ್ಯದ ಶಾಲೆಗಳಲ್ಲಿ ಓದುತ್ತಿರುವ ಬಡ ಮಕ್ಕಳ ಬದುಕೇನು? ಅವರು ಈಗ ನಿಮ್ಮ ಮಕ್ಕಳಲ್ಲವೇ? ಅವರು ನಿಮ್ಮ ಆಡಳಿತದಲ್ಲಿಲ್ಲವೇ? ಆ ಬಗ್ಗೆ ಇವತ್ತು ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಅವರಿಗೆ ತಿಳುವಳಿಕೆ ಹೇಳಬೇಕಾಗುತ್ತದೆ. ಇದನ್ನು review ಮಾಡಬೇಕಾಗುತ್ತದೆ. Markets ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದೂ ಕೂಡ ನಿಮ್ಮ ಹಳೆಯ ಪ್ರದೇಶಕ್ಕೆ ಮಾತ್ರ ಕಾರ್ಯಕ್ರಮ ಕೊಟ್ಟಿದ್ದೀರಿ. ಹೊಸ ಪ್ರದೇಶಕ್ಕೆ ಕೊಟ್ಟಿಲ್ಲ. ಕುಡಿಯುವ ನೀರಿನ ಯೋಜನೆಗಳ ಬಗ್ಗೆ ನಮ್ಮ regular budget ನಲ್ಲಿ ಹೇಳಿದರು. ನಾನು ಈ ವರ್ಷ 500 MLD ನೀರು ತರುತ್ತೇವೆಂದು 740 Sq.ಕಿ.ಮೀ ಪ್ರದೇಶಕ್ಕೆ additional water supply ಗೆ ನೀವು ಯೋಜನೆ ಮಾಡಿದ್ದೀರಾ? ಆದರೆ, ನಮಗೆ ಇದರಿಂದೇನು ಉಪಯೋಗವಾಯಿತು? ಇದರಿಂದ ನಮಗೇನು specific programme ಸಿಕ್ಕಿತು? ನಾವೇನು ಬೇಕೆಂದು ಓಡಿಬಂದು ನಿಮ್ಮ ಮನೆ ಸೇರಿಕೊಂಡೆವೇ? ಬೆಂಗಳೂರಿನಲ್ಲಿ ಯಾವ್ಯಾವ wardಗಳಿವೆ, ಯಾವ್ಯಾವ zone ಗಳಿವೆ, ಅವೆಲ್ಲವುಗಳಿಗಿಂತ financial resources ನಲ್ಲಿ best area ಎಂದೆ ನಮ್ಮ area ಆಗಿದೆ. ಅದನ್ನು ತಮ್ಮ ಗಮನಕ್ಕೆ ಆಗಲೇ ತಂದಿದ್ದೇನೆ. ಈ ಕಾರ್ಯಕ್ರಮಗಳನ್ನು ಕೊಡುವಾಗ ಈ ಸರ್ಕಾರ ಈ ರೀತಿಯಾದ ಮಲತಾಯಿ ಧೋರಣೆಯನ್ನು ಮಾಡಿದೆ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. Vision ಇಲ್ಲ. ನೂರು ಉದಾಹರಣೆಗಳನ್ನು ಕೊಟ್ಟು ನನ್ನ criticism ಏನಿದೆ ಅದಕ್ಕೆ ಇವರು ಸಮಜಾಯಿಷಿ ಕೊಡಬಹುದು. ವಿದ್ಯುತ್ ಪರಿಸ್ಥಿತಿ ಯಾವ ರೀತಿ ನಿಮ್ಮ ಊರಿನಲ್ಲಿದೆ ಎನ್ನುವುದು ತಮಗೂ ಅನುಭವವಾಗಿರುತ್ತದೆ. Electric shock ನಮಗೆ ಮಾತ್ರವಲ್ಲ ನಿಮಗೂ ಕೂಡ

ಆಗಿರುತ್ತದೆ. ಪ್ರತಿ ದಿನ ಎಷ್ಟು ಸಲ ವಿದ್ಯುತ್ cut ಆಗುತ್ತದೆನ್ನುವುದು ಎಲ್ಲರಿಗೂ ಗೊತ್ತಿದೆ. ಅಧಿಕಾರಿಯನ್ನು ಕೇಳಿದರೆ, ಸ್ವಲ್ಪ ರಿಪೇರಿ ಇದೆ ಸರ್ ಎಂದು ಹೇಳುತ್ತಾರೆ, ಇನ್ನೊಬ್ಬರನ್ನು ಕೇಳಿದರೆ, ನಾವು ಹಾಗೆಯೇ ಹೇಳುವುದು, ಆದರೆ shut down ಎಂದು ಹೇಳುತ್ತಾರೆ. ಈ ರೀತಿ public ಗೆ ಸುಳ್ಳು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಇವತ್ತು ವಿದ್ಯುತ್ ಉತ್ಪಾದನೆ ಇಲ್ಲದೆ ನಾವು ಇಂಥ ಕನಿಷ್ಠ ಪರಿಸ್ಥಿತಿಗೆ ಮುಟ್ಟಿದ್ದೇವೆ. ಮಳೆ ಇಲ್ಲ ಒಪ್ಪಿಕೊಳ್ಳೋಣ. Gimmick ಕೊಡಲಿಕ್ಕಾಗುವುದಿಲ್ಲ. ಅವರೇನಾದರೂ ಮಾಡುವುದಕ್ಕೆ ಇಟ್ಟುಕೊಂಡಿದ್ದಾರೋ ಏನೋ ಗೊತ್ತಿಲ್ಲ. ನಾನು ಸರ್ಕಾರವನ್ನು ಕೇಳುವ ಪ್ರಶ್ನೆ ಏನೆಂದರೆ, ಇಂಥ ಕನಿಷ್ಠವಾದ ಪರಿಸ್ಥಿತಿಯಲ್ಲಿ solar sector ಗೆ ನಿಮ್ಮ administration ಏಕೆ ಗಮನ ಹರಿಸಿಲ್ಲ? Park ಗಳಾಗಲಿ, Government hospitals ಆಗಲಿ, institutions ಆಗಲಿ, street lights ಆಗಲಿ, ಕಬ್ಬನ್ ಪಾರ್ಕ್, ಲಾಲ್‌ಬಾಗ್ ಆಗಲಿ, ಇನ್ಯಾವುದೋ ಪಾರ್ಕ್‌ಗಳಿಗೆ ಮಾಡಿದ್ದೇವೆ, ಮಾಡುತ್ತಿದ್ದೇವೆ, ಈ ಪ್ರದೇಶದಲ್ಲಿ electricity ಯನ್ನು ನಾವು save ಮಾಡಲಿಕ್ಕೆ solar power ಬಗ್ಗೆ ಏಕೆ ಏನೂ ಈ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಿಲ್ಲ? ನೀವೆಲ್ಲ ಅವರನ್ನು ನಂಬಿ ಬಜೆಟ್ present ಮಾಡುತ್ತೀರಿ. ಜನತಾ ಪ್ರತಿನಿಧಿಗಳನ್ನು ನೀವು neglect ಮಾಡಿದ್ದೀರಿ. ಹೀಗಾಗಿ, it is a total lapse on the part of the Corporation authorities ಎಂದು ನಾನು ಹೇಳುತ್ತಿದ್ದೇನೆ. ನೀವು solar ಬಗ್ಗೆ ಏನೂ ಹೇಳಲಿಲ್ಲ. ನೀರು ತಮಿಳುನಾಡಿಗೆ ಹರಿದುಹೋಗುತ್ತಿದೆ. ನಾವು ಹೋಗಿ ಹೇಳಿದರೂ ಇವರು ಮಾಡುವುದಿಲ್ಲ. ಅವರಿಗೆ ಗೊತ್ತಾಗಿದೆ, Chief Minister ರವರು ಈ MLA ಗಳನ್ನು care ಮಾಡುವುದಿಲ್ಲ, ನಾವೂ care ಮಾಡದಿದ್ದರೆ ನಮಗೇನು increment ಕಡಿಮೆಯಾಗುತ್ತದೆಯೇ? Promotion ಹೋಗುತ್ತದೆಯೇ? ನನ್ನ posting ನಲ್ಲಿ ವ್ಯತ್ಯಾಸವಾಗುತ್ತದೆಯೆ ಎಂದು ಅಧಿಕಾರಿಗಳು ಕೇಳುತ್ತಾರೆ. ಏನೂ ಆಗುವುದಿಲ್ಲ. ಬೆಂಗಳೂರು MLA ಗಳು ಏನು ಮಾಡುತ್ತಾರೆಂದು ಜಬರ್‌ದಸ್ತು ಮಾಡಿಕೊಂಡು ಇದ್ದಾರೆ. Power sector ಅನ್ನು ಇವರು ಸಂಪೂರ್ಣವಾಗಿ neglect ಮಾಡಿದ್ದಾರೆ. Lakes ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. ಈಗಲಾದರೂ ಸರ್ಕಾರ ತ್ವರಿತವಾಗಿ ಆ ಕಡೆ ಗಮನಹರಿಸದಿದ್ದರೆ Ecology and Environment ಬಹಳ ಏರುಪೇರಾಗುತ್ತದೆ. ಆ ಬಗ್ಗೆ ಕಾರ್ಯಕ್ರಮಗಳನ್ನೇನು ರೂಪಿಸುತ್ತೀರಿ ಎಂಬ ಬಗ್ಗೆ ತಾವು ಸ್ಪಷ್ಟವಾಗಿ ಘೋಷಣೆ ಮಾಡಬೇಕಾಗುತ್ತದೆ. ಬೆಂಗಳೂರು world map ನಲ್ಲಿ ಕಾಣಿಸಿಕೊಂಡಿದೆ.

Software, hardware, communication, ಹೀಗೆ ಎಲ್ಲ ವಿಚಾರಗಳಲ್ಲಿ ಮುಂದಿದೆ ಎಂದು ನಾವು ಬಹಳ ಗರ್ವದಿಂದ ಹೇಳಿಕೊಳ್ಳುತ್ತೇವೆ. Corporation ನವರು ಬಜೆಟ್ ಮಂಡಿಸಿದ್ದಾರೆ. ಅದರಲ್ಲೇನಾದರೂ tourism attract ಮಾಡುವುದಕ್ಕೆ ಒಂದು ರೂಪಾಯಿಯ ಕಾರ್ಯಕ್ರಮವನ್ನಾದರೂ ಇಟ್ಟಿದ್ದಾರೆಯೇ? ಏಕೆ ಇವರಿಗೆ ಬೆಂಗಳೂರು ಒಂದು attractive place ಆಗಿದೆ, ಇನ್ನೂ ಆಗಬೇಕು, ಅದನ್ನು ಮಾಡಬೇಕು, ಹೊರ ರಾಷ್ಟ್ರ ಹೊರ ರಾಜ್ಯಗಳಿಂದ ಬರಬೇಕು, ನಮಗೇನಾದರೂ revenue ಜಾಸ್ತಿಯಾಗಬೇಕೆಂದು ಇವರೇಕೆ ಗಮನ ಕೊಡಲಿಲ್ಲ? ಮುಖ್ಯಮಂತ್ರಿಗಳೇನಾದರೂ ಬೇಡ, ಇದನ್ನು attractive centre ಆಗಿ ಮಾಡಬೇಡಿ, Bangalore tourism attraction ಆಗುವುದು ಬೇಡವೆಂದು ಹೇಳಿದ್ದಾರೆಯೇ? Tourism ಗೆ ಸಂಬಂಧಪಟ್ಟಂತೆ ದೊಡ್ಡ ದೊಡ್ಡ ಕೆರೆಗಳಿವೆ, ಅಲ್ಲೇನು ಮಾಡಬಹುದು, boating ಬೇರೆ ಬೇರೆ activities ಏನು create ಮಾಡಬಹುದೆನ್ನುವ ಬಗ್ಗೆ ಇವರಿಗೆ ಗಮನವಿಲ್ಲ. ಜ್ಞಾಪಕವಿದ್ದರೆ ತಾನೆ ಇವರು ಮಾಡುವುದು. ಹಿಂದೆ ಮಹಾನಗರ ಪಾಲಿಕೆಗೆ ಸರ್ಕಾರ 25 ward ಗಳನ್ನು ಸೇರಿಸಿತ್ತು. ಆಗ ನೀರು, UGD, ರಸ್ತೆ ನಿರ್ಮಾಣಗಳು, culverts ನಿರ್ಮಾಣ ಎಲ್ಲ ಸೇರಿ package 1 and 2 ಎಂದು ಕೊಟ್ಟಿದ್ದೆವು. ಕೆಲವು ಸಂದರ್ಭದಲ್ಲಿ ಸಮಯಕ್ಕೆ ಸರಿಯಾದ ಸಂದರ್ಭದಲ್ಲಿ ಜಾರಿ ಮಾಡದಿದ್ದರೂ ಕೂಡ ಸ್ವಲ್ಪ ಸಮಯದ ನಂತರ package 1 and 2 ಸಂಪೂರ್ಣವಾಗಿ ಜಾರಿಯಾಯಿತು. ಇವತ್ತು ನಾಗರೀಕರು ಆ ಸೌಲಭ್ಯವನ್ನು ಅನುಭವಿಸುತ್ತಿದ್ದಾರೆ. ಇವರು ಇವತ್ತು 500 sq.k.m.ಸೇರಿಸಿಕೊಂಡ ಸಂದರ್ಭದಲ್ಲಿ ಇವರೇಕೆ package ಅನ್ನು ಘೋಷಣೆ ಮಾಡಲಿಲ್ಲ? ಈ ಆಡಳಿತ ನಾವು ಈ ಜನರಿಗೋಸ್ಕರ ಇದ್ದೇವೆ, ಈ ಎಲ್ಲ ಮೂಲಭೂತ ಸೌಲಭ್ಯಗಳನ್ನು ಇಷ್ಟು ಅವಧಿಯಲ್ಲಿ ನಾವು ನಿರ್ಮಾಣ ಮಾಡುತ್ತೇವೆನ್ನುವ ಮಾತನ್ನು ಹೇಳಲಿಕ್ಕೆ ಮುಂದಾಗಲಿಲ್ಲ. ಹಾಗಾಗಿ, ಏನು ಕುಮಾರಸ್ವಾಮಿಯವರ ನೇತೃತ್ವದಲ್ಲಿ ಅಧಿಕಾರ ನಡೆಸುತ್ತಿದ್ದಾರೆ, ಇವರ ಇಚ್ಛಾನುಸಾರ, ಸ್ವೇಚ್ಛಾನುಸಾರ ಮಾಡಿ ಎಲ್ಲ ಮೌಲ್ಯಗಳನ್ನು ಕಡೆಗಣಿಸಿ ಇವತ್ತು ಇವರು ಗಾಳಿಗೆ ತೂರಿ ಧೂಳೀಪಟ ಮಾಡಿದ್ದಾರೆ. ಇನ್ನೇನು ಕನ್ನಡ ಭಾಷೆಯಲ್ಲಿ ಪದಗಳಿವೆಯೋ ಅವೆಲ್ಲವನ್ನು ನಾವು ಉಪಯೋಗಿಸಬಹುದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ Specially intervention in the newly added areas of 5 new zones ಅಂದರೆ 7 CMC ಸೇರಿ 1 TMC. ಅದರ ಬಗ್ಗೆ ಇವರು ಹೇಳಿದ್ದಾರೆ. Development of lakes in new zone

ಗೆ 100 ಲಕ್ಷ ಕೊಟ್ಟಿದ್ದಾರೆ. ಇವರಿಗೆಷ್ಟು ಬೇಜಬ್ದಾರಿತನ ಇರಬಹುದು. 500 Sq.ಕಿ.ಮೀ ಪ್ರದೇಶದಲ್ಲಿರುವ ಕೆರೆಕುಂಟೆಗಳನ್ನು ಹದ್ದುಬಸ್ತು ಮಾಡಿ parkಗಳಾಗಿ convert ಮಾಡಿ ಆ ನೀರು ಬಂದದ್ದನ್ನು retain ಮಾಡಿಕೊಂಡು ಆಜುಬಾಜು ಇರುವ ಪ್ರದೇಶದಲ್ಲಿ borewells ಅನ್ನು water table ಅನ್ನು upgrade ಮಾಡಿಕೊಳ್ಳಲಿಕ್ಕೆ, ಇದು ಪ್ರಮುಖವಾಗಿ ನಾವು ಮಾಡಬೇಕಾದ ಕಾರ್ಯವಾಗಿದೆ. Ecology, Environment ಅನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ಇವರಿಗೆ ಎಷ್ಟು broad thinking ಇದೆಯೆಂದರೆ citizen services ಗೆಂದು 100 lakhs ಕೊಡುತ್ತಾರೆ. Development of lakes ಗೆ 250 ಲಕ್ಷ ಹಣ ಕೊಡುತ್ತಾರೆ. ಭಾರತ ಸರ್ಕಾರ ಕೊಡುವ ಕಾರ್ಯಕ್ರಮದಲ್ಲಿಯೂ ಕೂಡ ಹಾಗೆಯೇ ಮಾಡಿದ್ದಾರೆ. 500 Sq.ಕಿ.ಮೀ ಪ್ರದೇಶಕ್ಕೆ maternity homes ತೆರೆಯಲಿಕ್ಕೆ 125 ಲಕ್ಷ ಕೊಡುತ್ತೇವೆಂದು ಹೇಳಿದ್ದಾರೆ. ನಮಗೆ ಇದೆಲ್ಲವನ್ನು ಓದುವುದಕ್ಕೆ ನಾಚಿಕೆಯಾಗುತ್ತದೆ. ಈ proposal ಏನು ಮಾಡಿದ್ದಾರೆ ಇವರಿಗೆ ನಾಚಿಕೆ ಎನ್ನುವುದು ಇದೆಯೋ ಇಲ್ಲವೋ ನನಗೆ ಗೊತ್ತಾಗುವುದಿಲ್ಲ. ಇನ್ನು street lights ಬಗ್ಗೆ ಹೇಳುವುದಾದರೆ remaining storm water drains of 3 CMCs ಗೆ 100 ಲಕ್ಷ, ಸಾವಿರ ಲಕ್ಷ ಹೀಗೆ 100 crores ಮಾಡುತ್ತೇವೆಂದು, stadium ಗೆ 100 ಲಕ್ಷ, basic services for urban poor ಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟರು. Construction of Dot.Comsಗೆ 100 ಲಕ್ಷ ಕೊಟ್ಟಿದ್ದಾರೆ. ನಾನೇಕ ಈ ವಿಚಾರ ಹೇಳುತ್ತಿದ್ದೇನೆಂದರೆ, ಇವರು perfect ಆಗಿ administration ಮಾಡಿದರೆ ನಮ್ಮ financial resources 100 ಕೋಟಿ ರೂಪಾಯಿ ಹೆಚ್ಚಾಗುತ್ತದೆ. ಆದರೆ, ಇದರಲ್ಲಿ 1/10 ಭಾಗ ನಮಗೆ ಕೊಟ್ಟಿಲ್ಲ. ಇವರೇನು ಸುಮಾರು 30 ಕೋಟಿ ರೂಪಾಯಿಗಳನ್ನು recover ಮಾಡಿದ್ದಾರೆ ಆ ಹಣ ಏನಾಯಿತು? ಪತ್ತೆ ಇಲ್ಲ. ಹೀಗಾಗಿ ಈ ಸರ್ಕಾರ totally failure ಆಗಿದೆ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಮುಖ್ಯಮಂತ್ರಿಗಳು ಇಲ್ಲಿ ಅಸೀನರಾಗಿರುವುದರಿಂದ ಈಗ ನಾನು ಬೆಂಗಳೂರು ವಿಚಾರದಲ್ಲಿ ಕೆಲವು ವಿಚಾರಗಳ ಮೇಲೆ ಬೆಳಕು ಚೆಲ್ಲಿದ್ದೇನೆ. ಇವತ್ತು infrastructure ಇಲ್ಲದೆ ಬಂಡವಾಳಗಾರರೆಲ್ಲ ಚೆನ್ನೈ, ಪೂನಾ, ಹೈದರಾಬಾದ್‌ಗೆ ಹೋಗುತ್ತಿದ್ದಾರೆ. ಈಗ ಮುಖ್ಯಮಂತ್ರಿಗಳು, ಅವರ ಅಧಿಕಾರಿವಧಿಯ 13–14 ತಿಂಗಳುಗಳಲ್ಲಿ ಎಷ್ಟು ಜನ ಬಂಡವಾಳಗಾರರು ಇಲ್ಲಿಗೆ ಬರುವ ಹಾಗೆ ಮಾಡಿದ್ದಾರೆ? ಅವರು ಎಷ್ಟು ಸಾವಿರ ಕೋಟಿ ರೂ.ಗಳನ್ನು ಇಲ್ಲಿ ಬಂಡವಾಳ ಹಾಕಿದ್ದಾರೆಂದು

ಹೇಳಲಿ. ಹಿಂದಿನ ಸರ್ಕಾರ ಇದ್ದಾಗ 83 ದೇಶದವರು ವಿಸಿಟ್ ಮಾಡಿದ್ದರು. ಹಿಂದಿನ ಸರ್ಕಾರ ಇದ್ದಾಗ, ನಾನು ಬಹಳ ಗರ್ವದಿಂದ ಹೇಳುತ್ತಿದ್ದೇನೆ, ಅಂಥ ಒಂದು development ಆ ಪ್ರದೇಶದಲ್ಲಿ ಆಯಿತು. ಇಂದು Development ಸರ್ವನಾಶವಾಗುತ್ತಿದೆ. Apartments ಅನ್ನು ಕೇಳುವವರಿಲ್ಲ. ಇವತ್ತು irregular growth ಆಗಬಾರದು, planning agency ಇರಬೇಕು. Irregular activities ಆಗಬಾರದು, roads ಇರಬೇಕು, drainages ಇರಬೇಕು.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** :- ನಾವು ಈ ಬಿಲ್ ಅನ್ನು ತಂದಿರುವುದು ಈಗಿರುವಂಥ ವಾರ್ಡ್‌ಗಳನ್ನು 150ಕ್ಕೆ ಹೆಚ್ಚಿಸುವುದಕ್ಕೆ. ಅವರೇನು ಪ್ರಸ್ತಾಪಿಸುತ್ತಿದ್ದಾರೆ ಅದಕ್ಕೆ ತಾವು ಬೇರೆ ರೂಪದಲ್ಲಿ ಬಿಲ್ ತಂದಾಗ ಅವರು ಪ್ರಸ್ತಾಪಿಸಲಿಕ್ಕೆ ಅವಕಾಶ ಕೊಟ್ಟರೆ, ಸುದೀರ್ಘವಾಗಿ ಉತ್ತರಿಸಬಹುದು. ಈಗ ನಾವು ತಂದಿರುವ ವಿಧೇಯಕದ ವಿಷಯವೇ ಬೇರೆ, ನೀವು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದೀರಿ, ದಯವಿಟ್ಟು, Corporation ನಲ್ಲಿ ಮಾಡುವಂಥ ಭಾಷಣವನ್ನು ಇಲ್ಲಿ ನೀವು ಮಾಡುತ್ತಿದ್ದೀರಿ. ಬೇರೆ ಸಂದರ್ಭದಲ್ಲಿ development ಬಗ್ಗೆ ಮಾತನಾಡಿದರೆ ನಾನು ಸೂಕ್ತವಾದ ಉತ್ತರ ಕೊಡುತ್ತೇನೆ.

**ಶ್ರೀ ಎ. ಕೃಷ್ಣಪ್ಪ** :- ಯಾವಾಗಲೂ ಇವರು ಈ ರೀತಿಯ ಉತ್ತರಗಳನ್ನೇ ಕೊಡುವುದು. 150ಕ್ಕೆ ಹೆಚ್ಚಿಸಿರುವುದಕ್ಕೆ ಬಂಡವಾಳ ಎಲ್ಲಿದೆ ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ನಮಗೆ ಅಷ್ಟು ಜ್ಞಾನವಿಲ್ಲವೆಂದು ತಿಳಿದುಕೊಳ್ಳಬೇಡಿ. ಮಾನ್ಯ ಮುಖ್ಯಮಂತ್ರಿಗಳೇ, ನಾವೂ ಕೂಡ ಇಲ್ಲಿ 4 ಟರ್ಮ್ ಕಳೆದಿದ್ದೇವೆ. ನೀವು ಅಲ್ಲಿ ನಮ್ಮನ್ನು ಕರೆದು ಮೀಟಿಂಗ್ ಮಾಡಲ್ಲ. Chief Minister ಕರೆಯುವುದಿಲ್ಲ, ಅವರ Administrators ಕರೆಯುವುದಿಲ್ಲ. ನಮ್ಮ ನೋವನ್ನು ಎಲ್ಲಿ ಹೇಳಿಕೊಳ್ಳಬೇಕು? ನಿಮ್ಮ ಮುಂದೇನೆ ಹೇಳಿಕೊಳ್ಳಬೇಕು. ಆಗಲಾದರೂ ಅವರ ಕಿವಿಗೆ ಬೀಳುತ್ತೇನೋ, ಅಲ್ಲಿ ಕುಳಿತಿರತಕ್ಕಂಥ ಅಧಿಕಾರಿ ವರ್ಗದ ಕಿವಿಯಾದರೂ ಬೀಳುತ್ತದೆಯೋ ಎಂದು ಹೇಳಬೇಕಾಗಿದೆ. ಈಗ ನಾನಿಲ್ಲಿ ಇಷ್ಟು ವಿಚಾರಗಳನ್ನು ಹೇಳಿದೆನ್ನೆಲ್ಲಾ, ಇದನ್ನೆಲ್ಲಾ ನೀವು ಏಕೆ ಬಜೆಟ್‌ನಲ್ಲಿ ತರಲಿಲ್ಲ? ಏನು ಜ್ಞಾನ ಜಾಸ್ತಿ ಇತ್ತೆ ಅಥವಾ ಜ್ಞಾನ ಇಲ್ಲವೇ ಬೆಂಗಳೂರು ಹೇಗೆ ಇರಬೇಕೆಂದು ನಿಮಗೆ ಒಂದು ಕನಸು ಇದ್ದರೆ ಸಂತೋಷ. ಅದಕ್ಕೆ ಪೂರಕವಾಗಿ ಏನು ಮಾಡಬೇಕೋ ಅದನ್ನು ಮಾಡಬೇಕಲ್ಲವೇ? ನಾನೇನು ನಿಮ್ಮ ಟೈಂನ್ನು ಕಳೆಯುವುದಕ್ಕೆ ಭಾಷಣ ಮಾಡುತ್ತಿಲ್ಲ. ಭಾಷಣ ಮಾಡುವುದು ನನಗೆ ಬೇಕಾಗಿಲ್ಲ. ನಾನೊಬ್ಬ ಜನಪ್ರತಿನಿಧಿಯಾಗಿ ಏನು ಹೇಳಬೇಕೋ

ನಮ್ಮ ಅಧ್ಯಕ್ಷರ ಮುಖೇನ ನಿಮಗೆ ಹೇಳುತ್ತಿದ್ದೇನೆ. ನೀವು ಎಲ್ಲೂ ಅವಕಾಶ ಕೊಟ್ಟಿಲ್ಲ. 13 ತಿಂಗಳಲ್ಲಿ ನಾವು ನಮ್ಮ ಬಾಯಿಯನ್ನು ತೆಗೆದು, ಮಾತನಾಡಿಲ್ಲ. ನಮ್ಮ ಮತಕ್ಷೇತ್ರಕ್ಕೆ ಬಂದಾಗ ನಿಮಗೆ ಇಂಥಿಂಥ ವಿಚಾರಗಳಿಗೆ ನೀವು ಗಮನ ಕೊಡಬೇಕೆಂದು ಹೇಳಿದೆವು. ಇವರು ಒಂದು ರೂಪಾಯಿ ಬಿಡುಗಡೆ ಮಾಡಿದರೆ? ಮಾಡಲಿಲ್ಲ. CRF ನಲ್ಲಿ ಎಂಟಾಣೆ ಕೊಟ್ಟರೇ? ಕೊಡಲಿಲ್ಲ. C.M.Relief Fund ನಲ್ಲಿ ಕೊಟ್ಟರೇ? ಕೊಡಲಿಲ್ಲ. ನಬಾರ್ಡ್‌ನಲ್ಲಿ ಕೊಟ್ಟರೇ? ಕೊಡಲಿಲ್ಲ. ಎಲ್ಲಿ ಹೇಳಿಕೊಳ್ಳೋಣ? ಏನೋ ದೊಡ್ಡ ಮನಸ್ಸು ಮಾಡಿ ಇವತ್ತು ನಮಗೆ ಅವಕಾಶ ಮಾಡಿಕೊಟ್ಟಿದ್ದಾರೆ, ನಾನು ನನ್ನ ಮನಸ್ಸಿನಲ್ಲಿರುವುದನ್ನು ಇಲ್ಲಿ ಹೇಳಿಕೊಳ್ಳಬೇಕಾಗಿದೆ. ಈ ಬಂಡವಾಳದಾರರು ಬೆಂಗಳೂರಿಗೆ ಏಕೆ ಇವತ್ತು ಬರುತ್ತಿಲ್ಲ? ಒಂದು ಕಾಲದಲ್ಲಿ ಡೆಲ್ಲಿಯಲ್ಲಿ ಇಳಿದು ತಾಜ್ ಮಹಲ್ ನೋಡುವುದಕ್ಕೆ ಹೋಗುತ್ತಿದ್ದರು. ಆಮೇಲೆ ಒಂದು ಪರ್ವಕಾಲ ಪ್ರಾರಂಭವಾಯಿತು, ಒಂದು ಹೊಸ ಯುಗ ನಮ್ಮ ಸರ್ಕಾರ ಇದ್ದಾಗ ಆಯಿತು. ಏನೆಂದರೆ, direct ಆಗಿ ಬೆಂಗಳೂರು ದರ್ಶನವಾಗಬೇಕೆನ್ನುವಂತಾಯಿತು. ನಮ್ಮ ಸರ್ಕಾರವಿದ್ದಾಗ Home Department ನಲ್ಲಿ 83 ದೇಶದ ಪ್ರತಿನಿಧಿಗಳು ಬಂದಿರುವ ದಾಖಲೆ ಇದೆ, ಬೇಕಾದರೆ ತೆಗೆದು ನೋಡಿ. ಈಗ ಎಷ್ಟು ಜನ ಬಂದರು? ಅದಕ್ಕೆ ಬೆಂಗಳೂರಿಗೆ ಅಗತ್ಯವಾಗಿ ಬೇಕಾಗಿರುವ ವಿಚಾರಗಳ ಬಗ್ಗೆ ಮಾತನಾಡಿದಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಕೋಪ ಬರುತ್ತದೆ. ಅವರು ಕೋಪ ಮಾಡಿಕೊಳ್ಳಲಿ, ಅದಕ್ಕೆ ನಾನೇನು ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎನ್. ಚೆಲುವರಾಯಸ್ವಾಮಿ** :- ಮಾನ್ಯ ಮುಖ್ಯಮಂತ್ರಿಗಳಿಗೆ ಕೋಪ ಬರುತ್ತಿಲ್ಲ. ನಾಲ್ಕೂವರೆ ವರ್ಷಗಳ ಕಾಲ ಇವರು ಸರ್ಕಾರ, ಸರ್ಕಾರ ಎಂದು ಹೇಳುತ್ತಾರಲ್ಲಾ, ನಾವು ಅಲ್ಲಿ ಕುಳಿತುಕೊಂಡು ನೋಡಿದ್ದೇವೆ. ಕೃಷ್ಣಪ್ಪನವರು ಇಲ್ಲಿ ಇದ್ದಾಗ ಬಹುಶಃ ಅವರು ಯಾವ ರೀತಿ ನಾಲ್ಕೂವರೆ ವರ್ಷ ಸರ್ಕಾರ ಮಾಡಿದರು, ಅದಕ್ಕಾಗಿ ಜನ ಪಾಪ ಅವರ ಸಂಖ್ಯೆಯನ್ನು 140 ರಿಂದ 60ಕ್ಕೆ ತಂದಿದ್ದು. ಏಕೆಂದರೆ, ಇಡೀ ರಾಜ್ಯದಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿ ಇಡೀ ಪ್ರಪಂಚದ ಎಲ್ಲಾ ಬಂಡವಾಳಗಾರರು ಇಲ್ಲಿಗೆ ಬಂದಿದ್ದರಲ್ಲ, ಬೆಂಗಳೂರು ಎಲ್ಲವನ್ನೂ ನವೀಕರಣ ಮಾಡಿ ರಾಜ್ಯದಲ್ಲಿ ಎಲ್ಲಿಯೂ ಸಮಸ್ಯೆನೇ ಇರಲಿಲ್ಲ.

**ಶ್ರೀ ಹಂಪನ ಗೌಡ ಬಾದರ್ಲಿ** :- ಮಾನ್ಯ ಮುಖ್ಯಮಂತ್ರಿಗಳೇ, ನಿಮಗೂ ಕೂಡ ಅದೇ ಆಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ :-** 1999ರಲ್ಲಿ ಇವರು ಅಷ್ಟು ಜನರು ಇದ್ದವರು 10 ಸ್ಥಾನಕ್ಕೆ ಬಂದರು. ಅದನ್ನು ತಾವು ಮರೆಯಬೇಡಿ.

**ಶ್ರೀ ಎನ್. ಚೆಲುವರಾಯಸ್ವಾಮಿ :-** ನಾವು ನಿಮ್ಮ ಹಾಗೆ ಹೇಳಲಿಲ್ಲ. ನಲವತ್ತು ವರ್ಷ ಆಡಳಿತ ಮಾಡಿದವರು ನಾವಲ್ಲ ನೀವು. ಮಾತನಾಡುವುದಕ್ಕೆ ಒಂದು ಇತಿಮಿತಿ ಇರಬೇಕು. ವಿಧೇಯಕ ತಂದಿರುವಂಥ ವಿಚಾರ ಬೇರೆ, ಇವರು ಹೇಳತಕ್ಕಂಥ ವಿಚಾರ ಬೇರೆ. ಯಾವ ವಿಚಾರವನ್ನು ಯಾವುದರಲ್ಲಿ ಹೇಳಬೇಕು, ಯಾವುದರಲ್ಲಿ ಬೇಕಾದರೂ ಏನು ಬೇಕಾದರೂ ಮಾತನಾಡಬಹುದೆ? ಎಲ್ಲದಕ್ಕೂ ಒಂದು ಇತಿಮಿತಿ ಇರುತ್ತದೆ.

**(ಗೊಂದಲ)**

**ಅಧ್ಯಕ್ಷರು :-** ಆಯಿತು ಬೇಗ ಮುಗಿಸಿ.

**(ಗೊಂದಲ)**

**ಶ್ರೀ ಎಂ.ಪಿ. ಪ್ರಕಾಶ್ :-** ಕೃಷ್ಣಪ್ಪನವರು ಅವಕಾಶವಾಗಿಲ್ಲವೆಂದು ಹೇಳುತ್ತಾರೆ.

**ಶ್ರೀ ಎ. ಕೃಷ್ಣಪ್ಪ :-** ಅಲ್ಲಿ ಕುಳಿತುಕೊಂಡಾಗ ಏನು ಮಾಡಿದ್ದೀರಿ ಎಂದು ಜನ ತೀರ್ಮಾನ ಮಾಡುತ್ತಾರೆ.

**(ಗೊಂದಲ)**

**ಶ್ರೀ ಎನ್. ಚೆಲುವರಾಯಸ್ವಾಮಿ :-** ಅವರು ಏನು ಬೇಕಾದರೂ ಮಾತನಾಡಲಿ ಅದಕ್ಕೆ ಅವರು ಉತ್ತರಿಸುತ್ತಾರೆ. ಯಾವುದೋ ವಿಚಾರ ಇದರಲ್ಲಿ ಸೇರಿಸಿದರೆ ಹೇಗೆ? ಬೇರೆ ಟೈಂನಲ್ಲಿ ಮಾತನಾಡಲಿ ನಾವೇನು ಬೇಡವೆಂದು ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ಎಂ.ಪಿ. ವೆಂಕಟೇಶ್ :-** ಅವರು ಯಾವ ವಿಚಾರ ಮಾತನಾಡುತ್ತಾರೆ, ಎಷ್ಟು ನಿಮಿಷ ಅವರಿಗೆ ಅವಕಾಶ ಕೊಟ್ಟಿದ್ದೀರಿ?

**(ಗೊಂದಲ)**

**ಶ್ರೀ ಎ. ಕೃಷ್ಣಪ್ಪ :-** 150 ವಾರ್ಡ್‌ಗಳನ್ನು ಮಾಡಬೇಕೆನ್ನುವ ಪ್ರಸ್ತಾವನೆ ಏನಿದೆ, ನಾನು ಹೇಳುವಂಥ ಪ್ರತಿಯೊಂದು ಪದ ಆ 150 ವಾರ್ಡ್‌ಗಳಿಗೆ

ಸಂಬಂಧಪಟ್ಟಿದ್ದೇ. ಬೇರೆ ಏನೂ ಇಲ್ಲ. ನಾನು ಯಾವುದೋ ಬೇರೆ ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಬಗ್ಗೆ ಹೇಳಿದಾಗ ನೀವು ಹೇಳಿ. ಬೆಂಗಳೂರಿನಲ್ಲಿ 741 Sq.ಚ.ಕಿ.ಮೀ ಪ್ರದೇಶವನ್ನು ತೆಗೆದುಕೊಂಡು 150 ವಾರ್ಡ್‌ಗಳನ್ನು ಮಾಡಬೇಕೆನ್ನುವ ಪ್ರಸ್ತಾವನೆ ಏನು ಇವತ್ತು ಬಂದಿದೆ, ಶಾಸನಕ್ಕೆ ತಿದ್ದುಪಡಿ ತಂದಿದ್ದೀರಿ, ಅದರ ಹಿನ್ನೆಲೆಯಲ್ಲಿ ಏನೇನು ಲ್ಯಾಪ್ಸ್‌ಸ್ ಆಗಿದೆ ನಮ್ಮ ಫೇಲ್ಯೂರ್ಸ್ ಏನೆಂದು ಪಟ್ಟಿ ಮಾಡಿದ್ದೇನೆ. ನಾನೇನು ಉದ್ದೇಶಪೂರ್ವಕವಾಗಿ ಇಲ್ಲಿ ಭಾಷಣ ಮಾಡಬೇಕೆಂದು ಬಂದಿಲ್ಲ. ಹೀಗಾಗಿ ಹಲವಾರು ವಿಚಾರಗಳನ್ನು ಹೇಳಬೇಕಾಗಿದೆ. ಇನ್ನು ಹೆಚ್ಚು ಟೈಂ ತೆಗೆದುಕೊಂಡರೆ ನಿಮಗೆ ಕೋಪ ಬರುತ್ತದೆ, ಅವರಿಗೂ ಕೋಪ ಬರುತ್ತದೆ. ನಾನು ತಕ್ಷಣಕ್ಕೆ ಆಡಳಿತ ನಡೆಸತಕ್ಕಂಥ ಈ ಸರ್ಕಾರ ಬೆಂಗಳೂರು ಸುಂದರವಾದ, ಅಂದವಾದ, ಚೆಂದವಾದ ಬೆಂಗಳೂರಿಗೆ ಬಂಡವಾಳ ಹಾಕಲಿಕ್ಕೆ ಪೂರಕವಾಗಿ ಬಹಳ ಒಳ್ಳೆಯ ವಾತಾವರಣ ಇರುವ ಬೆಂಗಳೂರು ಎನ್ನುವ ವಿಚಾರದಲ್ಲಿ ಇವರ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ, ಮುಖ್ಯಮಂತ್ರಿಗಳು ಇಲ್ಲಿ ಹಾಜರಿದ್ದಾರೆ, ಅವರು ಈಗಲಾದರೂ..

ಶ್ರೀ ಎನ್. ಚೆಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಮೌನ ತಾಳಬೇಡಿ. ಅಧ್ಯಕ್ಷರು ಇಷ್ಟೊಂದು ಮೌನ ತಾಳಿದರೆ ಸಭೆ ಕಷ್ಟವಾಗುತ್ತದೆ. ಸರ್ಕಾರದ ಬಗ್ಗೆ ಟೀಕೆ ಮಾಡುವುದಕ್ಕೆ ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಭಾಷಣದಲ್ಲಿ ಮಾಡಲಿ. ವಿಧೇಯಕ ತಂದಿರುವಂಥ ವಿಚಾರ ಯಾವುದು? Administrative failure ಎಂದು ಹೇಳುವುದು ಯಾವುದು? ಕೃಷ್ಣಪ್ಪನವರು ಅವರು ಮಂತ್ರಿಯಾಗಿದ್ದಾಗ ಬಹಳ ಒಳ್ಳೆಯ ಸರ್ಕಾರ ನಡೆಸಿದ್ದಾರೆ.

ಅಧ್ಯಕ್ಷರು :- ನಿಮ್ಮ ಸಲಹೆಗಳು ಏನು ಇವೆ ಬೇಗ ಹೇಳಿ ಮುಗಿಸಿ.

ಶ್ರೀ ಎ. ಕೃಷ್ಣಪ್ಪ :- ನಾನು ಹೇಳಿರುವುದು ಬರಿ basic facilities ಬಗ್ಗೆ.

ಶ್ರೀ ಎನ್. ಚೆಲುವರಾಯಸ್ವಾಮಿ :- ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಹೇಳಬಾರದೇ? ನೀವು ನಾಲ್ಕೂವರೆ ವರ್ಷದಲ್ಲಿ ಎಂತೆಂಥ ಒಳ್ಳೆಯ ಕೆಲಸಗಳನ್ನು ಮಾಡಿ, ಜನರು ಎಷ್ಟು appreciate ಮಾಡಿದ್ದಾರೆ, ಸದನದಲ್ಲಿ ನಾಲ್ಕೂವರೆ ವರ್ಷ ಎಷ್ಟು ಚರ್ಚೆಯಾಗಿದೆ, ನಿಮ್ಮ ಬಗ್ಗೆ ಎಷ್ಟು ಗೌರವ ಇದೆ, ಇದನ್ನೆಲ್ಲಾ ಹೇಳಬಾರದೆ?

**ಶ್ರೀ ಎ. ಕೃಷ್ಣಪ್ಪ** :- ಚೆಲುವರಾಯಸ್ವಾಮಿಯವರೆ, ನೀವು ಮಾಡಿರುವ ಒಳ್ಳೆಯ ಕೆಲಸಗಳನ್ನು ಗಂಟೆಗಟ್ಟಲೆ ಹೇಳುತ್ತೇವೆ, don't worry. ಪಾಪ ಅವರ ಸಮಯ ಏಕೆ ಹಾಳು ಮಾಡಬೇಕು? ಬೆಂಗಳೂರಿಗೆ 150 ವಾರ್ಡ್‌ನ್ನು ಮಾಡುವ ವಿಚಾರದಲ್ಲಿ ಬೆಂಗಳೂರು ಹೇಗೆ ಇರಬೇಕು? ನಿಮ್ಮ ಆಡಳಿತ ಎಷ್ಟು ವೈಫಲ್ಯಗಳನ್ನು ಕಂಡಿದೆ? ಪ್ರಜಾಪ್ರಭುತ್ವವನ್ನು ನೀವು ಹೇಗೆ ಕೊಲೆ ಮಾಡಿದ್ದೀರಿ ಎಂದು ಹೇಳಿದ್ದೇನೆ. ಹೇಳುವುದಕ್ಕೆ ತಾವು ಆ ಪೀಠದಿಂದ ಕೊಟ್ಟಂಥ ಸಮಯಕ್ಕೆ ತಮಗೆ ಧನ್ಯವಾದಗಳು.

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** :- ಮಾನ್ಯ ಅಧ್ಯಕ್ಷರೆ ನನ್ನದು ಒಂದು ತಕರಾರು ಇದೆ.

**ಶ್ರೀ ರಾಮಲಿಂಗಾರೆಡ್ಡಿ** :- ನಮಗೆ ಅವಕಾಶ ಮಾಡಿಕೊಡಿ ಸ್ವಾಮಿ.

**ಅಧ್ಯಕ್ಷರು** :- 2-3 ಸದಸ್ಯರಿಗೆ ಅವಕಾಶ ಕೊಡುತ್ತೇನೆ. ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಬಿಲ್ಸ್ ಬಹಳಷ್ಟು ಇವೆ ಅವುಗಳು ಪಾಸ್ ಆಗಬೇಕಾಗಿದೆ.

**ಶ್ರೀ ನೆ.ಲ. ನರೇಂದ್ರಬಾಬು** :- ಬೆಂಗಳೂರಿನ ಶಾಸಕರಿಗೆ ಅವಕಾಶ ಕೊಡಿ ಸ್ವಾಮಿ. ಬೆಂಗಳೂರಿನ ಹಣೆಬರಹ ಬರೆಯುವಂಥ ಒಂದು ಶಾಸನ ಬರುತ್ತಿದೆ ಅದಕ್ಕಾಗಿ ನಮಗೆ ಅವಕಾಶ ಮಾಡಿ ಕೊಡಿ.

**ಶ್ರೀ ಜೆ.ಸಿ. ಮಾಧುಸ್ವಾಮಿ** :- ನಾನು Expenditure Statement ಬಗ್ಗೆ ಗಮನ ಸೆಳೆಯುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, 50 ಜನ Corporatorಗಳು ಜಾಸ್ತಿಯಾಗುವುದರಿಂದ ನಮಗೆ ಹಣಕಾಸಿನ ಖರ್ಚು ಬರುವುದಿಲ್ಲವೆಂದು ಹೇಳುತ್ತೀರಿ, ಸ್ವಲ್ಪ ವಿಮರ್ಶೆ ಮಾಡಬೇಕು. ಅವರಿಗೇನು TA-DA ಕೊಡುತ್ತೀರೋ ಇಲ್ಲವೋ? Original Act ನಲ್ಲಿ provision ಮಾಡಿದ್ದು 100 members ಗೆ ಈಗ 150 ಜನಕ್ಕೆಂದು ಹೇಳುತ್ತಿದ್ದೀರಿ. ಬಿಲ್ ಪಾಸ್ ಮಾಡುವುದರಿಂದ ಏನೂ ಖರ್ಚು ಬರುವುದಿಲ್ಲವೆಂದು ನಿಮ್ಮವರು ಹೇಳಿರುವುದು ತಪ್ಪಾಗುತ್ತದೆ. ಇನ್ನು 50 Corporators ಜಾಸ್ತಿಯಾದರೆ ಖರ್ಚು ಬರುತ್ತದೆ. ಅದೊಂದು ತಿದ್ದುಪಡಿ ಮಾಡಬೇಕು. ವಾರ್ಡ್ ಆಫೀಸ್ ಆಗುತ್ತೆ. ಎರಡನೆಯದಾಗಿ ನಾನು ಒಂದೇ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ನಾನು ಬಹಳ ಮಾತನಾಡುವುದಿಲ್ಲ. ತಾವೇನು ಈಗ 150 ವಾರ್ಡ್ ಮಾಡುತ್ತೀರಿ, ಸ್ವಲ್ಪ

ವೈಜ್ಞಾನಿಕವಾಗಿ ಮಾಡಬೇಕಾಗುತ್ತದೆ. ಏಕೆಂದರೆ, ತಾಲ್ಲೂಕು ಪಂಚಾಯತ್, ಜಿಲ್ಲಾ ಪರಿಷತ್ Act ಮಾಡಬೇಕಾದರೆ ಮಲೆನಾಡಿನಲ್ಲಿ ಏನು ಜನಸಂಖ್ಯಾಧಾರದಲ್ಲಿ ಮಾಡಬೇಕು, ಬಯಲು ಸೀಮೆಗೇನು ಮಾಡಬೇಕು, population thick ಆಗಿರುವ ಕಡೆ ಏನು ಮಾಡಬೇಕೆನ್ನುವ ಆಧಾರದಲ್ಲಿ ಆಗಿತ್ತು. Corporation ಇರಲಿ, ಪಂಚಾಯತ್ ಇರಲಿ, ತಾಲ್ಲೂಕು ಪಂಚಾಯತ್ ಇರಲಿ, corporate ward ಆಧಾರದಲ್ಲಿ ಅನುದಾನ ಕೊಡುವುದರಿಂದ ಒಂದು ಕಡೆ develop ಆಗಿರುವ ಏರಿಯಾಗೂ ಅಷ್ಟೇ ದುಡ್ಡು ಹೋಗುತ್ತದೆ. ಇನ್ನೊಂದು ಕಡೆ ಏನು ಹೊಸ ಹಳ್ಳಿಗಳು ಸೇರುತ್ತದೆ, ಹೊಸ CMC ಗಳು ಇಲ್ಲಿ ಸೇರುತ್ತವೆ ಅದಕ್ಕೂ ಅಷ್ಟೇ ದುಡ್ಡು ಹೋಗಿ, development ಒಂದು ಕಡೆ ಅನಗತ್ಯವಾಗಿ ಹಣ ಖರ್ಚಾಗುತ್ತದೆ ಇನ್ನೊಂದು ಕಡೆ ಕುಂಠಿತವಾಗುತ್ತದೆ. ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ನಾವು ಏನಾದರೂ ಬಹಳ thick ಆಗಿರುವ population ಇರುವ ಕಡೆ 50 ಸಾವಿರಕ್ಕೋ 75 ಸಾವಿರಕ್ಕೋ ಒಂದು ಲಕ್ಷಕ್ಕೋ ಒಬ್ಬರು member ತರುವುದು, ಹಳ್ಳಿಗಳ ಭಾಗ ಏನು 100 ಚಿಲ್ಲರೆ ಸೇರಿದೆ, CMC ಭಾಗ ಏನಿದೆ, ಅಲ್ಲಿ 35 ಸಾವಿರ 30 ಸಾವಿರಕ್ಕೆ ಏನಾದರೂ ಒಂದು ವಾರ್ಡ್ ಮಾಡುವುದು ವೈಜ್ಞಾನಿಕವಾಗಿ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯದಾಗುತ್ತದೆ. ಮತ್ತೆ Corporaor election ಹಿಡಿದು ಓಡಾಟ ಮಾಡಲಿಕ್ಕೆ civil amenities, civic services ಅನ್ನು ನೋಡಕೊಳ್ಳಲಿಕ್ಕೆ ಅನುವಾಗುತ್ತದೆ. ವಾರ್ಡ್ ಮಾಡಬೇಕಾದರೆ ಅಂತರವನ್ನು maintain ಮಾಡಬೇಕು. ದಯಮಾಡಿ ಜನಸಂಖ್ಯೆಯ ಒಂದೇ ಆಧಾರದ ಮೇಲೆ ಮಾಡಿದರೆ ಹೊಸದಾಗಿ ಸೇರುವ ಭಾಗಗಳು ಅಭಿವೃದ್ಧಿಯಿಂದ ಕುಂಠಿತವಾಗುತ್ತದೆ. ಗಾಂಧಿನಗರ ಇರಬಹುದು, ಚಿಕ್ಕಪೇಟೆ ಇರಬಹುದು, ಏನು thickly populated area ಇದೆ, ಅರ್ಧ ಕಿ.ಮೀ ಒಳಗೆ ನಿಮಗೊಂದು ವಾರ್ಡ್ ಬಂದು ಬಿಡುತ್ತದೆ. ನೀವು ಅದೇ ಹೊರಗಡೆ ಪೀಣ್ಯದಿಂದ ಆಚೆಕಡೆಗೆ ಮಾಡಬೇಕಾದರೆ 10 ಕಿ.ಮೀ.ನ್ನು ನೀವು ಮಾಡಬೇಕಾಗುತ್ತದೆ. ದಯಮಾಡಿ ಅದೊಂದು consideration, 150 ವಾರ್ಡ್ ಮಾಡಬೇಕಾದರೆ, ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ವಾರ್ಡ್ ಮಾಡಬೇಕೆಂದು ಎರಡು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** :- ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರ ಪಾಲಿಕೆಗೆ 150 ಜನ ಸದಸ್ಯರನ್ನು ಮಾಡುವುದಕ್ಕೋಸ್ಕರ

ಈ ಬಿಲ್ ಅನ್ನು ತಂದಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಬೆಂಗಳೂರು ಇವತ್ತಿನ ದಿವಸ ಬೃಹದಾಕಾರವಾಗಿ ಬೆಳೆಯುತ್ತಿದೆ. ಆದರೆ, ಬೆಂಗಳೂರಿನ ಪರಿಸ್ಥಿತಿ ಏನಾಗುತ್ತದೆಂಬುದರ ಬಗ್ಗೆ ತಾವು ಯೋಚನೆ ಮಾಡಬೇಕು. ಬೆಂಗಳೂರು ಮಹಾನಗರ ಪಾಲಿಕೆಗೆ 150 ಜನ ಸದಸ್ಯರನ್ನು ಮಾಡುವುದಕ್ಕೆ ಮಾಡುತ್ತಿದ್ದೀರಿ. ಆದರೆ, ಬೆಂಗಳೂರಿನಲ್ಲಿರುವ ಜನರು ನಾನಾ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ, ಇದನ್ನು ಸರಿಪಡಿಸುವುದಕ್ಕೆ ಏನು ವ್ಯವಸ್ಥೆ ಮಾಡಬೇಕಾಗಿದೆಯೋ ಅದನ್ನು ಪರಿಣಾಮಕಾರಿಯಾಗಿ ಮಾಡಬೇಕಾಗುತ್ತದೆ. ಮತ್ತೆ ಈಗ ಮೇಯರ್ ಅವಧಿ ಒಂದು ವರ್ಷ ಇದೆ. ಒಬ್ಬರು ಮೇಯರ್ ಆದ ತಕ್ಷಣ ಸುಮಾರು 3 ತಿಂಗಳ ಕಾಲ ಹಾರ-ತುರಾಯಿ ಹಾಕಿಸಿಕೊಂಡು ಸ್ವಾಗತ ಮಾಡಿಸಿಕೊಳ್ಳುವುದರಲ್ಲಿ ಸಮಯ ಹೋಗುತ್ತದೆ. ಮಧ್ಯದಲ್ಲಿ 6 ತಿಂಗಳು ಇರುತ್ತದೆ. ಕೊನೆಯ 3 ತಿಂಗಳು ನಾವು ಹೋಗುತ್ತೇವೆಂಬುದರಲ್ಲಿ ಕಳೆದು ಹೋಗುತ್ತದೆ. ಆದ್ದರಿಂದ, ಮೇಯರ್ ಅವಧಿಯನ್ನು ಕನಿಷ್ಟ 5 ವರ್ಷ ಮಾಡಿ. ಇದು ತಪ್ಪೇನು ಇಲ್ಲ. ತಾವು ಒಪ್ಪುವುದಾದರೆ ಇನ್ನೊಂದು ಸಲಹೆ ಕೊಡುತ್ತೇನೆ. ಅದೇನೆಂದರೆ, ಮೇಯರ್‌ರವರನ್ನು ನೇರವಾಗಿ ಚುನಾಯಿತರಾಗುವಂಥ ವ್ಯವಸ್ಥೆ ಮಾಡಿ. ಇಡೀ ಬೆಂಗಳೂರು ಮಹಾನಗರ ಪಾಲಿಕೆಗೆ ಸದಸ್ಯರಾಗುವ ಜೊತೆಗೆ ನೇರವಾಗಿ ಮೇಯರ್ ಚುನಾವಣೆಯಲ್ಲಿ ಆಯ್ಕೆ ಮಾಡುವಂತೆ ಆಗಲಿ. ಈ ರೀತಿಯಾಗಿ ಬೇರೆ ಬೇರೆ ಕೆ ಈಗಾಗಲೇ ಇದೆ. ಈ ರೀತಿಯಾಗಿ ಆಯ್ಕೆಯಾದವರು ಪಕ್ಷತೀತವಾಗಿ ಗಂಭೀರವಾಗಿರಬಹುದು. ಒಬ್ಬ ಮೇಯರ್ 5 ವರ್ಷಗಳ ಕಾಲ ಇದ್ದರೆ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಎಲ್ಲಾ ಕೆಲಸವನ್ನು ಮಾಡಬಹುದು. 150 ಜನ ಚುನಾಯಿತರಾಗಿರುವವರು ಮೇಯರ್ ಅನ್ನು ಗೆಲ್ಲಿಸುವ ಬದಲು, ಮೇಯರ್ ಚುನಾವಣೆಯನ್ನು ನೇರವಾಗಿಡುವುದರಿಂದ ಒಂದು, ಪಕ್ಷಾತೀತವಾಗುವುದಲ್ಲದೇ, ಬೆಂಗಳೂರಿನ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಅನುಕೂಲವಾಗುತ್ತದೆ. ಮತ್ತೆ ಕೆಂಪೇಗೌಡ ಕಟ್ಟಿದಂಥ ಬೆಂಗಳೂರು ನಗರ ಸಮಗ್ರವಾಗಿ ಕನ್ನಡಿಗರ ಕೈಯಲ್ಲಿರಬೇಕು. ಅಂದರೆ, ಬೆಂಗಳೂರು ಮಹಾನಗರ ಪಾಲಿಕೆ ಸಮಗ್ರವಾಗಿ ಕನ್ನಡಿಗರ ಕೈಯಲ್ಲಿರಬೇಕು. ಇತ್ತೀಚಿನ ದಿನಗಳಲ್ಲಿ ಆ ಪರಿಸ್ಥಿತಿ ಇಲ್ಲ. ಇವತ್ತಿನ ದಿವಸ ಬೆಂಗಳೂರಿಗೆ 75 ಭಾಗದಷ್ಟು ಜನರು ಬೇರೆ ಕಡೆಯಿಂದ ಇಲ್ಲಿಗೆ ವಲಸೆ ಬಂದಿದ್ದಾರೆ. 75 ಭಾಗದ ಜನರು ಇಲ್ಲಿನ ಮತದಾರರಾಗಿದ್ದಾರೆ. ಆದರೆ, ಅವರು ಚುನಾಯಿತರಾಗಿ ಬಂದರೆ ಬಹಳ ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗುತ್ತದೆ. ಆದ್ದರಿಂದ, ತಾವು ಕ್ಷೇತ್ರ

ವಿಂಗಡನೆ ಮಾಡುವಾಗ ಮತ್ತು 150 ಜನ ಸದಸ್ಯರನ್ನು ಮಾಡುವಾಗ ಕನ್ನಡಿಗರಿಗೆ ಆದ್ಯತೆ ಸಿಗಬೇಕು ಮತ್ತು ಕನ್ನಡಿಗರ ನಗರಪಾಲಿಕೆ ಆಗುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡುತ್ತೇನೆ. ನಾನು 1962ರಲ್ಲಿ ಮತ್ತು 1972ರಲ್ಲಿ ಬೆಂಗಳೂರು ನಗರ ಸಭೆಯ ಸದಸ್ಯನಾಗಿದ್ದೆ. ಆಗಿನ ನಗರ ಸಭೆಯ ಬಗ್ಗೆ ಹೇಳುವುದಾದರೆ, ಇಡೀ ನಗರ ಸಭೆ ಶಾಸನ ಸಭೆ ಇದ್ದ ಹಾಗೆ ಇತ್ತು. ಅವತ್ತಿನ ದಿವಸ ಮೇಧಾವಿಗಳೆಲ್ಲರೂ ಸಹ ಇದ್ದರು. ಮತ್ತೆ ಮಾನ್ಯ ರಾಮಲಿಂಗಾರೆಡ್ಡಿಯವರ ತಂದೆಯವರು ಸಹ ನಮ್ಮ ಜೊತೆಯಲ್ಲಿ ಆ ಸಂದರ್ಭದಲ್ಲಿ ಕೆಲಸ ಕೂಡ ಮಾಡಿದ್ದಾರೆ. ಮೇಯರ್ ಬಗ್ಗೆ ತಾವು ಯೋಚನೆ ಮಾಡಿ ಎಂದು ಹೇಳುತ್ತೇನೆ. ಏಕೆಂದರೆ, ಈ ರೀತಿಯಾಗಿ ಮಾಡುವುದರಿಂದ ಒಂದು ಆದರ್ಶವಾಗುತ್ತದೆ. ಮತ್ತೆ ಒಳ್ಳೆಯದೂ ಕೂಡ ಆಗುತ್ತದೆ. ಮೇಯರ್ ಅವಧಿಯನ್ನು ತಾವು ಒಂದು ವರ್ಷ ಯಾವಾಗಲೂ ಮಾಡುವುದಕ್ಕೆ ಹೋಗಬೇಡಿ. ಒಂದು ವರ್ಷದ ಅವಧಿಯಲ್ಲಿ ಯಾರ ಕೈಯಲ್ಲಿಯೂ ಕೂಡ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. 150 ಜನರಿಂದ ಚುನಾಯಿತರಾಗುವ ಮೇಯರ್‌ಗೂ ಸಹ ಒಂದು ವರ್ಷ ಅವಧಿ ಇಡುವುದಕ್ಕೆ ಹೋಗಬೇಡಿ. ಈ ಅವಧಿಯನ್ನು ಜಾಸ್ತಿ ಮಾಡಬೇಕಾಗುತ್ತದೆ. ಮತ್ತೆ ನೇರವಾಗಿ ಮೇಯರ್ ಚುನಾವಣೆ ಮಾಡಿ ಎಂದು ನಾನು ಸಲಹೆ ಕೊಡುವುದಕ್ಕೆ ಬಯಸುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :–** ಮಾನ್ಯ ಅಧ್ಯಕ್ಷರೆ, ನಮಗೆ ಸ್ವಾತಂತ್ರ್ಯ ಬಂದಾಗ ಬೆಂಗಳೂರಿನ ಜನಸಂಖ್ಯೆ ಸುಮಾರು 5 ರಿಂದ 6 ಲಕ್ಷ ಇತ್ತು. ಆನಂತರ, ಬೆಂಗಳೂರು ಬೆಳೆಯುತ್ತಿದ್ದಾಗೆ ಹೆಚ್ಚು ಜನರು ವಲಸೆ ಬಂದು ಬೆಂಗಳೂರಿನ ವಿಸ್ತಾರ ಕೂಡ ಆಯಿತು. ನಮ್ಮ ಸರ್ಕಾರ ಅಥವಾ ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಬೆಂಗಳೂರನ್ನು ವಿಸ್ತರಣೆ ಮಾಡಿದ್ದೇವೆ. ಮತ್ತೆ ಸದಸ್ಯರ ಸಂಖ್ಯೆ ಕೂಡ ಜಾಸ್ತಿಯಾಯಿತು. ನನಗೆ ಜ್ಞಾಪಕ ಇದ್ದ ಹಾಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಇದ್ದಾಗ ಕೇವಲ 63 ಜನ ಸದಸ್ಯರಿದ್ದರು. ನಾವೆಲ್ಲಾ ಸದಸ್ಯರಾದಾಗ 87 ಜನ ಸದಸ್ಯರಾಯಿತು. ಆಗಲೂ ಕೂಡ ಹೊಸ ಪ್ರದೇಶಗಳು ಕಾರ್ಪೋರೇಷನ್‌ಗೆ ಸೇರಿಸಲಾಗಿತ್ತು. ಮತ್ತೆ 1996ರಲ್ಲಿ ಬೆಂಗಳೂರು ಮಹಾನಗರ ವ್ಯಾಪ್ತಿ 175 sq.k.m.ನಷ್ಟು ವಿಸ್ತೀರ್ಣವನ್ನು 1996ರಲ್ಲಿ ಜಾಸ್ತಿ ಮಾಡಲಾಯಿತು. ಆ ಸಂದರ್ಭದಲ್ಲಿ 87 ಇದ್ದಂಥ ವಾರ್ಡ್ ಅನ್ನು 100 ವಾರ್ಡ್‌ಗೆ ಹೆಚ್ಚಿಸಲಾಯಿತು. ನಾವು 1996ರಲ್ಲಿ ಕೇವಲ 60–70 sq.k.m.ನಷ್ಟು ಮಾತ್ರ ಸೇರಿಸಿದ್ದೇವೆ. ಈಗ ಏಕಾಏಕಿ ಹೋಗಿ ಸುಮಾರು 500 sq.k.m.ನಷ್ಟು ಸೇರಿಸಿದರೆ ಬೆಂಗಳೂರು ಉದ್ಧಾರವಾಗುತ್ತದೆಯೇ?

ಮತ್ತೆ ಇದನ್ನು ತಾವು ಕಾನೂನು ಪ್ರಕಾರ ಮಾಡಿಲ್ಲ. ಎಲ್ಲವನ್ನು ತರಾತುರಿಯಲ್ಲಿ ಮಾಡಿದ್ದೀರಿ. ಕರಡು ಪ್ರಕಟನೆಯನ್ನು ದಿನಾಂಕ 2-11-2006 ಹೊರಡಿಸಿದ್ದೀರಿ. ಸಿ.ಎಂ.ಸಿ. ಆಕ್ಟ್ 4ರ ಅನ್ವಯ ಮಹಾನಗರ ಪಾಲಿಕೆ ಸಭೆಯಲ್ಲಿ ಈ ನಿರ್ಣಯವನ್ನು ಇಡಬೇಕಾಗಿತ್ತು. ಅಂದರೆ, ಸರ್ಕಾರ ಈಗ ಏನು ಬೃಹತ್ ಬೆಂಗಳೂರೆಂದು ಹೊಸ ಪ್ರದೇಶಗಳನ್ನು ಸೇರಿಸಿಕೊಳ್ಳತಕ್ಕಂಥ ವಿಷಯ ಮಹಾನಗರ ಪಾಲಿಕೆಯ ಸಭೆಯ ಮುಂದಿಟ್ಟು ಅನುಮೋದನೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ, ಅಲ್ಲಿಯೂ ಕೂಡ ಇದಕ್ಕೆ ಅನುಮೋದನೆ ತೆಗೆದುಕೊಂಡಿಲ್ಲ. ಮತ್ತೆ 30 ದಿನದವರೆಗೆ ಪಬ್ಲಿಕ್ ನೋಟಿಫಿಕೇಷನ್ ಹೊರಡಿಸಬೇಕಾಗಿತ್ತು. ಆದರೆ, 30 ದಿನಕ್ಕಿಂಥ ಮುಂಚೆಯೇ ಇದನ್ನು ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿದ್ದೀರಿ. ಎರಡೂ ಸದನಗಳಲ್ಲಿ ಇದನ್ನು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಿ ಎಂದು ರಾಜ್ಯಪಾಲರು ದಿನಾಂಕ 2-11-2006ರಲ್ಲಿ ಇದನ್ನು ವಾಪಸ್ಸು ಕಳುಹಿಸಿಕೊಟ್ಟರು. ಸುಮಾರು ನಾಲ್ಕೈದು ತಿಂಗಳಾದರೂ ಕೂಡ ಇದರ ಬಗ್ಗೆ ಚರ್ಚೆ ಮಾಡಲಿಲ್ಲ. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದರು. ಆದರೆ, ಈ ಸಭೆಯ ಹಿಂದಿನ ದಿವಸವೇ ಈ ವಿಷಯದ ಅಜೆಂಡ ಕ್ಯಾಬಿನೆಟ್‌ಗೆ ಬಂದಿರುತ್ತದೆ. ಬೃಹತ್ ಬೆಂಗಳೂರು ಮಾಡಬೇಕೆಂದು ಮತ್ತು ಇದಕ್ಕೆ 500 sq.k.m.ಮಾಡಬೇಕೆಂಬುದರ ಬಗ್ಗೆ ಅಲ್ಲಿ ತೀರ್ಮಾನವಾಗಿದೆ. ಮಧ್ಯಾಹ್ನ ನಾಮಕಾವಸ್ಥೆಗೆ ಬೆಂಗಳೂರು ನಗರ ಶಾಸಕರು ಮತ್ತು ನಗರ ಸಭೆಯ ಸದಸ್ಯರ ಸಭೆ ಕರೆದು ಸಾಯಂಕಾಲ ಕ್ಯಾಬಿನೆಟ್ ಸಭೆಯಲ್ಲಿ ಅಪ್ರೂವಲ್ ಮಾಡುತ್ತಾರೆ. ಆದ್ದರಿಂದ, ನಮ್ಮ ಅಭಿಪ್ರಾಯಕ್ಕೆ ಮನ್ನಣೆ ಏನು ಬಂತು? ಈಗ ನಾನು ಕೇಳುವುದೇನೆಂದರೆ, 1996ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ 60-70 sq.k.m.ನಷ್ಟು ಸೇರಿಸಿದಂಥ ಪ್ರದೇಶಗಳು ಇವತ್ತಿನ ದಿವಸ ಅಭಿವೃದ್ಧಿಯಾಗಿವೆಯೇ? ಈ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಿದೆಯೇ? ನಮ್ಮ ಎಸ್.ಎಂ.ಕೃಷ್ಣರವರ ಅವಧಿಯಲ್ಲಿ ಪ್ಯಾಕೇಜ್ ಸಿಸ್ಟಮ್ ಮೂಲಕ ಸುಮಾರು 250 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ವ್ಯವಸ್ಥೆಗೋಸ್ಕರ ಖರ್ಚು ಮಾಡಲಾಗಿತ್ತು. ನಾನು ಹಳೆಯ ಬೆಂಗಳೂರು ಬಗ್ಗೆ ಹೇಳುವುದಿಲ್ಲ. 1996ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ 60-70 sq.k.m.ನಷ್ಟು ಸೇರಿಸಿದಂಥ ಪ್ರದೇಶಗಳಿಗೆ ಮಾತ್ರ ನಾನು ಸೀಮಿತನಾಗಿ ಪ್ರಶ್ನೆ ಕೇಳುತ್ತಿದ್ದೇನೆ. ಇಲ್ಲಿ ಸ್ಯಾನಿಟರಿ ವ್ಯವಸ್ಥೆ ಇನ್ನೂ ಆಗಬೇಕಾಗಿದೆ. ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಸುಮಾರು 300 ಕೋಟಿ ರೂಪಾಯಿಗಳ

ಪ್ಯಾಕೇಜ್ ಸಿಸ್ಟಮ್‌ನಲ್ಲಿ ಸಾಕಷ್ಟು ಕೆಲಸ ಆಗಿವೆ. ಆ ಭಾಗದಲ್ಲಿ ಈಗ flyover ಮತ್ತು ಸಬ್‌ವೇಸ್ ಆಗಿದೆಯೇ ಮತ್ತು ರಸ್ತೆಗಳನ್ನು ಮಾಡಿ ಅದಕ್ಕೆ ಟಾರ್ ಹಾಕಲಾಗಿದೆಯೇ, ಆ ಪ್ರದೇಶದಲ್ಲಿ ಪಾರ್ಕ್ ಅಭಿವೃದ್ಧಿಯಾಗಿದೆಯೇ, ಆಟದ ಮೈದಾನಗಳು ಅಭಿವೃದ್ಧಿಯಾಗಿದೆಯೇ, ಅಲ್ಲಿರತಕ್ಕಂಥ ಕೊಳಚೆ ಪ್ರದೇಶಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಿಕೊಡಲಾಗಿದೆಯೇ, ಈ ಪ್ರದೇಸಗಳಿಗೆ ವಿದ್ಯುತ್ ಸೌಕರ್ಯವನ್ನು ಮತ್ತು ಆ ಭಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಹಾಗೂ ಮಾರ್ಕೆಟ್ ವ್ಯವಸ್ಥೆಯನ್ನು ಮಾಡಲಾಗಿದೆಯೇ? ದುರಾದೃಷ್ಟವಶಾತ್ ನಮ್ಮ ಸರ್ಕಾರ ಇರಬಹುದು ಅಥವಾ ನಿಮ್ಮ ಸರ್ಕಾರ ಇರಬಹುದು, ಗಾರ್‌ಬೇಜ್ ಹಾಕುವುದಕ್ಕೆ ಬೆಂಗಳೂರಿನಲ್ಲಿ ಒಂದು ಜಾಗ ಇಲ್ಲ. ಗಾರ್‌ಬೇಜ್ ಲಾರಿ ಹೋಗಿ ಅಲ್ಲಿ 200–300 ರೂಪಾಯಿ ಕೊಟ್ಟು ಕಸವನ್ನು ಹಾಕಿ ಬರುತ್ತಿದ್ದಾರೆ. ಇವತ್ತಿನ ದಿವಸ ಕಸವನ್ನು ಹಾಕುವುದಕ್ಕೆ ಹೋಗತಕ್ಕಂಥ ಲಾರಿಯವರಿಗೆ ಬಹಳಷ್ಟು ಕಡೆ ಜನರು ಹೊಡೆಯುತ್ತಿದ್ದಾರೆ. ಆದ್ದರಿಂದ, ಎಲ್ಲಿಯೂ ಕೂಡ ಗಾರ್‌ಬೇಜ್ ಹಾಕುವುದಕ್ಕೆ ಆಗುತ್ತಿಲ್ಲ. ಆದ್ದರಿಂದ 1996ರಲ್ಲಿ ಕಾರ್ಪೊರೇಷನ್‌ಗೆ ಸೇರಿಸಿದಂಥ 60–70 sq.k.m.ಪ್ರದೇಶಕ್ಕೆ ನಾವು ಇನ್ನೂ ಮೂಲಭೂತ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿಲ್ಲ. ನಮ್ಮ ಹಿಂದಿನ ನಾಲ್ಕೈದು ವರ್ಷಗಳಲ್ಲಿ ನಮ್ಮ ಸರ್ಕಾರ ಅಂದರೆ, ಮಾನ್ಯ ಎಸ್.ಎಂ.ಕೃಷ್ಣನವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಸಾಕಷ್ಟು ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ನಾವೆಲ್ಲಾ ಪ್ರಯತ್ನವನ್ನು ಮಾಡಿದ್ದೆವು. ಅದರಲ್ಲಿ ನಾವು ಸಫಲ ಕೂಡ ಆಗಿದ್ದೇವೆ. ಆದರೆ, ನಾವು ಸಂಪೂರ್ಣವಾದಂಥ ಸೌಲಭ್ಯವನ್ನು ಕೊಟ್ಟಿಲ್ಲ. ನೀವು ಹೆಚ್ಚಿಗೆ ಸೇರಿಸಿಕೊಳ್ಳಿ. ಅಂದರೆ, ಸುಮಾರು 100 sq.k.m.ನಷ್ಟು ಸೇರಿಸಿಕೊಳ್ಳಿ ನಾನು ಬೇಡವೆಂದು ಹೇಳುವುದಿಲ್ಲ. ಸಿಎಂಸಿ, ಟಿಎಂಸಿ ಸೇರಿಸಿಕೊಂಡು ಸುಮಾರು 240 ರಿಂದ 440 sq.k.m.ನವರೆಗೆ ಸೇರಿಸಿಕೊಳ್ಳಿ. ಆದರೆ, ಈಗ 800 sq.k.m.ಸೇರಿಸಿಕೊಂಡರೆ ಇದು ಯಾವಾಗಲಾದರೂ ಉದ್ಧಾರವಾಗುತ್ತದೆಯೇ? ಈ ಪ್ರದೇಶಗಳಿಗೆ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ಇನ್ನೂ 25 ಉದ್ಧಾರವಾಗುತ್ತದೆಯೇ? ಈ ಪ್ರದೇಶಗಳಿಗೆ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ಇನ್ನೂ 25 ವರ್ಷಗಳಾದರೂ ಬೇಕಾಗುತ್ತದೆಂದು ನಾನು ತಮಗೆ ಬರೆದುಕೊಡುತ್ತೇನೆ. ಇದೇನು ತಮಾಷೆಯೇ ಹುಡುಗಾಟವೇ? ಆದ್ದರಿಂದಲೇ ಬೆಂಗಳೂರನ್ನು ಎರಡು ಕಾರ್ಪೊರೇಷನ್ ಆಗಿ ಮಾಡಿ ಎಂದು ಬೆಂಗಳೂರಿನ ಎಲ್ಲಾ ಶಾಸಕರು ಹೇಳಿದ್ದೆವು. ಬಾಂಬೆ ಮತ್ತು ದೆಹಲಿ ಹಾಗೂ ಕಲ್ಕತ್ತದಲ್ಲಿ ಮಾಡಿರುವಂತೆ ಇಲ್ಲಿಯೂ ಕೂಡ ಎರಡು ಕಾರ್ಪೊರೇಷನ್ ಮಾಡಿ

ಎಂದು ಹೇಳಿದ್ದೆವು. ಏಕೆಂದರೆ, ಇಲ್ಲಿರತಕ್ಕಂಥ ಸಮಸ್ಯೆಗಳು ಬೇರೆ ಇರುತ್ತವೆ ಮತ್ತೆ ಹೊಸ ಪ್ರದೇಶದಲ್ಲಿರತಕ್ಕಂಥ ಸಮಸ್ಯೆಗಳು ಬೇರೆ ಇರುತ್ತದೆ. ಆದ್ದರಿಂದ ಎರಡು ಕಾರ್ಪೊರೇಷನ್ ಮಾಡಿ ಎಂದು ನಾವು ಹೇಳಿದ್ದೆವು. ತಾವು ಬೇಕಾದರೆ 100 sq.k.m. ಸೇರಿಸಿ. ನಗರ ಪ್ರದೇಶದಲ್ಲಿ ಎಲ್ಲೆಲ್ಲಿ ಜನ ಸಂಖ್ಯೆ ಜಾಸ್ತಿಯಾಗಿದೆ ಅಲ್ಲಿ ಮತ್ತು ಎಲ್ಲೆಲ್ಲಿ ಜನ ಹೆಚ್ಚಾಗಿ ಬಂದು ಮನೆಗಳನ್ನು ಕಟ್ಟಿಕೊಂಡಿದ್ದಾರೆಯೋ ಅಂಥ ಜಾಗವೆಲ್ಲವನ್ನೂ ತಾವು ಕಾರ್ಪೊರೇಷನ್‌ಗೆ ಸೇರಿಸಿ, ಇದಕ್ಕೆ ನಮ್ಮದೇನು ತಕರಾರು ಇಲ್ಲ. ಆದರೆ, 500 sq.k.m.ಸೇರಿಸಿಕೊಳ್ಳತಕ್ಕಂಥದ್ದು ಹುಡುಗಾಟವೇ? ನಾವು 1996ರಲ್ಲಿ ಸೇರಿಸಿರುವ ಕೇವಲ 60 sq.k.m ಪ್ರದೇಶಕ್ಕೆ ನಾವು ಇನ್ನೂ ಸೌಲಭ್ಯಗಳನ್ನು ಕೊಡುವುದಕ್ಕೆ ಆಗಿಲ್ಲ. ಈಗಾಗಲೇ ಸ್ವಲ್ಪ ಸೌಲಭ್ಯವನ್ನು ಕೊಟ್ಟಿದ್ದೇವೆ. ಆದರೆ, ಇನ್ನೂ ಸಾಕಷ್ಟು ಆಗಬೇಕಾಗಿದೆ. ಹಳೆಯ ಬೆಂಗಳೂರಿನಲ್ಲಿಯೂ ಕೂಡ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ಅಂದರೆ, ಇಲ್ಲಿ ರಸ್ತೆಗಳ ಅಗಲೀಕರಣವಾಗಿಲ್ಲ ಮತ್ತೆ flyover ಗಳು, ಆಗಿಲ್ಲ, ಶಾಂಗೈ ಸಿಟಿಯಲ್ಲಿ 1 ಕೋಟಿ ಜನಸಂಖ್ಯೆ ಇರುವ ಕಡೆ 274 flyovers ಇವೆ. ಆದರೆ, ಇಲ್ಲಿ ಸುಮಾರು 20–30 fly over ಇರಬಹುದಷ್ಟೇ. ಹೈದರಬಾದ್ ಸಿಟಿಯನ್ನು ನಾವೆಲ್ಲಾ ಹೋಗಿ ನೋಡಿಕೊಂಡು ಬರಬೇಕಾಗುತ್ತದೆ. ಅಲ್ಲಿ ರೋಡ್ ಲೈನಿಂಗ್ ಮತ್ತು ಗಾರ್‌ಬೇಜ್ ವ್ಯವಸ್ಥೆಯನ್ನು ಬಹಳ ಸಿಸ್ಟಮಿಟಿಕ್ ಆಗಿ ಮಾಡಿದ್ದಾರೆ. ಆ ರೀತಿಯಾಗಿ ನಾವೂ ಕೂಡ ಮಾಡಬೇಕಾಗುತ್ತದೆ. ಆದರೆ, ನೀವು ಈಗ 500 sq.k.m. ಹೆಚ್ಚು ಮಾಡುತ್ತಿರುವ ಪ್ರದೇಶಕ್ಕೆ 25–50 ವರ್ಷಗಳಾದರೂ ಮೂಲಭೂತ ಸೌಲಭ್ಯಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಮೊನ್ನೆ ದಿವಸ ಕಾರ್ಪೊರೇಷನ್ ಬಜೆಟ್ ಆಯಿತು. ಈ ಒಂದು ಬಜೆಟ್‌ನಲ್ಲಿ 500 sq.k.m.ಗೆ ಎಷ್ಟು ಅಲೊಕೇಷನ್ ಮಾಡಿದ್ದೀರಿ? ಬಜೆಟ್ ಅಲೊಕೇಷನ್ 150–200 ಕೋಟಿ ರೂಪಾಯಿಗಳನ್ನೂ ಸಹ ತಾವು ಮಾಡಲಿಲ್ಲ. ಇಲ್ಲಿ ಕಂಪ್ಲೀಟ್ ಆಗಿ ಹಳೆಯ ಬೆಂಗಳೂರಿನ ಬಗ್ಗೆ concentrate ಮಾಡಿದ್ದಾರೆ. ಸಿಟಿ ಕೇಂದ್ರಿತ, ಬಿಎಂಪಿ ಬಜೆಟ್ ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಹಾಕಿದ್ದಾರೆ. ನೀವು 500 sq.k.m ನಷ್ಟು ಪ್ರದೇಶವನ್ನು ಸೇರಿಸಿಕೊಂಡು ಇದಕ್ಕೆ ಎಷ್ಟು ಹಣ ಕೊಟ್ಟಿದ್ದೀರಾ ಹೇಳಿ? ಹೊಸದಾಗಿ ಸೇರಿಸಿದ ವರ್ಷದ ಬಜೆಟ್‌ನಲ್ಲಿ ನೀವು ಹಣ ಕೊಟ್ಟಿಲ್ಲದೆ ಇರುವಾಗ ನೀವು ಇನ್ನ್ಯಾವಾಗ ಕೊಡುತ್ತೀರಿ? ಬೆಂಗಳೂರು ನಗರದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸೇರಿ ಪ್ರತಿ ವರ್ಷ 15 ಸಹಸ್ರ ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆ. ಎಸ್.ಎಂ.ಕೃಷ್ಣರವರ ಸರ್ಕಾರ ಒಂದು ಬಿಟ್ಟರೆ ಬೇರೆ ಯಾವುದೇ ಸರ್ಕಾರ ಬೆಂಗಳೂರಿನ ಬಗ್ಗೆ ಗಮನ ಹರಿಸಲಿಲ್ಲ.

ಸರ್ಕಾರ ಒಂದು ಬಿಟ್ಟರೆ ಬೇರೆ ಯಾವುದೇ ಸರ್ಕಾರ ಬೆಂಗಳೂರಿನ ಬಗ್ಗೆ ಗಮನ ಹರಿಸಲಿಲ್ಲ. ಅಲ್ಪಸ್ವಲ್ಪ ಮಾಡಿಬಹುದು ಇಲ್ಲವೆಂದು ಹೇಳುವುದಿಲ್ಲ.

**ಶ್ರೀ ಎ.ಎಸ್. ಬಸವರಾಜ್ :–** ಎಸ್.ಎಂ.ಕೃಷ್ಣರವರು ಬೆಂಗಳೂರು ನಗರವನ್ನು ಸಿಂಗಾಪುರವನ್ನಾಗಿ ಮಾಡುತ್ತೇವೆಂದು ಹೇಳಿದ್ದರು. ಆದರೆ, ಏಕೆ ಸಿಂಗ್ಾಪುರವನ್ನು ಮಾಡಲಿಲ್ಲ?

**ಶ್ರೀ ರಾಮಲಿಂಗಾರೆಡ್ಡಿ :–** ಅವರ ಅವಧಿಯಲ್ಲಿ ಸಿಂಗಾಪುರ ಮಾಡುವುದಕ್ಕೆ ಹೊರಟ್ಟಿದ್ದರು. ಇನ್ನೊಂದು ಅವಧಿ ಕೊಟ್ಟಿದ್ದರೆ ಬೆಂಗಳೂರನ್ನು ಸಿಂಗಾಪುರ ಮಾಡುತ್ತಿದ್ದೆವು.

**ಶ್ರೀ ಎ.ಎಸ್. ಬಸವರಾಜ್ :–** ಇನ್ನೊಂದು ಅವಧಿಯನ್ನು ನಿಮಗೆ ಜನರು ಕೊಡಲಿಲ್ಲ.

(ಗೊಂದಲ)

**ಶ್ರೀ ಎಂ.ಪಿ. ವೆಂಕಟೇಶ್ :–** ನಾರಾಯಣ ಮೂರ್ತಿಯವರ ಇನ್‌ಫೋಸಿಸ್ ಸಂಸ್ಥೆಯನ್ನು ಅವರು ಸಂಪೂರ್ಣವಾಗಿ ಬೆಳೆಸಿದ್ದಾರಷ್ಟೆ....

**ಶ್ರೀ ಎ.ಎಸ್. ಬಸವರಾಜ್ :–** ಇನ್ನೊಂದು ಅವಧಿಯನ್ನು ಜನರೇ ಕೊಡಬೇಕಾಗುತ್ತದೆ. ಬೇರೆ ಯಾರೂ ಸಹ ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್. ಅಶೋಕ್ :–** ಮಾನ್ಯ ಅಧ್ಯಕ್ಷರೆ, ಬೆಂಗಳೂರು ಕಾರ್ಪೋರೇಷನ್ ಬಜೆಟ್‌ನಲ್ಲಿ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಾ ಎಂದು ಕೇಳಿದ್ದೀರಿ. ಅದು 200 ಕೋಟಿ ರೂಪಾಯಿಗಳಲ್ಲ, 800 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದೆ. ನಾನು ಹೊಸ ಏರಿಯಾಗಳ ಬಗ್ಗೆ ಹೇಳುತ್ತಿದ್ದೇನೆ. ಅದಕ್ಕಾಗಿಯೇ 800 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಅದನ್ನು ತಾವು ಬೇಕಾದರೆ ನೋಡಬಹುದು. ಇದರ ಜೊತೆಗೆ JNNURM ಏನಿದೆ, ಅದಕ್ಕೂ ಕೂಡ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದವರು ಹಣವನ್ನು ಕೊಡುತ್ತಿದೆ. ಅದನ್ನು ನಾವು separate ಆಗಿ ಏನೂ ಮಾಡುತ್ತಿಲ್ಲ. ಅದರ ಜೊತೆಗೆ UGD ಗೋಸ್ಕರ 300 ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ಈಗಾಗಲೇ ತಯಾರು ಆಗಿದೆ. ಹಿಂದೆ ಇದ್ದ ಹಾಗೆ, ಅಂದರೆ ತಾವು ಇದ್ದಾಗಲೇ 300 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು. Water supply ಗೆ, separate,

ಕಾರ್ಪೊರೇಷನ್ ಬಜೆಟ್‌ಗೂ ಅದಕ್ಕೂ ಸಂಬಂಧವಿಲ್ಲ. ಈ ಸಾರಿ ಬೆಂಗಳೂರು ಅಭಿವೃದ್ಧಿಗೆಂದು 2.5 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಬಜೆಟ್ ಬುಕ್‌ನ್ನು ಏರಿಯಾಗಳನ್ನು ಏತಕ್ಕೆ ಸೇರಿಸುತ್ತೀರಾ ಎನ್ನುವಂತಹ ಪ್ರಶ್ನೆಯನ್ನು ಹೇಳಿದಿರಿ. ಹಿಂದೆ 67 ವಾರ್ಡುಗಳು ಇತ್ತು ಎಂದು ಹೇಳಿದ್ದೀರಿ. 67 ವಾರ್ಡುಗಳು ಇದ್ದದನ್ನು 85 ವಾರ್ಡುಗಳೆಂದು ಏತಕ್ಕೆ ಮಾಡಿದ್ದೀರಿ? 85 ವಾರ್ಡುಗಳು ಇರುವುದನ್ನು 100 ವಾರ್ಡುಗಳೆಂದು ಏತಕ್ಕೆ ಮಾಡಿದ್ದೀರಿ? ಅದೇ ತರಹವಾಗಿಯೇ ಮಾಡಿರುವುದು. ಹೊಸ ಏರಿಯಾಗಳು ಡೆವಲಪ್‌ಮೆಂಟಾಗಬೇಕು. ಓನ್ಲಿ ಬೆಂಗಳೂರು ಸಿಟಿ ಬೆಳೆಯುವುದರಿಂದ ಹೊರಭಾಗದಲ್ಲಿರುವಂತಹ ಬೆಳವಣಿಗೆ ಸರಿಯಾದ ರೀತಿಯಲ್ಲಿ ಆಗಲಿಲ್ಲವೆಂದರೆ Roads development ಸರಿಯಾಗಲಿಲ್ಲವೆಂದರೆ, ಇವತ್ತಿನ ದಿವಸ ಬೆಂಗಳೂರಿನ ಬಗ್ಗೆ ತಮಗೂ ಗೊತ್ತಿದೆ, ಜೆ.ಪಿ.ನಗರದಲ್ಲಿ ಹೋಗುವಂತಹ storm water drains ನಗರಸಭೆಗಳಿಗೆ ಹೋದ ತಕ್ಷಣ ಬ್ಲಾಕ್ ಆಗುತ್ತದೆ. ಇಲ್ಲಿ ಕಾರ್ಪೊರೇಷನ್ 40 ಅಡಿ storm water drains ಇದೆ, ಇದು ನಗರಸಭೆಗೆ ಹೋದ ತಕ್ಷಣ ಅದು 5 ಅಡಿ ಆಗುತ್ತದೆ. ಅದರ effect Bangalore older city ಗೆ ಬರುತ್ತಿದೆ. ಇವೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಗಳು ಮುಂದೆ ಏನು ಈ areaಗಳು development ಆಗುತ್ತಿದೆ, ಅದು ಸರಿಯಾದ ರೀತಿಯಲ್ಲಿ development ಆಗಬೇಕೆಂಬ ದೃಷ್ಟಿಯಿಂದಲೇ ಮಾಡಿರುವುದು. ಅದಕ್ಕೋಸ್ಕರ ವಾರ್ಡುಗಳನ್ನು ಜಾಸ್ತಿ ಮಾಡಿ, ಏರಿಯಾಗಳನ್ನು ಜಾಸ್ತಿ ಮಾಡಿರುವುದು.

**ಶ್ರೀ ರಾಮಲಿಂಗಾರೆಡ್ಡಿ :-** ಈಗ ಮಾನ್ಯ ಸಚಿವರಾದ ಅಶೋಕ್‌ರವರು ಹೇಳಿದರು, ಹಿಂದೆ ಇರುವಂತೆ ಹೊಸ ಪ್ರದೇಶಗಳನ್ನು ಸೇರಿಸಿಕೊಂಡಿದ್ದೇವೆಂದು ಹೇಳಿದರು. ನಾನು ಸೇರಿಸಿಕೊಳ್ಳಬೇಡಿ ಎಂದು ಹೇಳಲಿಲ್ಲ. ಆದರೆ 500 sq.kms. ಸೇರಿಸಿಕೊಂಡಿರುವುದು ತಪ್ಪು ಎಂದು ನಾನು ಹೇಳುತ್ತಿರುವುದು. 1996ರಲ್ಲಿ ಸೇರಿಸಿರುವುದು 60 sq.kms. ಅದಕ್ಕೆ ನಾವು 10 ವರ್ಷಗಳಲ್ಲಿ ಏನು facilities ಗಳನ್ನು ಕೊಟ್ಟಿದ್ದೇವೆ. ಏನು ಕೊಡುವುದಕ್ಕಾಗಿದೆ, ಏನು ಕೊಡುವುದಕ್ಕಾಗಲಿಲ್ಲವೆಂಬ ಬಗ್ಗೆ ನಾನು ಹೇಳುತ್ತಿರುವುದು. ನೀವು 100 sq.kms. ಅನ್ನು ಸೇರಿಸಿಕೊಳ್ಳಿ, ಸಿಎಂಸಿಗಳನ್ನು ಸೇರಿಸಿಕೊಳ್ಳಿ ಅವೆಲ್ಲವೂ develop ಆಗಿಹೋಗಿದೆ. ಆದರೆ ಸಿಎಂಸಿಗಳನ್ನು ಬಿಟ್ಟು ಒಳಭಾಗವನ್ನೆಲ್ಲಾ ಸೇರಿಸಿದ್ದೀರಲ್ಲಾ ಅದು ತಪ್ಪು ಎಂದು ನಾನು ಹೇಳುತ್ತಿರುವುದು. ಅದಕ್ಕಾಗಿಯೇ ನಾನು separate Corporation ಮಾಡಿ ಎಂದು ಹೇಳುತ್ತಿರುವುದು. ಅಲ್ಲಿ ಜನರು ಬಂದಿದ್ದಾರೆ facilitiesಗಳನ್ನು

ಕೊಡಬೇಕು. Facilitiesಗಳನ್ನು ಕೊಡಬೇಕಾದರೆ ಬಾಂಬೆ ಅಥವಾ ದೆಹಲಿ ಮಾದರಿಯಲ್ಲಿ ಇರುವಂತೆ ಎರಡು corporation ಮಾಡಿ ಎಂದು ಹೇಳುತ್ತಿರುವುದು. ಕಾರ್ಪೊರೇಷನ್‌ನಲ್ಲಿ ಇವರು ಏನು ಹೇಳುತ್ತಿದ್ದಾರೆಂದರೆ, 2.5 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು. JNNURM ದು, ಅದರ ಬಗ್ಗೆ ತಾವು ಹೇಳುತ್ತಿದ್ದೀರಿ, ಕೇಂದ್ರ ಸರ್ಕಾರದಿಂದ ಮಹಾನಗರಪಾಲಿಕೆಗೆ 8000 ಸಾವಿರ ಕೋಟಿ ರೂಪಾಯಿಗಳು ಬರುತ್ತದೆ. ಆದರೆ ಕೆಲವು Storm water drains ಮೂಲಭೂತ ಸೌಕರ್ಯಗಳಿಗೆ water supply, sanitary ಗೆ ಸೇರಿಸುತ್ತೇವೆಂದು ಇವರು ಹೇಳಿದ್ದಾರೆ. ಆದರೆ JNNURM ಪ್ರಕಾರ ಚುನಾಯಿತ ಪ್ರತಿನಿಧಿಗಳು ಇರಬೇಕು. ಅವರು ಇದ್ದರೆ ಮಾತ್ರ ಅವರು ಫಂಡ್ಸ್‌ನ್ನು ರಿಲೀಸ್ ಮಾಡಿವರು. ಇಲ್ಲದಿದ್ದರೆ ಫಂಡ್ಸ್‌ನ್ನು ರಿಲೀಸ್ ಮಾಡುವುದಿಲ್ಲ. ಇವರು ಇನ್ನು ಕೂಡ ಚುನಾವಣೆಯನ್ನು ಮಾಡಿರುವುದಿಲ್ಲ. ಅದನ್ನು ಮಾಡುವುದಕ್ಕೆ ಇನ್ನು 5–6 ತಿಂಗಳುಗಳಾಗುತ್ತದೆ. ಇವರು ಚುನಾವಣೆಯನ್ನು ಮಾಡುವವರೆಗೂ ಕೂಡ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗುವುದಿಲ್ಲ. JNNURM scheme ನಲ್ಲಿ "ಕನ್ನಡಿಯೊಳಗಿನ ಗಂಟು" ಎಂದು ಹೇಳುತ್ತಾರಲ್ಲಾ, ಆ ತರಹ ಕನ್ನಡಿಯೊಳಗಿನ ಗಂಟನ್ನು ನೋಡಿಕೊಂಡು ಇವರು ಆನಂದವನ್ನು ಪಡಬೇಕಾಗುತ್ತದೆ. ಇವರು ಚುನಾವಣೆಯನ್ನು ಮಾಡಿ ಅಲ್ಲಿ ಅಪ್ರೂವಲ್ ಮಾಡದೇ ಇದ್ದರೆ ಕೇಂದ್ರ ಸರ್ಕಾರದಿಂದ JNNURM scheme ನಲ್ಲಿ ಹಣ ಬರುವುದಿಲ್ಲ. ಈಗ ಏನು matching grant ಕೊಡಬೇಕು ಆ ಪ್ರಶ್ನೆ ಬೇರೆ. ಮೂರನೇ ಒಂದು ಭಾಗ ಅಥವಾ ನಾಲ್ಕನೇ ಒಂದು ಭಾಗ matching grant ಅನ್ನು ನಾವು ಕೊಡಬೇಕಾಗುತ್ತದೆ. ನೀವು ಈ ವರ್ಷದಲ್ಲಿ ಕೊಟ್ಟಿರುವುದು ಬರೀ 200–250 ಕೋಟಿ ರೂಪಾಯಿಗಳು ಮಾತ್ರ. ಬಹುತೇಕ ನಮ್ಮ ಕ್ಷೇತ್ರಗಳು ಅಲ್ಲಿ ಇಲ್ಲ. ಎಲ್ಲಾ ಆ ವ್ಯಾಪ್ತಿಯಲ್ಲಿ ಅಶೋಕ್‌ರವರ ಕ್ಷೇತ್ರವೇ ಬರುವುದು. ನೀವು ಗಲಾಟೆಯನ್ನು ಮಾಡಿ ಜಾಸ್ತಿ ಹಣವನ್ನು ತೆಗೆದಿರಿಸಿಕೊಳ್ಳಬೇಕಾಗಿತ್ತು.

ಶ್ರೀ ಎ. ಕೃಷ್ಣಪ್ಪ :– ಮಾನ್ಯ ಅಶೋಕ್ ರವರೆ, ಅಲ್ಲಿ ಎಷ್ಟು ಸಮಸ್ಯೆಗಳು ಇವೆ ಎಂದು ಆ ಪ್ರದೇಶದಲ್ಲಿ ತಾವು ಪ್ರತಿನಿಧಿಯಾಗಿರುವುದರಿಂದ ತಮಗೆ ಗೊತ್ತಿದೆ. ನಮ್ಮ ಏರಿಯಾದಲ್ಲಿ ನೀವು extra-ordinary ಯಾಗಿ ನೀವು ಕೊಟ್ಟಿಲ್ಲ. ಕೊಡಬೇಕಾಗಿರುವುದನ್ನೇ ಕೊಟ್ಟಿರುವುದಿಲ್ಲ. ಮುನ್ಸಿಪಾಲಿಟಿಗಳಿಗೆ ನೀವು ದುಡ್ಡು ಕೊಟ್ಟಿದ್ದರೆ ನಾವು ಸ್ವಲ್ಪ ಸುಧಾರಣೆಯನ್ನು ಮಾಡಿಕೊಳ್ಳುತ್ತಿದ್ದೆವು. Ending

March 31st, ಗೆ 40 crore Rupees turnover financial ಇದ್ದ ದುಡ್ಡು. ಆ ಏರಿಯಾಗಳಲ್ಲಿ taxation ಅನ್ನು ನೀವು ಬಲವಾಗಿ ಜಾರಿ ಮಾಡಿದರೆ 100 ಕೋಟಿ ರೂಪಾಯಿಗಳು ಬರುತ್ತದೆ. ನಮಗೆ ಅದನ್ನು ಮೊದಲು ಕೊಡಿ. ಸುಮ್ಮ ಸುಮ್ಮನೆ ಏತಕ್ಕೆ ಇದನ್ನು ಸೇರಿಸಿಕೊಳ್ಳುತ್ತೀರಿ?.

**ಶ್ರೀ ರಾಮಲಿಂಗಾರೆಡ್ಡಿ** :– ಕುಡಿಯುವ ನೀರಿಗಾಗಿ ಬಹಳ ಸಮಸ್ಯೆಯಾಗುತ್ತಿದೆ. ಕಾವೇರಿ 4ನೇ ಹಂತದ 2ನೇ ಘಟ್ಟಕ್ಕೆ ಸನ್ಮಾನ್ಯ ಧರ್ಮಸಿಂಗ್‌ರವರು ಆಸಕ್ತಿಯನ್ನು ವಹಿಸಿ ಅದನ್ನು ಅಪ್ರೂವ್ ಮಾಡಿಸಿದರು. ಅದನ್ನಾದರೂ ತಾವು ಬೇಗನೆ ಚಾಲನೆ ಮಾಡಿದರೆ ಕುಡಿಯುವ ನೀರಿಗೆ ಸ್ವಲ್ಪ ಪರಿಹಾರವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಶಾಸಕರ ಸಭೆಯನ್ನು ಕರೆಯುತ್ತಾರೆಂದು ಹೇಳಿದರು. ನಾವು ಅವರು ಹೊಸದಾಗಿ ಯುವಕರಾಗಿದ್ದು ಉತ್ಸಾಹಿಗಳಾಗಿದ್ದರೆ ನಮ್ಮನ್ನು ಆಗಾಗ್ಗೆ ಮೀಟಿಂಗ್‌ಗೆ ಕರೆಯುತ್ತಾರೆ ಎಂದು ತಿಳಿದುಕೊಂಡಿದ್ದೇವು. ಅವರು ಒಂದು ಮೀಟಿಂಗ್‌ಗೂ ಸಹ ಕರೆಯಲಿಲ್ಲ. ನಾವು ಯಾರ ಹತ್ತಿರ ಹೋಗಿ ಹೇಳಿಕೊಳ್ಳುವುದು? ನಮ್ಮ ಸಮಸ್ಯೆಗಳನ್ನು ನಾವು ಹೇಳಿಕೊಳ್ಳುತ್ತಿದ್ದೀವಾ, ಇಲ್ಲಾ ನಮ್ಮ ಮನೆಯ ಕೆಲಸವನ್ನು ಮಾಡಿಕೊಡಿ ಏಂದು ಕೇಳಿದ್ದೇವಾ? ನಾವು ನಗರದ ಇಂತಹ ಸಮಸ್ಯೆಗಳನ್ನು ಪರಿಹಾರ ಮಾಡಿ ಎಂದು ಕೇಳಬೇಕು. Portfolio ಅವರ ಹತ್ತಿರವೇ ಇದೆ. ಒಂದು ಮೀಟಿಂಗ್‌ನ್ನು ಕೂಡ ಕರೆದಿರುವುದಿಲ್ಲ. ಅಲ್ಲಿರುವ Administrator ಗಳು ಅಷ್ಟೇ ಕಾರ್ಪೋರೇಷನ್ ಬಜೆಟ್ ಮಾಡುವಾಗ 2–3 ಶಾಸಕರು ಅಭಿಪ್ರಾಯಗಳನ್ನು ಮಾತ್ರ ಕೇಳಿದರು. ಅವರುಗಳು ಬೇರೆ ಶಾಸಕರುಗಳ ಅಭಿಪ್ರಾಯಗಳನ್ನು ಮಾತ್ರ ಕೇಳಿದರು. ಅವರುಗಳು ಬೇರೆ ಶಾಸಕರುಗಳ ಅಭಿಪ್ರಾಯಗಳನ್ನು ಮಾತ್ರ ಕೇಳಲಿಲ್ಲ. ಅಲ್ಲಿ ಹೊಸ ಪ್ರದೇಶಗಳು ಸೇರಿತು. 500 sq.kms. ಅಲ್ಲಿ ಚುನಾಯಿತ ಪ್ರತಿನಿಧಿಗಳು ಯಾರು ಹಳಬರು ಇದ್ದರು, ಯಾವ ಕೆಲಸವನ್ನು ಮಾಡಬೇಕು, ಯಾವ ಕೆಲಸವನ್ನು ಮಾಡಬಾರದು ಎಂದು ಅವರು ಅಭಿಪ್ರಾಯಗಳನ್ನಾದರೂ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಕೂಡ ತಾವು ಮಾಡಲಿಲ್ಲ. ಇದು ಹೇಗೆ ಅಭಿವೃದ್ಧಿಯಾಗುತ್ತದೆ ನೀವೇ ಹೇಳಿ. ಹೊಸ ಪ್ರದೇಶಗಳನ್ನು ಸೇರಿಸಿಕೊಳ್ಳುವ ಬಗ್ಗೆ ನನ್ನದೇನು ತರಕಾರು ಇಲ್ಲ. ಆದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ 500 sq.kms. ಸೇರಿಸಿಕೊಂಡಿರುವುದು ಬಹಳ ತಪ್ಪು. Separate ಆಗಿ Corporation ಮಾಡಬೇಕಾಗಿತ್ತು ಎಂದು ನನ್ನ ವಾದ. ನನಗೆ ಮಾತನಾಡುವುದಕ್ಕಾಗಿ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು.

ಶ್ರೀ ಆರ್. ರೋಷನ್ ಬೇಗ್ (ಜಯಮಹಲ್) :- ಮಾನ್ಯ ಸಭಾಧ್ಯಕ್ಷರೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ, there is no extra expenditure involved in the proposed legislative measure. ಅದರ ಬಗ್ಗೆ ತಾವು mention ಮಾಡಬೇಕಾಗಿತ್ತು. ಎಷ್ಟು ಹಣ expenditure ಆಗಿದೆ. ನಮ್ಮ ಸ್ನೇಹಿತರೆಲ್ಲರೂ ಹೇಳಿದರು 100-150 ವಾರ್ಡುಗಳು ಮಾಡಿರುವುದು ಸರಿಯಿಲ್ಲವೆಂದು ಹೇಳಿದರು. ನಾನು ಬೆಂಗಳೂರು ನಗರದಲ್ಲಿ ಸ್ವಲ್ಪದಿವಸ ಬಿಡಿಎ ಮಂತ್ರಿಯಾಗಿದ್ದಾಗ ಕೊಲ್ಕತ್ತಾಗೆ ಹೋಗಿದ್ದೆ, ಅಲ್ಲಿ ಸಿಎಂಸಿಗಳನ್ನು ಒಂದೊಂದು outer ಕೋಲ್ಕತ್ತ ಎಂದು ಮಾಡಿದ್ದಾರೆ. ಆ ತರಹ ಸಿಎಂಸಿಗಳನ್ನು ಇಲ್ಲಿ ಮಾಡಿ ಎಂದು ಹೇಳಿದ ಮೇಲೆ ನಾನು ಸಿಎಂಸಿಗಳನ್ನು ಮಾಡಿದೆ. ಆದರೆ ನಾನು 10 ವರ್ಷಗಳಿಂದ ಬೆಂಗಳೂರು ನಗರದಲ್ಲಿ ಏನು development ಆಗಿದೆ ಅದನ್ನು ನೋಡಿದರೆ ಬೆಂಗಳೂರು ನಗರಕ್ಕೆ ಟೋಟಲ್ ಒಂದು ಕಾರ್ಪೋರೇಷನ್ ಬೇಕು. ಅಲ್ಲಿ ಒಂದು ಸಣ್ಣ ಕಾರ್ಪೋರೇಷನ್ ನಲ್ಲಿ ಒಂದು ಸಣ್ಣ ಕಾರ್ಪೋರೇಷನ್ ಎಂದು ಇದ್ದರೆ confusion ಆಗುತ್ತದೆ. ಬೆಂಗಳೂರಿನಲ್ಲಿ ಇರುವುದು civic agencies ಯಲ್ಲಿ stake holders ಯಾರು ಇದ್ದಾರೆ, ಮಾನ್ಯ ಸಭಾಧ್ಯಕ್ಷರೆ, ಅವರಲ್ಲಿ co-ordination ಇಲ್ಲ. ಉದಾ : ಒಂದು ಮಿನಿ ಟ್ಯಾಂಕ್, ಬೋರ್‌ವೆಲ್ ಎಂದು ನಮ್ಮ ಕ್ಷೇತ್ರಕ್ಕೆ ಹೋಗುತ್ತೇವೆ. ಅಲ್ಲಿ ಏನೆಂದರೆ ಕರೆಂಟ್ ಕನೆಕ್ಷನ್‌ನ್ನು ಕಿತ್ತು ಹಾಕಿಬಿಟ್ಟಿದ್ದಾರೆ. ಕಾರ್ಪೋರೇಷನ್‌ನವರು BWSSB ಯವರು ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ದುಡ್ಡು ಕೊಟ್ಟಿಲ್ಲ. KEBಯವರು BESCOMನವರಿಗೆ ದುಡ್ಡು ಕೊಟ್ಟಿಲ್ಲ. ಈ ತರಹ co-ordination ಇಲ್ಲದೇ ಇದ್ದಿದ್ದು ಮಿನಿ ಬೋರ್‌ವೆಲ್ಸ್ ಎಲ್ಲಿದೆ? ಕಾರ್ಪೋರೇಷನ್ ವಾರ್ಡುಗಳಲ್ಲಿ ಅದನ್ನು ಕಿತ್ತು ಹಾಕುತ್ತಿದ್ದಾರೆ. ನೀರಿನ ಬಗ್ಗೆ ಹೇಳುವುದಾದರೆ Drinking water Cauvery 4th stage, 2nd stage ಎಂದು ನೀವು ತೆಗೆದುಕೊಂಡು ಬರುತ್ತಿದ್ದೀರಿ. ಇದಕ್ಕೂ ಕೂಡ ನಾವು ಪರಿಹಾರವನ್ನು ಕಂಡುಹಿಡಿಯಬೇಕಾಗುತ್ತದೆ. ಈ garbage disposal ಎಂದು ನಾವು ಏನು ಹೇಳುತ್ತೇವೆ., ಇವೆಲ್ಲವನ್ನೂ ನಾನು ನೋಡಿದ್ದೇನೆ. ನಾನು ನಾಲ್ಕನೇ ಬಾರಿಗೆ ಶಾಸಕನಾಗಿ ಅಸೆಂಬ್ಲಿಗೆ ಆಯ್ಕೆಯಾಗಿ ಬಂದಿದ್ದೇನೆ. ಈ Bangalore City Corporation ನಲ್ಲಿ ಏನಾಗಿದೆ ಎಂದರೆ, ಅಲ್ಲಿ ಒಂದು ಮಾಫಿಯ ಇದೆ. garbage disposal ನಲ್ಲಿ ಯಾರ್ಯಾರು ಚುನಾಯಿತ ಪ್ರತಿನಿಧಿಗಳು ಇರುತ್ತಾರೆ ಅವರ ಕಡೆಯವರೆ ಏಜೆಂಟ್‌ಗಳು ಇರುತ್ತಾರೆ. ಅವರ ಯಜಮಾನ,

ಅವರು ರಿಲೇಟಿವ್, ಅವರದೇ ಲಾರಿಗಳು, ಟ್ರಕ್ಕುಗಳು, ಇದನ್ನು ತಾಉು ಮುಗಿಸಬೇಕು. ಬೆಂಗಳೂರು ನಗರದಲ್ಲಿ garbage disposal scientific ಆಗಿ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. Garbage disposal ಕೂಡ ಸರಿಯಾಗಿ ಆಗುತ್ತಿಲ್ಲ. ಬೆಂಗಳೂರು ನಗರದಲ್ಲಿ ನೀವು ಹೋಗುತ್ತಿದ್ದರೆ ರಾತ್ರಿಯೆಲ್ಲಾ ನೋಡಿ, debris ಎಲ್ಲವನ್ನು control ಇಲ್ಲದೇ ಬಿಸಾಕುತ್ತಿರುತ್ತಾರೆ. ಈ waste management ಬರಿ ಮಾತನಾಡುತ್ತಿದ್ದಾರೆ, ಈ ಬೆಂಗಳೂರು ಒಂದು ಕಡೆ waste. ಎಲ್ಲವನ್ನು ಒಂದು ಕಡೆ ಹಾಕುತ್ತೇವೆಂದು ಹೇಳಿ. ಇದುವರೆಗೂ ಏನು understanding ಬರಲಿಲ್ಲ. ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ನೀರಿನ ಬಗ್ಗೆ ತಾವು ತಮ್ಮ ಅಧಿಕಾರಿಗಳನ್ನು ಕೇಳಬೇಕು. ನೀರು ಎಷ್ಟು ವೇಸ್ಟ್ ಆಗುತ್ತಿದೆ? ಈಗ ರೋಡ್‌ನಲ್ಲಿ ನೋಡಿದರೆ ನೀರು ಏನು ಲೀಕ್ ಆಗುತ್ತಿರುತ್ತದೆ. ಆ ನೀರು ಲೀಕ್ ಬರಿ. ನಮ್ಮ ಕಣ್ಣಿಗೆ ಕಾಣಿಸುವುದು. The leakage water which is not visible to the naked eye, ಅದು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. Underground leakage is more than...

**ಶ್ರೀ ಜೆ.ಸಿ. ಮಾಧುಸ್ವಾಮಿ** :- 45% ಲೀಕ್ ಆಗುತ್ತಿದೆ ಎಂದು ಅವರ ಆಡಿಟ್ ರಿಪೋರ್ಟ್‌ನಲ್ಲಿ ಇದೆಯಲ್ಲಾ?

**ಶ್ರೀ ಆರ್. ರೋಷನ್ ಬೇಗ್** :- Underground leakage is more than 45%. ಮಾನ್ಯ ಮುಖ್ಯಮಂತ್ರಿಗಳೇ, ಈ underground leakage ಏನಿದೆ ಅದನ್ನು ತಾವು ಸರಿಪಡಿಸಬೇಕು. ನೀವು ಇನ್ನು 4th, 5th , 6th stage ಮಾಡಿಕೊಂಡು ಹೋದರೂ ಕೂಡ underground leakage ನ್ನು ಸರಿಯಾಗಿ ಮಾಡಲಿಲ್ಲವೆಂದರೆ, ನೀವು ಏನು ಮಾಡುವುದಕ್ಕಾಗುತ್ತದೆ? ಈಗ ಸಿಂಗಾಪುರ್‌ನಲ್ಲಿಯೂ ಕೂಡ the percentage of underground leakage is 18%. Even in a city like Singapore, in a city like Washington, Chicago, underground leakage is not more than 20%. ಬೆಂಗಳೂರು ನಗರದಲ್ಲಿ ರಿಪೋರ್ಟ್‌ನಲ್ಲೇ ಬರುತ್ತಿದೆ 45% ಅಂದರೆ ನನ್ನ ಅಂದಾಜು more than 60% leakage ಬೆಂಗಳೂರು ನಗರದಲ್ಲಿ, BWSSB ಪೈಪ್ಸ್ ಏನಿವೆ, ಇವೆಲ್ಲಾ ಹಳೆಯ ಪೈಪ್ಸ್, ಅವನ್ನೆಲ್ಲಾ ರಿಪೇರಿ ಮಾಡಿಸಿ, underground leakage ತಾವು detect ಮಾಡಿದರೆ ನೀರಿನ ಪ್ರಾಬ್ಲಮ್ ಬೆಂಗಳೂರು ನಗರದಲ್ಲಿ ಸಾಕಷ್ಟು solve ಆಗುತ್ತದೆ. ಮಾನ್ಯ

ಮುಖ್ಯಮಂತ್ರಿಯವರೇ ಬೇರೆ ಯಾವುದೇ ಊರಿನವರು ಬಂದರೆ it is one of the most poorest lit city in India. ನೀವು Airport ನಲ್ಲಿ flight ನಿಂದ ಬರುತ್ತಿರಬೇಕಾದರೆ ಯಾವತ್ತಾದರೂ ಒಂದು ದಿನ ಸಾಯಂಕಾಲ ನೋಡಿ, ಬೇರೆ ನಗರಗಳಾದ ಕಲ್ಕತ್ತಾ, ಬಾಂಬೆ ನೋಡಿ, ಬೆಂಗಳೂರು ನಗರಕ್ಕೆ ಬಂದಾಗ Bangalore is the most poorest lit city. ಸರಿಯಾಗಿ lighting facilities ಬೆಂಗಳೂರು ನಗರದಲ್ಲಿಲ್ಲ. ನೀವು extra wards add ಮಾಡುತ್ತಿದ್ದೀರಿ. Lighting facilities ಮಾಡಬೇಕು, ಆಮೇಲೆ hoardings ಬಗ್ಗೆ ಹೇಳುವುದಾದರೆ, ನಗರದಲ್ಲಿ ಈ hoarding mafia ಇದೆ. ಮಾನ್ಯ ಮುಖ್ಯಮಂತ್ರಿಯವರೇ ತಾವು ಡೆಲ್ಲಿಗೆ ಹೋಗುತ್ತೀರಿ. ನ್ಯೂಡೆಲ್ಲಿ ಕಡೆ ನೋಡಿ ಯಾವ ರೀತಿಯಾಗಿ hoardings scientific ಆಗಿ ಮಾಡಿದ್ದಾರೆ. ನಮಗೆ ಇಲ್ಲಿ ಬೆಂಗಳೂರು ನಗರದಲ್ಲಿ ನೋಡಿ ಬೀದಿ ಬೀದಿಗೆ hoardings. ಇದು ಏನಾದರೂ city development ರೀತಿಯೇ? ಈ hoarding culture ಏನಿದೆ ಇದನ್ನು ಮುಗಿಸಿ, ದಯವಿಟ್ಟು ಇದನ್ನು scientific ಆಗಿ ಮಾಡಿ ಎಂದು ಕೇಳಿಕೊಳ್ಳುತ್ತೇನೆ. Urban poor ಬಗ್ಗೆ ತಾವು neglect ಮಾಡುತ್ತಿದ್ದೀರಿ, ಬೆಂಗಳೂರು ನಗರದಲ್ಲಿ ಸಾಕಷ್ಟು ಜನ ಬಡವರಿದ್ದಾರೆ. ಬಡವರ ಬಗ್ಗೆ ನಾನು ನೋಡುತ್ತೇನೆ, ಬನಶಂಕರಿ ಕಡೆ ಸ್ವಲ್ಪ development ಆಗಿದೆ. ಅಶೋಕ್‌ರವರು ಇರುವ ಜಯನಗರದಲ್ಲಿ ಕೆಲವು ಕಡೆ. ಆಮೇಲೆ ಬೆಂಗಳೂರು ನಗರದಲ್ಲಿ ಮೇಲ್ಮಟ್ಟದ ಜನಾಂಗದವರು ಯಾರಿದ್ದಾರೆ ಆ ಏರಿಯಾದಲ್ಲಿ development ಆಗುತ್ತದೆ. ಹಿಂದುಳಿದ ವರ್ಗದವರು, ದಲಿತರು, ಅಲ್ಪಸಂಖ್ಯಾತರು ಯಾರು pockets ಇದ್ದಾರೆ, ನೀವು ಬರೀ ಎಂ.ಜಿ.ರೋಡ್, ಈ ಕಡೆ ಆ ಕಡೆ ನೋಡಿಕೊಂಡು ಬರುತ್ತೀರಿ. ಈ ದೇವರಜೀವನಹಳ್ಳಿ, ಕಾಡುಗೊಂಡನಹಳ್ಳಿ, ಯಾರಬ್‌ನಗರ ಇಂಥ ಕಡೆ ನಿಮ್ಮ ಜಿ.ಎನ್.ಆರ್. ಹಣವೇನಿದೆ ಅದನ್ನು ಉಪಯೋಗಿಸಿ underground drainage ಸ್ವಲ್ಪ ಸರಿಮಾಡಬೇಕು. ಮುಖ್ಯಮಂತ್ರಿಗಳು ಕೆಲವು ಸಾರಿ ಸಿಟಿ ರೌಂಡ್ಸ್ ಹೋಗುತ್ತಿರುತ್ತಾರೆ. ತಾವು surprise inspection ಹೋಗಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ತಾವು ಕೇವಲ ಮೂರ್‍ನಾಲ್ಕು ಜನರೊಂದಿಗೆ ಹೋಗಿ, procession ರೀತಿ ಹೋಗಬೇಡಿ. ವಾರಕ್ಕೊಂದು ಬಾರಿ ತಾವು ಹೋಗಿ. ಹಿಂದಿನ ಸರ್ಕಾರದಲ್ಲಿ ಬಿ.ಡಿ.ಎ.ನಲ್ಲಿ ಎಷ್ಟು ಸಾವಿರ denotification ಆಗಿವೆ, ಅದರ ಬಗ್ಗೆ ಸ್ವಲ್ಪ ತನಿಖೆ ಮಾಡಿ, ಯಾರ್‍ಯಾರಿಗೆ denotification ಆಗಿದೆ? ಯಾರ್‍ಯಾರದ್ದು ಎಷ್ಟು, ರಿಂಗ್ ರೋಡ್‌ನಲ್ಲಿ

ಈ ಕಡೆ ಹೋಗುತ್ತಿದ್ದರೆ left sideನಲ್ಲಿರುವ ಜಾಗವೆಲ್ಲಾ ಇವರದೇ ಎಂದು ಹೇಳುತ್ತಾರೆ. ನಾನು ಸನ್ಮಾನ್ಯ ಧರಂಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅವರಲ್ಲಿ ಮನವಿ ಮಾಡಿಕೊಂಡಿದ್ದೆ, ಸ್ವಾಮಿ, ಅರ್ಕಾವತಿ ಲೇಔಟ್ ಬಡವರಿಗೆ ಏತಕ್ಕೆ ಮಾಡಿಸುತ್ತೀರಿ, ಅಲ್ಲಿ ಯಾರ್‍ಯಾರು ಶ್ರೀಮಂತರಿದ್ದಾರೆ, ಯಾರ್‍ಯಾರು ರಾಜಕಾರಣಿಗಳು ಇದ್ದಾರೆ, ಎಷ್ಟು ಎಕರೆ ಜಾಗ denotify ಆಗಿದೆ. ಅದರ ಬಗ್ಗೆ ತನಿಖೆ ಮಾಡಿ ಎಂದು ಅವರಲ್ಲಿ ಮನವಿ ಮಾಡಿಕೊಂಡಿದ್ದೆ. ಬೆಂಗಳೂರಿನ ಸುತ್ತ ಮುತ್ತ ಬೆಂಗಳೂರಿನ ಬಿ.ಡಿ.ಎ.ಲ್ಯಾಂಡ್ ಬಗ್ಗೆ ಸ್ವಲ್ಪ ಗಮನ ಹರಿಸಿ. ತಾವು ಒಂದು Greater Bangalore ಅನ್ನು ನಿಜವಾಗಿಯೂ ಮಾಡಬೇಕಾದರೆ urban poor ಯಾರಿದ್ದಾರೆ ಅವರಿಗೆ EWS Scheme Economically weaker section scheme ಎಂದು ಬಡವರಿಗೆ ಒಂದೊಂದು ಸೈಟ್ ಅನ್ನು ಬಿ.ಡಿ.ಎ. ಮೂಲಕ ಕೊಡಿ. Basi infrastructure ಏನಿದೆ ಇದು ನೀವು ಏನಾದರೂ ಒಂದು ರೀತಿ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಧರಂಸಿಂಗ್‌ರವರು ಹೇಳಿದರು, ಹೈದರಾಬಾದ್‌ನಲ್ಲಿ ಬಹಳ ಚೆನ್ನಾಗಿ ಮಾಡಿದ್ದಾರೆಂದು. ಹೌದು ಹೈದರಾಬಾದ್‌ನಲ್ಲಿ ಏತಕ್ಕೆ ಚೆನ್ನಾಗಿ ಮಾಡಿದ್ದಾರೆಂದರೆ ಚಂದ್ರಬಾಬು ನಾಯ್ಡುರವರಿಗೆ ಒಂದು vision ಇತ್ತು. ದೃಢವಾದ ಮನಸ್ಸಿನಿಂದ ಇಲ್ಲ, ನಾನು ಮಾಡೇ ಮಾಡುತ್ತೇನೆಂದು ಮಾಡಿದರು. ಆ ರೀತಿಯ vision ಇಟ್ಟುಕೊಂಡು ಚಂದ್ರಬಾಬುನಾಯ್ಡುರವರ age ಅಷ್ಟೇ ಇತ್ತು, ನೀವು ಅಷ್ಟೇ age ನವರಾಗಿದ್ದೀರಿ. ನಾವೆಲ್ಲಾ ನಿಮಗೆ ಸಹಕಾರ ಕೊಡುತ್ತೇವೆ. ನಮ್ಮಂತಹ ಬೇರೆ ಎಂ.ಎಲ್.ಎ.ಗಳನ್ನು ಕರೆದು ಮಾತನಾಡಿ. ಮೊನ್ನೆ ಬಜೆಟ್‌ಗೆ ನಾನೇ Administrator ಎಲ್ಲಿದ್ದಾರೆಂದು ಹುಡುಕಿಕೊಂಡು ಹೋದೆ. ಪಾಪ ಅವರು ಈ ನಡುವೆ ಬಹಳ busy ಇದ್ದಾರೆಂದು ನಾನೇ ಅವರನ್ನು ಹುಡುಕಿಕೊಂಡು ಹೋಗಿ Commissioner ಇದ್ದಾರೆಂದು Administrator ರವರನ್ನು meet ಮಾಡಿ ಅವರಲ್ಲಿ request ಮಾಡಿಕೊಂಡು ಇವೆಲ್ಲಾ include ಮಾಡಿ ಎಂದು ನಾನೇ ಮೇಲೆ ಮೇಲೆ ಬಿದ್ದು ಹೋದೆ. ಅದಕ್ಕೆ ನಮ್ಮ ಸಿಟಿ ಎಂ.ಎಲ್.ಎ.ಗಳನ್ನು, ನಮ್ಮ colleagues ಕರೆದು ಮಾತನಾಡಿ ಅವರು ಕೊಡುವ ಸಲಹೆಗಳನ್ನು ಸ್ವಲ್ಪ ತೆಗೆದುಕೊಂಡು ಸ್ವಲ್ಪ ಇದರ ಬಗ್ಗೆ ಗಮನಹರಿಸಿ ಎಂದು ನಾನು ವಿನಂತಿಸುತ್ತೇನೆ.

**ಅಧ್ಯಕ್ಷರು** :- ಈಗ ಎಲ್ಲರಿಗೂ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈಗೇನಾಗಿದೆಯೆಂದರೆ ರಾಜ್ಯದ ಯಾವುದಾದರೂ ಸಮಸ್ಯೆ ಬಂದರೆ 224 ಜನ

ಸದಸ್ಯರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಲಿಕ್ಕಾಗುತ್ತದೆಯೇ? ಆ ರೀತಿ ಕೊಡಲಿಕ್ಕಾಗುವುದಿಲ್ಲ.

**ಶ್ರೀ ಧರಂಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) :–** ಸೀತಾರಾಂನವರು ಮಾತನಾಡಲಿದ್ದಾರೆ. ಎಲ್ಲರೂ ಚರ್ಚೆ ಮಾಡಬೇಕು.

**ಅಧ್ಯಕ್ಷರು :–** ಈಗ ಧರಂಸಿಂಗ್ ಸಾಹೇಬರೇ ನೀವು ಈ ಸೀಟಿಗೆ ಬಂದಾಗಿನಿಂದ ನನಗೆ ಬಹಳ ತೊಂದರೆಯಾಗಿದೆ. ಆಗುವುದಿಲ್ಲ, No. No. Can I give chance to all people? ಏನು ನೀವು ಅವರಿಗೆ ಕೊಡಿ, ಇವರಿಗೆ ಕೊಡಿ, No. that is not the attitude. That should not be your attitude. ಈಗ ಉತ್ತರ ಹೇಳಿ.

(ಗೊಂದಲ)

**ಶ್ರೀ ಎಂ.ಆರ್. ಸೀತಾರಾಂ :–** ನಾವು ಮಾತನಾಡಲಿಕ್ಕೆ ಇದುವರೆಗೂ ನೀವು ಅವಕಾಶವನ್ನೆ ಕೊಟ್ಟಿಲ್ಲ, ನಾವು ಎಷ್ಟು ಸಾರಿ ಕೇಳಿದರೂ ನೀವು ಅವಕಾಶ ಕೊಟ್ಟಿಲ್ಲ. ಈ ಬಾರಿ ನೀವು ನಮಗೆ ಅವಕಾಶ ಕೊಡಲೇಬೇಕು.

(ಗೊಂದಲ)

**ಅಧ್ಯಕ್ಷರು :–** ನಾಲ್ಕು ಜನ ಬೆಂಗಳೂರು ಶಾಸಕರಿಗೆ ಅವಕಾಶ ಕೊಟ್ಟಿದ್ದೇನೆ. ಹೊರಗಡೆಯವರೊಬ್ಬರಿಬ್ಬರಿಗೆ ಅವಕಾಶ ಕೊಟ್ಟಿದ್ದೇನೆ. ನಿಮ್ಮ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ಒಂದೊಂದು ಬಿಲ್‌ಗೆ ಈ ರೀತಿ ಆದರೆ ಇನ್ನೆಷ್ಟು ಬಿಲ್ ಪಾಸ್ ಆಗಬೇಕು ಹೇಳಿ.

(ಗೊಂದಲ)

**ಶ್ರೀ ಎನ್. ಧರಂಸಿಂಗ್ :–** ಈಗ ಸೀತಾರಾಂನವರು ಮಾತನಾಡುತ್ತಾರೆ. ಅವರದಾದ ಮೇಲೆ ಉತ್ತರ ಕೊಡಿ.

**ಅಧ್ಯಕ್ಷರು :–** ಈಗ ಇನ್ನೆಷ್ಟು ಬಿಲ್‌ಗಳು ಆಗಬೇಕು ನೀವೇ ನೋಡಿ, ಇವತ್ತು ಬಿಲ್‌ಗಳು ಪಾಸ್ ಆಗಿ ಆ ಮನೆಗೆ ಹೋಗಬೇಕು.

**ಶ್ರೀ ಎನ್. ಧರಂಸಿಂಗ್ :–** ಈಗ ಬಿಲ್ ಬಗ್ಗೆ ಚರ್ಚೆಯಾಗಬೇಕು. ಸೀತಾರಾಂರವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ, ನಂತರ ಉತ್ತರ ಕೊಡಲಿ.

**ಅಧ್ಯಕ್ಷರು :-** ಯಾರಾದರೂ ಒಬ್ಬರಿಗೆ ಅವಕಾಶ ಕೊಡುತ್ತೇನೆ, ನೀವು ಹೊರಗಿದ್ದರೂ ಅಷ್ಟೆ, ಒಳಗೆ ಬಂದರೂ ಅಷ್ಟೆ. ಏನಿದು ಸುಮ್ಮನೆ ಇತ್ತೀಚಿನ ಒಂದು ಪರಿಪಾಠ ಏನೆಂದರೆ wellಗೆ ಬಂದುಬಿಡುವುದು. ನಮ್ಮ ಹಳ್ಳಿ ಕಡೆ ಜುಟ್ಟು ಹಿಡಿದು ಕೇಳಿದ ಹಾಗೆ ಕೇಳುವುದು. ಮೊದಲು ನಿಮ್ಮ ಸದಸ್ಯರಿಗೆ ಶಿಸ್ತು ಕಲಿಸಿ. ನಿಯಮಗಳ ಪ್ರಕಾರ ಮಾತನಾಡುವುದನ್ನು ಕಲಿಸಿ, ಸುಮ್ಮನೆ ಹೇಳಿದ್ದೇ ಹೇಳುವುದು. ಯಾರಾದರೂ ಒಬ್ಬರು ಅಥವಾ ಇಬ್ಬರು ಮಾತನಾಡಿ.

**ಶ್ರೀ ಎಂ.ಆರ್. ಸೀತಾರಾಂ (ಮಲ್ಲೇಶ್ವರಂ) :-** ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸರ್ಕಾರ ಏನು ತಿದ್ದುಪಡಿ ಮಂಡಿಸಿದೆ, ಇದರಲ್ಲಿ ಮೊದಲನೆಯದಾಗಿ ಈ wardಗಳು ಯಾವ ರೀತಿಯಾಗಿ ಪುನರ್ ವಿಂಗಡಣೆ ಮಾಡುತ್ತಿದ್ದೀರಿ, ಎಷ್ಟು ಜನಸಂಖ್ಯೆಗೆ ನೀವು 150 ವಾರ್ಡ್‌ಗಳನ್ನು ಮಾಡಿದ್ದೀರಿ ಎನ್ನುವ details ಇದರಲ್ಲಿಲ್ಲ. ನಮ್ಮ ಬೆಂಗಳೂರು ನಗರದಲ್ಲಿರುವ ಎಲ್ಲಾ ಶಾಸಕರುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದು ಮಾತನಾಡಿ ನಮ್ಮ ಸಲಹೆಗಳನ್ನು ತೆಗೆದುಕೊಂಡರು. ಆದರೆ ಈಗ ಈ ವರ್ಷದ ಬಜೆಟ್ಟಿನಲ್ಲಿ ಹೆಚ್ಚಾಗಿ ಬೆಂಗಳೂರು ನಗರಕ್ಕೆ ರಾಜ್ಯ ಸರ್ಕಾರದಿಂದ ಹೆಚ್ಚು ಅನುದಾನ ಸಿಕ್ಕಿಲ್ಲ. ಪರಿಣಾಮವಾಗಿ ಜೆ.ಎನ್.ಎನ್.ಯು.ಎಂ. ನಲ್ಲಿ ಕೇಂದ್ರ ಸರ್ಕಾರದಿಂದ 780 ಕೋಟಿ ರೂ.ಗಳು ಬಂದಿದೆ ಅದರಲ್ಲಿ ಮ್ಯಾಚಿಂಗ್ ಗ್ರಾಂಟ್ ಬಿಟ್ಟರೆ ನಮ್ಮ ಬೆಂಗಳೂರು ಮಹಾನಗರಕ್ಕೆ ರಾಜ್ಯಸರ್ಕಾರದ ಯಾವುದೇ ರೀತಿಯ ಮೊತ್ತವನ್ನು ಈ ಬಜೆಟ್ಟಿನಲ್ಲಿ ತೋರಿಸಿಲ್ಲ. ಯಾವ ರೀತಿ ಈ 150 ವಾರ್ಡ್‌ಗಳನ್ನು ಈ ಸರ್ಕಾರ manage ಮಾಡುತ್ತದೆ, govern ಮಾಡುತ್ತದೆ, ನೀರು ಇರಬೇಕು, sewerage, water supply, roads ಇಲ್ಲ. ಇಷ್ಟೆಲ್ಲಾ ಸಮಸ್ಯೆಗಳಿವೆ. Administrative expenditure ಅನ್ನು ಈ ಸರ್ಕಾರ ಯಾವ ರೀತಿ ತೆಗೆದುಕೊಳ್ಳುತ್ತದೆನ್ನುವುದು ಸಹ ನಮಗೆ ಬೇಕಾಗುತ್ತದೆ. ರಾಜ್ಯ ಸರ್ಕಾರದವರು ಯಾವ ರೀತಿಯಾಗಿ ಮೊದಲನೆಯದಾಗಿ ಪುನರ್ ವಿಂಗಡಣೆ ಮಾಡುತ್ತಿದ್ದಾರೆ ಬೆಂಗಳೂರು ನಗರದಲ್ಲಿ 150 ವಾರ್ಡ್‌ಗಳನ್ನು ಏನು ಮಾಡುತ್ತಿದ್ದಾರೆ, ಇದರಲ್ಲಿ ಪ್ರತಿ ವಾರ್ಡ್‌ಗೆ ಜನಸಂಖ್ಯೆ ಎಷ್ಟು? delimitation ಯಾವ ರೀತಿ ಮಾಡುತ್ತಾರೆಂಬ detail ಇಲ್ಲ, ಸುಮ್ಮನೆ ಇದನ್ನು ಮಂಡಿಸಿದ ಮೇಲೆ ಇದರ ಬಗ್ಗೆ ಸರ್ಕಾರದ ಮುಖ್ಯಮಂತ್ರಿಗಳಿಂದ clarification ಕೇಳುತ್ತಿದ್ದೇನೆ. ನಮ್ಮ slums ಗೆ Central Government ನಲ್ಲಿ ಸುಮಾರು ಹಣ ಇದೆ. ಬೆಂಗಳೂರು ನಗರದಲ್ಲಿ ಸುಮಾರು 20.00 ಕೋಟಿ ರೂ.ಗಳನ್ನು ಮಾತ್ರ ಬಜೆಟ್‌ನಲ್ಲಿ ತೋರಿಸಿದ್ದೀರಿ

ಅದರ ಪರಿಣಾಮವಾಗಿ ಇನ್ನು 60.00 ಕೋಟಿ ರೂ.ಗಳು ನಮಗೆ ಸಿಗುತ್ತದೆ, ಆದರೆ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ, ಬೆಳಗಾಂ ಈ ಆರು ಜಿಲ್ಲೆಗಳಲ್ಲಿರುವ ಬಡವರಿಗೆ ಈ ರಾಜ್ಯ ಸರ್ಕಾರ ಕೊಡುವ 20.00 ಕೋಟಿ ರೂ.ಗಳಿಂದ ಯಾವುದೇ ಯೋಜನೆಗಳಿಗೆ ಸಾಕಾಗುವುದಿಲ್ಲ. ಆದ್ದರಿಂದ ಇನ್ನೂ ಹೆಚ್ಚು ಫಂಡ್ಸ್ ಅನ್ನು ಕೇಂದ್ರ ಸರ್ಕಾರ ಕೊಡುವುದರಿಂದ ಆ ಮ್ಯಾಚಿಂಗ್ ಗ್ರಾಂಟ್ಸ್ ಅನ್ನು ರಾಜ್ಯ ಸರ್ಕಾರದವರು ಏನು ಕೊಡಬೇಕು ಅದನ್ನು ಅವರು ಮಾಡಿಟ್ಟುಕೊಂಡರೆ ಆಮೇಲೆ ಬೆಂಗಳೂರು ನಗರದಲ್ಲಿ 150 ವಾರ್ಡ್‌ಗಳನ್ನು ನಿರ್ವಹಿಸಬಹುದು, ಏಕೆಂದರೆ ಈಗಾಗಲೇ ಕಳೆದ 9 ವರ್ಷಗಳಲ್ಲಿ ನಾವು ಶಾಸಕರಾಗಿ ಬೆಂಗಳೂರು ನಗರದ 100 ವಾರ್ಡ್‌ಗಳನ್ನು ಸರಿಯಾಗಿ ಅವರಿಗೆ ನಾವು basic amenities ಕೊಡಲಿಕ್ಕಾಗುತ್ತಿಲ್ಲ. ಇದರಲ್ಲಿ ಯಾವ ಪುರುಷಾರ್ಥವಿದೆ, ರಾಜ್ಯ ಸರ್ಕಾರ ಈ 150 ವಾರ್ಡ್‌ಗಳನ್ನು ಯಾವ ರೀತಿಯಾಗಿ tackle ಮಾಡುತ್ತದೆ. ಈಗ ಬಜೆಟ್ಟಿನಲ್ಲಿ ಸಾವಿರ ಚಿಲ್ಲರೆ Administrative posts sanction ಮಾಡಿದ್ದೇವೆಂದು ಹಾಕಿದ್ದಾರೆ. ಅದಕ್ಕೆ ದುಡ್ಡು ಯಾರು ಕೊಡಬೇಕು, ಬೆಂಗಳೂರು ಮಹಾನಗರದಲ್ಲಿರುವ ಜನರ ಮೇಲೆ ಹೊರೆ ಬೀಳುತ್ತದೆಯೇ ಹೊರತು ರಾಜ್ಯ ಸರ್ಕಾರ ಇದರಲ್ಲಿ ಇನ್ನೂ ಹೆಚ್ಚು ಸಹಾಯಕ್ಕೆ ಬರಬೇಕು. ಏಕೆಂದರೆ ಬೆಂಗಳೂರು ಮಹಾನಗರದಿಂದ ಸುಮಾರು 15,16,000–00 ಕೋಟಿ ರೂಪಾಯಿಗಳ State Government ಗೆ income ಇದೆ, ಅದರಲ್ಲಿ 5% ಕೊಟ್ಟರೂ ಸುಮಾರು 750–800.00 ಕೋಟಿ ರೂ.ಗಳಷ್ಟು ಕೊಟ್ಟರೆ ಬೆಂಗಳೂರು ಮಹಾನಗರದಲ್ಲಿ ಎಲ್ಲಾ ರೀತಿಯಾದ infrastructure solve ಆಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಈಗಲಾದರೂ interim ನಲ್ಲಿ ಹೆಚ್ಚು ಹಣವನ್ನು ಕೊಟ್ಟರೆ ಮಾತ್ರ ಇದರಿಂದ ಅನುಕೂಲವಾಗುತ್ತದೆ ಇಲ್ಲವೆ ಈ 150 ವಾರ್ಡ್‌ಗಳನ್ನು ಮಾಡಿರುವುದರಿಂದ ಇಲ್ಲಿರುವವರಿಗೆ ನಾವು ಏನು ಸೌಲಭ್ಯ ಕೊಡುತ್ತಿದ್ದೇವೆ, ಈ facilities ಅನ್ನು ಕಿತ್ತು ಅವರಿಗೆ ಕೊಡಬೇಕಾಗುತ್ತದೆ. ಯಾವುದೇ ರೀತಿಯಾದ purpose ಇದರಿಂದ solve ಆಗುವುದಿಲ್ಲವೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಂಡು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಎರಡು ಮಾತಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಈಗ ನರೇಂದ್ರಬಾಬು ಎಲ್ಲರೂ ಮಾತನಾಡಿದರೆ ಹೇಗೆ? ಎರಡೇ ನಿಮಿಷ.

**ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :–** ನಾವು ಕೇಳುವುದೊಂದು ಅವಕಾಶ, ಇದು ಬೆಂಗಳೂರಿಗೆ ಸಂಬಂಧಪಟ್ಟ ಬಿಲ್.

**ಅಧ್ಯಕ್ಷರು :–** ಆಯಿತು, ತಾವು ಅವಕಾಶ ಕೇಳುತ್ತೀರಿ, ಇನ್ನು ಎಷ್ಟು ಬಿಲ್ಸ್ ಇವೆ ನೋಡಿ. ಎಲ್ಲಾ ಬಿಲ್‌ಗಳು ಪಾಸಾಗಬೇಕು ಎನ್ನುವಿರೋ, ಬೇಡವೆನ್ನುವಿರೋ, ಅದಲ್ಲದೆ ಆ ಬಿಲ್‌ಗಳು ಆ ಮನೆಗೆ ಬೇರೆ ಹೋಗಬೇಕು, ಅದಲ್ಲದೆ ನೀವು brief ಆಗಿ ಮಾತನಾಡುವುದಿಲ್ಲ, ಎಲ್ಲರೂ ಮಾತನಾಡಬೇಕು ಎಂದರೆ ಹೇಗೆ?

**ಶ್ರೀ ನೆ.ಲ. ನರೇಂದ್ರಬಾಬು :–** ಬಿಲ್ ಬಂದಾಗಿನಿಂದ ನಾವು ಸಿದ್ಧವಾಗಿ ಕಾಯುತ್ತಿರುತ್ತೇವೆ, ನೀವು ಒಂದು ಅವಕಾಶ ಮಾಡಿಕೊಡಿ.

**ಅಧ್ಯಕ್ಷರು :–** ಆಯಿತು, ಎರಡು ನಿಮಿಷಗಳಲ್ಲಿ ಮುಗಿಸಿ.

**ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :–** ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 2006 ಏನು ಮಂಡನೆಯಾಗಿದೆ, ನೂರು ವಾರ್ಡ್‌ಗಳಿಂದ ನೂರೈವತ್ತು ವಾರ್ಡ್‌ಗಳಿಗೆ ವಿಸ್ತರಿಸತಕ್ಕಂಥ ಒಂದು ಉದ್ದೇಶ ಈ ಬಿಲ್‌ನ ಹಿನ್ನೆಲೆ ಏನಿದೆ. ಇದು ನಿಜವಾಗಲೂ ಅಗತ್ಯತೆ ಇತ್ತೇ ಎನ್ನುವ ಪ್ರಶ್ನೆಯನ್ನು ನಾನು ಮೊದಲಿನಿಂದಲೂ ಕೇಳುತ್ತಿದ್ದೇನೆ. ಇವತ್ತು ನಾನು ಆ ಪ್ರಶ್ನೆಯನ್ನು ಕೇಳುತ್ತೇನೆ. ಏಕೆಂದರೆ ಬೆಂಗಳೂರು ನಗರ ಒಂದು ಕಾಲದಲ್ಲಿ ನಿವೃತ್ತರ ಸ್ವರ್ಗ, ಹಸಿರು ನಗರ, ಉದ್ಯಾನನಗರ, ಹವಾನಿಯಂತ್ರಿತ ನಗರ ಎಂದು ಹೆಸರು ವಾಸಿಯಾಗಿದ್ದ ನಗರ ಇವತತು ಹಸಿರು ನಗರವಾಗಿ ಉಳಿದಿಲ್ಲ. ಕಾಂಕ್ರಿಟ್ ಜಂಗಲ್ ಆಗುವಂಥ ಸ್ಥಿತಿಗೆ ನಾವು ತೆಗೆದುಕೊಂಡು ಹೋಗುತ್ತಿದ್ದೇವೆ. ಅಂದೇ ಕೆಂಪೇಗೌಡರು ಎಚ್ಚರಿಕೆಯನ್ನು ಕೊಟ್ಟರು ಬೆಂಗಳೂರು ನಗರ ಗಡಿ ನೀರಿಗಾಗಿ ಏನೇನಾಗುತ್ತದೆಂದು. ಯಾವುದೇ ನಗರ ಮತ್ತು ನಾಗರಿಕತೆ ಬೆಳೆಯುವಂಥಾದು ಒಂದು ನದಿಯ ದಡದ ಮೇಲೆ. ಬೆಂಗಳೂರು ನಗರ ಇದ್ದದ್ದು ಕೆರೆಗಳ ಆಧಾರದ ಮೇಲೆ. ಇದ್ದಂಥ ಮೂಲಭೂತ ನದಿಗಳ ಸೆಲೆಗಳು ಸಹ ಬತ್ತಿಹೋಗಿರುವ ಹಿನ್ನೆಲೆಯಲ್ಲಿ ಬೆಂಗಳೂರು ನಗರವನ್ನು ಯಾವುದೇ ಒಂದು ನಗರವನ್ನಾಗಿ ನೋಡಿದಾಗ, ಆ ನಗರಕ್ಕೆ ತನ್ನದೇ ಆದ ಮೂಲವಾಗಿಬೇಕಾಗಿರುವಂಥಾದ್ದು ನೀರು, ಹಸಿರಿನ ವಾತಾವರಣ ಅವಶ್ಯಕವಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಸಮಯ ಕಡಿಮೆಯಿರುವುದರಿಂದ, ಏನಿವತ್ತು 515 sq.k.m. ಹೆಚ್ಚಿಸಿದ್ದೀರಿ ಇದರಿಂದ ಇವತ್ತಲ್ಲ

ನಾಳೆ ಖಂಡಿತವಾಗಿಯೂ ನಾವು ಪಶ್ಚಾತ್ತಾಪ ಪಡುವ ಸ್ಥಿತಿಗೆ ಬರುತ್ತದೆ. ಇದು explore ಆಗುವುದರಲ್ಲಿ ಯಾವುದೇ ಸಂಶಯವಿಲ್ಲ. ದಯಮಾಡಿ ಹೇಳುತ್ತೇನೆ. ನಾವು ಮೊದಲಿನಿಂದಲೂ ಹೇಳುತ್ತಿದ್ದುದು ಈ ಏಳು ಸಿ.ಎಂ.ಸಿ.ಗಳನ್ನು ಪ್ರತ್ಯೇಕವಾಗಿ ಮಾಡಿ ಈ ನಗರದ ಮಟ್ಟಕ್ಕೆ ಬೆಳವಣಿಗೆಯಾಗಿರುವಂಥ ನಗರವನ್ನು ಪ್ರತ್ಯೇಕ ಮಾಡಿ. Villages ಅನ್ನು ಏನು ತೆಗೆದುಕೊಂಡಿದ್ದೀರಿ ಅದನ್ನು ನಗರಕ್ಕೆ ಸರಿಹೊಂದುವಂತಹ ರೀತಿಯಲ್ಲಿ ಮಾಡುವುದರಿಂದ ಬಹುಶಃ ಬೆಂಗಳೂರು ನಗರ ಸರ್ವತೋಮುಖ ಬೆಳವಣಿಗೆ ಆಗಲು ಅವಕಾಶವಾಗುತ್ತಿತ್ತು. ಇವತ್ತು ಅದಾಗುತ್ತಿಲ್ಲ. ಮತ್ತೊಂದು ಪ್ರಶ್ನೆ ನಾನು ಮೂಲಭೂತವಾಗಿ ಇಡುವುದೇನೆಂದರೆ, 74ನೇ ಸಂವಿಧಾನದ ತಿದ್ದುಪಡಿಯಲ್ಲಿ ಇವತ್ತು ಜನ ಚುನಾಯಿತ ಪ್ರತಿನಿಧಿಗಳು ಇಲ್ಲದೇ ಇರುವಂಥ ಸಂದರ್ಭಗಳಲ್ಲಿ ಅಂದರೆ ಮಹಾನಗರಪಾಲಿಕೆಗಳಲ್ಲಿಯೂ consent ತೆಗೆದುಕೊಳ್ಳಬಹುದಾಗಿತ್ತು. ಚುನಾವಣೆಗಳು ಅಲ್ಲಿ ನಡೆಯದೇ ಇರುವ ಕಾರಣ ಈ ಒಂದು ಜನ ಚುನಾಯಿತ ವಿಧಾನಸಭೆಗೆ ಬಂದಿರತಕ್ಕಂಥ ಸಂದರ್ಭದಲ್ಲಿ ಶಾಸಕರನ್ನು ಕರೆದು ಸುಧೀರ್ಘವಾಗಿ ಚರ್ಚೆ ಮಾಡುವುದಾಗಿ ನಮ್ಮ ಮುಖ್ಯಮಂತ್ರಿಗಳು ಹೇಳಿದರು. ಆಕಸ್ಮಿಕವಾಗಿ ಅದು ಮುಂದೂಡಲ್ಪಟ್ಟಿತು, ಚರ್ಚೆ ಸಮರ್ಪಕವಾಗಿ ಆಗಲಿಲ್ಲ. ಇವತ್ತು ಸಿ.ಡಿ.ಪಿ.ಯನ್ನು ನೋಡಿದಾಗ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಿ.ಡಿ.ಪಿ. ಕೇವಲ norms ಗೋಸ್ಕರ ಮಾಡಿರುವ ಸಿ.ಡಿ.ಪಿ.ಯೇ ಅಥವಾ ಜನಗಳಿಗಾಗಿ ಮಾಡಿರುವ ಸಿ.ಡಿ.ಪಿ.ಯೇ ಎನ್ನುವುದು, ಏಕೆಂದರೆ ಇವತ್ತು ಯಾವುದೇ ಒಂದು ನಗರವಾಗಲಿ buffer zone, green belt ಎನ್ನುವ concept ಇತ್ತು ಅದ್ಯಾವುದನ್ನು ಇವತ್ತು ನಗರದಲ್ಲಿ ಕಾಣುತ್ತಿಲ್ಲ. ಬೆಂಗಳೂರು ನಗರಕ್ಕೆ ಮೂಲವಾಗಿ ಬೇಕಾಗಿರುವುದು ಏನು ಕಾವೇರಿ ಟ್ರಿಬ್ಯುನಲ್‌ನ verdict ಆದ ಮೇಲೆ ಸಂಪೂರ್ಣವಾಗಿ ನಮಗೆ ನೀರೇ ಕೊಡುವುದಿಲ್ಲ. ಕೊಡತಕ್ಕಂಥ ನೀರು ಏನೇನು ಸಾಕಾಗುವುದಿಲ್ಲ ಎನ್ನುವಂಥ ದಿಕ್ಕಿನಲ್ಲಿ ಬೆಂಗಳೂರು ನಗರವನ್ನು ಈ ರೀತಿಯಾಗಿ ಬೆಳೆಸಿಕೊಂಡು ಹೋಗಬೇಕೇ ಎಂಬುದು ಮೂಲಭೂತ ಪ್ರಶ್ನೆ. 150 ವಾರ್ಡ್‌ಗಳು ಹಿಂದೆ 77 ಡಿವಿಷನ್ಸ್ ಏನಿತ್ತು, 100 ವಾರ್ಡ್‌ಗಳಾಗಿ ಪರಿವರ್ತನೆಯಾಯಿತು, ಅಂದಿನಿಂದ ಇಂದಿನವರೆಗೆ ನಾನು ಮೂರು ಬಾರಿ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯನಾಗಿ ಒಬ್ಬ Taxation Finance Committee Chairman ಆಗಿ ನಾನು ಬೆಂಗಳೂರು ನಗರವನ್ನು ಕಂಡಿದ್ದೇನೆ. Financial Memorandaum ನಲ್ಲಿ burden ಇಲ್ಲವೆಂದು ಹೇಳುತ್ತೀರಿ, ನನಗೆ ಆಶ್ಚರ್ಯವಾಗುತ್ತದೆ, ಇವತ್ತು 555 sq.k.m. ಹೆಚ್ಚಿಗೆ ಮಾಡತಕ್ಕಂಥ ದಿಕ್ಕಿನಲ್ಲಿ ಎಷ್ಟು ಪೌರ ಕಾರ್ಮಿಕರು ಬೇಕಾಗುತ್ತಾರೆ? ಎಷ್ಟು ಗ್ಯಾಂಗ್‌ಮೆನ್‌ಗಳು

ಬೇಕಾಗುತ್ತಾರೆ? ಎಷ್ಟು Junior Engineers? Executive Engineers ಬೇಕಾಗುತ್ತಾರೆ? ಬೀದಿ ದೀಪಗಳ ನಿರ್ವಹಣೆ ಹೇಗಾಗಬೇಕು? Solid waste management ಹೇಗಾಗಬೇಕು? 90 ಕೋಟಿ. ರೂ.ಗಳು ಕೇವಲ ಪ್ರೈವೇಟ್ outsource ಮಾಡಿರತಕ್ಕಂಥ solid waste management ಕೊಡುತ್ತಿದ್ದೇವೆ.

**ಅಧ್ಯಕ್ಷರು :-** ನರೇಂದ್ರಬಾಬು ಬೇಗ ಮುಗಿಸಿ.

**ಶ್ರೀ ನೆ.ಲ. ನರೇಂದ್ರಬಾಬು :-** ಈ ರೀತಿ ಮಾಡುತ್ತಿರುವುದು ಸರಿಯಿಲ್ಲ. ಎರಡನೆಯದು ನೀವು ಬಹುಶಃ ವಾರ್ಡ್‌ಗಳನ್ನು ಹೆಚ್ಚು ಮಾಡಲೇಬೇಕು ಎಂದು ತೀರ್ಮಾನವಾಗಿರುವುದರಿಂದ additional area ದಲ್ಲಿಯೂ Financial Memorandum ಇಲ್ಲದೇನೆ ಇರತಕ್ಕಂಥದ್ದು ಈ ಬಿಲ್‌ನಲ್ಲಿ ಕಾಣುತ್ತಿದೆ. ಎಲ್ಲೋ ಒಂದು ಕಡೆ ನಾವು ಇವತ್ತು ಕೇವಲ 83 ವಾರ್ಡ್‌ಗಳನ್ನು increase ಮಾಡಿ ಒಂದು ಸ್ಥಿತಿಯಲ್ಲಿ ಅದನ್ನು ಸರಿಯಾಗಿ ತರಲಿಕ್ಕೆ ಹತ್ತು ವರ್ಷವಾಯಿತು. ಇನ್ನು 515 sq.k.m.ಗೆ ತರಬೇಕಾದರೆ ಗರಿಷ್ಠ 50 ವರ್ಷ ಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಬಹಳ ಸಂದಿಗ್ಧ ಸ್ಥಿತಿಯಲ್ಲಿ suffer ಮಾಡಬೇಕಾಗುತ್ತದೆ ಮತ್ತು ಇವತ್ತು livable city ಆಗಿ ಬೆಂಗಳೂರು ಆಗುವ ಲಕ್ಷಣ ಕಾಣುತ್ತಿಲ್ಲ. ಇದು ಇವತ್ತು ಒಂದು ಕ್ರೈಮ್ ಸಿಟಿಯಾಗಿ ರಿಯಲ್ ಎಸ್ಟೇಟ್ ದಂಧೆಗೆ ಅವಕಾಶ ಕೊಟ್ಟ ಹಾಗೆ ಆಗುತ್ತಿದೆ. ಇವತ್ತು ಬೆಂಗಳೂರಿನ ಸುತ್ತ ಮುತ್ತ ಇದ್ದಂಥ ರೈತರನ್ನೆಲ್ಲಾ ಒಕ್ಕಲೆಬ್ಬಿಸಿ ಬಹುಶಃ ಮುಂದಿನ ದಿನಗಳಲ್ಲಿ ಯಾವ ದಿಕ್ಕಿಗೆ ಬೆಂಗಳೂರನ್ನು ತೆಗೆದುಕೊಂಡು ಹೋಗುತ್ತೇವೋ ಅನ್ನುವಂಥ ಅಪಾಯದ ಎಲ್ಲಾ ಸೂಚನೆಗಳು ಕಾಣುತ್ತಿವೆ, ಇದರಿಂದ ಬೆಂಗಳೂರನ್ನು ಸ್ವರ್ಗವನ್ನಾಗಿ ಮಾಡುವ ಬದಲು ನರಕವನ್ನಾಗಿ ಮಾಡುತ್ತೀವೇನೋ, ಎಂದು ನನಗನ್ನಿಸುತ್ತಿದೆ, vertical growth ಒಂದು ಕಡೆಯಾಗುತ್ತಿದೆ, Horizontal growth ಮಾಡಿ ಬೆಂಗಳೂರು ನಗರವನ್ನು ಸಂಪೂರ್ಣವಾಗಿ ಆಸ್ಫೋಟ ಮಾಡಿ Bangalore is going to be dying city. ಇದೊಂದು ದುರದೃಷ್ಟಕರ. ಈ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವುದು ಸಮರ್ಪಕವಲ್ಲ. ಇದನ್ನು ಸಣ್ಣ ಸಣ್ಣದಾಗಿ ಮಾಡಿ. Small is always beautiful. Administration point of view ಇರಬಹುದು ಅಥವಾ ಯಾವುದೇ ಒಂದು ನಿರ್ವಹಣೆ ಮಾಡುವ ದೃಷ್ಟಿಯಿಂದಲೂ ಮತ್ತೆ ಬೆಂಗಳೂರು ಮಹಾನಗರ ಪಾಲಿಕೆಯ ಮಹಾ ಪೌರವನ್ನು ಸಹ ಆಗಲೇ ಹಿರಿಯರು ಹೇಳಿದ ಹಾಗೆ 5 ವರ್ಷಕ್ಕೆ ಚುನಾವಣೆಯನ್ನು ಇನ್ನು ಮುಂದೆ ಮಾಡಬೇಕು ಮತ್ತು Geographical area ಮತ್ತು population

ಇವೆರಡನ್ನೂ proportion ಆಗಿಟ್ಟುಕೊಂಡು ವಾರ್ಡ್‌ಗಳನ್ನು ಪುನರ್ ವಿಂಗಡಣೆ ಮಾಡಬೇಕು, ಈ ದಿಕ್ಕಿನಲ್ಲಿ Democracy ಮತ್ತೆ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಪುನಃಶ್ಚೇತನವಾಗಬೇಕು ಎಂದು ನಾನು ಸಲಹೆ ಕೊಡಲಿಕ್ಕೆ ಮತ್ತೆ ಒಂದು ಮನವಿ ಮಾಡುತ್ತೇನೆ. ದಯಮಾಡಿ ಕೇವಲ ನಮ್ಮಂಥ ಸದಸ್ಯರನ್ನು ಕೋರಂ ಸದಸ್ಯರನ್ನಾಗಿ ಇಟ್ಟುಕೊಳ್ಳದೇ ಮಾತನಾಡಲಿಕ್ಕೆ ಅವಕಾಶ ಕೊಡಿ ಎಂದು ತಮ್ಮಲ್ಲಿ ವಿನಂತಿಸುತ್ತೇನೆ.

**(ಗೊಂದಲ)**

**ಅಧ್ಯಕ್ಷರು :–** ಗೌಡರೇ, ಇಲ್ಲ, ಇನ್ನು ಎಷ್ಟು ಬಿಲ್‌ಗಳಿವೆ ನೋಡಿ, ನಾಳೆ ಕೊನೆಯ ದಿವಸ, ಆ ಮನೆಗೆ ಬೇರೆ ಹೋಗಬೇಕು.

**ಶ್ರೀ ಎನ್. ಧರಂಸಿಂಗ್ :–** ಆಗುತ್ತದೆ ಬಿಡಿ, ಈಗ ಪ್ರಾರಂಭದಲ್ಲಿ ಈಗಾಗಲೇ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಇವತ್ತು ಬೆಂಗಳೂರು ಶಾಸಕರು ಬಹಳಷ್ಟು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅದು ಸಮಂಜಸವಾಗಿದೆ. ನಮ್ಮ ಕೃಷ್ಣಪ್ಪ, ರೋಷನ್‌ಬೇಗ್ ಹೇಳಿದ್ದಾರೆ ಮತ್ತೆ ವಿಶೇಷವಾಗಿ ನಮ್ಮ ಸೋಮಣ್ಣನವರು ಮತ್ತೆ ನಮ್ಮ ಸೀತಾರಾಂ ಹಾಗೂ ನರೇಂದ್ರಬಾಬುರವರು ಮಾತನಾಡತಕ್ಕಂಥ ಕಾಲದಲ್ಲಿ ಒಂದಂಶವನ್ನು ನೆನಪಿಗೆ ತಂದಿದ್ದಾರೆ. ಜವಹರಲಾಲ್ ನೆಹರು programme ಏನಿದೆ, ಎರಡು ವರ್ಷಗಳ ಹಿಂದೆ ಪ್ರಧಾನ ಮಂತ್ರಿಗಳು ಎಲ್ಲಾ ಮುಖ್ಯಮಂತ್ರಿಗಳನ್ನು ಕರೆದು ಸಭೆ ನಡೆಸಿದ್ದರು, ಬೆಂಗಳೂರಿಗೆ 10,779.00 ಕೋಟಿ ರೂ., ಮೈಸೂರಿಗೆ 8,000 ಕೋಟಿ ರೂ., ಹುಬ್ಬಳ್ಳಿ ಧಾರವಾಡ ಕೂಡ ಸೇರಿಸಬೇಕೆನ್ನುವುದು ಕೂಡ ತೀರ್ಮಾನ ಆಯಿತು, ತದನಂತರ ಜಯಪಾಲ್‌ರೆಡ್ಡಿಯವರು ಕರೆದಂಥ ಸಭೆಯಲ್ಲಿಯೂ ಕೂಡ ಭಾಗವಹಿಸಿದ್ದೆವು. ಅವರೇನು ಹೇಳಿದ್ದಾರೆ, ಎಲ್ಲಿಯವರೆಗೆ elected bodies ಇರುವುದಿಲ್ಲ ಹಣ ಬಿಡುಗಡೆ ಮಾಡುವುದಿಲ್ಲ. ಇವತ್ತು ಅಷ್ಟು ಹಣವನ್ನು ಕೊಟ್ಟ ಮೇಲೆ ಎರಡು ವರ್ಷಗಳ ಹಿಂದೆ ಆದಂಥ ಮಾತು, ಇವತ್ತು ಅದಕ್ಕೆ ಹಣವನ್ನು ಸಹ ಕೊಡಬೇಕು. That is a very important scheme. ಪ್ರಧಾನಮಂತ್ರಿಯವರು ನೇರವಾಗಿ ಎಲ್ಲಾ ರಾಜ್ಯದ ಎಲ್ಲಾ ಮುಖ್ಯಮಂತ್ರಿಗಳಿಗೆ ಆದೇಶ ಕೊಟ್ಟಿದ್ದಾರೆ. ಬೆಂಗಳೂರು ನಗರ ಬೆಳೆಯುತ್ತಿದೆ. Mysore is a historical place. ಇವತ್ತು ಉತ್ತರ ಕರ್ನಾಟಕ ಭಾಗದಲ್ಲಿ ಹುಬ್ಬಳ್ಳಿ, ಧಾರವಾಡ, ಇದಕ್ಕೆ ಇಷ್ಟು ಹಣ ಕೊಟ್ಟಲ್ಲಿ,

slum ನಲ್ಲಿ ಕೂಡ ಬಹಳಷ್ಟು ಹಣ ಕೊಡುತ್ತಾರೆ ಅದಕ್ಕೆ ಒಟ್ಟಾರೆ ರಾಜ್ಯದ ಹಿತದೃಷ್ಟಿಯಿಂದ ಬೆಳೆಯುತ್ತಿರುವಂಥ ಬೆಂಗಳೂರು ನಗರದಲ್ಲಿ ಏನು ಸಮಸ್ಯೆಗಳಿವೆ, ಅದನ್ನು ಬಗೆಹರಿಸುವಂಥ ರೀತಿಯಲ್ಲಿ elected bodies ಗೆ ಕೊಡುತ್ತಾರೆ, ಚುನಾವಣೆ ಮಾಡತಕ್ಕಂಥ ಶಾಸನ ಮಾಡಬೇಕು. ತರಾತುರಿಯಾಗಿ ಇವತ್ತಿನ ದಿವಸ 800 Sq.k.m. ಮಾಡಿದರೆ ಬೆಂಗಳೂರು ನಗರ ಹೇಗೆ ಅಭಿವೃದ್ಧಿಯಾಗುತ್ತದೆ? ಬಸವಲಿಂಗಪ್ಪನವರು ಕೂಡ ಹಳ್ಳಿಗಳನ್ನು ಸೇರಿಸಿದ್ದರು, 1964ರಲ್ಲಿ ಆಯಿತು, ಮತ್ತೆ 65 ರಿಂದ 75 ಆಯಿತು, 100 ಆಯಿತು. 30–50 ಸದಸ್ಯರನ್ನು ಮಾಡಿ, ಬೆಂಗಳೂರು ನಗರಕ್ಕೆ ನೀರಿನ ಸಮಸ್ಯೆಯಿದೆ ಎಂದು ಸೋಮಣ್ಣನವರು ಹೇಳಿದ್ದಾರೆ. ಅದಕ್ಕೆ ಜಪಾನ್‌ನ ಬ್ಯಾಂಕ್‌ನಿಂದ ತೆಗೆದುಕೊಂಡಂಥ 3,384–00 ಕೋಟಿ ರೂ.ಗಳಲ್ಲಿ ಎಷ್ಟು ಖರ್ಚು ಮಾಡಿದ್ದೀರಿ? ಅಶೋಕ್‌ರವರಿಗೆ ಕೇಳುತ್ತೇನೆ, ಬೆಂಗಳೂರು ನಗರದಲ್ಲಿರುವ ಹಾಹಾಕಾರಕ್ಕೆ ಏತಕ್ಕೆ speed up ಮಾಡುತ್ತಿಲ್ಲ. ನಾವು ಒಂದೂವರೆ ವರ್ಷದ ಹಿಂದೆ ಪ್ರಾರಂಭ ಮಾಡಿದಂಥ ಜಪಾನ್ ಬ್ಯಾಂಕ್‌ನವರು ನಾಳೆ ಬಂದು ಕೇಳಿ Where is the progress ಎಂದರೆ ಏನು ಉತ್ತರ ಕೊಡುತ್ತೀರಿ? ಇವತ್ತೆಷ್ಟು ನೀರಿನ ಬವಣೆ ಇದೆ, ನೀವು ಖರ್ಚು ಮಾಡದೆ ಕೇಂದ್ರದಿಂದ ಬಂದಂಥ ಹಣವನ್ನು ಖರ್ಚು ಮಾಡಿದರೆ ಸಾಕು. ಮೆಟ್ರೋ ಬಗ್ಗೆ ಏನಾಗಿದೆ? ನಾವು ಹೇಳಿದ ಮೇಲೆ ಮೆಟ್ರೋ ನಿಂತಿತು, ನಾವು ಆದ ಮೇಲೆ ಮೆಟ್ರೋ ಚಾಲೂ ಆಯಿತು, ಮೆಟ್ರೋ ಬಗ್ಗೆ ಏನಾಗುತ್ತಿದೆ. ಇವತ್ತು ಮೆಟ್ರೋ ಬಗ್ಗೆ ರಾಮಚಂದ್ರೇಗೌಡರು, ಬೇರೆ ಬೇರೆ ಶಾಸಕರು ಏನು ಹೇಳುತ್ತಾರೆ? ಬೆಂಗಳೂರು ನಗರ ಜನ ಏನು ಹೇಳುತ್ತಾರೆ? ಅದಕ್ಕೆ ಎಷ್ಟು ಹಣ ಇಟ್ಟಿದ್ದೀರಿ ಇವೆಲ್ಲವನ್ನೂ ಕೂಡ ಕೂಲಂಕುಷವಾಗಿ ಹೇಳಬೇಕಾಗುತ್ತದೆ. ಅದಕ್ಕೆ ನಾವು ಹೇಳುವುದೇನೆಂದರೆ 800 sq.k.m. ಬಹಳ ಆಯಿತು, ಅದನ್ನು ಮಾಡಲಿಕ್ಕೆ ಸಾಮರ್ಥ್ಯ ಇಲ್ಲ, ಇವತ್ತು 60 sq.k.m. ಸೇರಿಸಿ ಸಾಕಷ್ಟು ಅಭಿವೃದ್ಧಿಯಾಗಿಲ್ಲ, ಬೆಂಗಳೂರು ನಗರ ವ್ಯವಸ್ಥಿತ ರೀತಿಯಲ್ಲಿ ಆಗಬೇಕು, ಇದು ಕೊನೆಯಾಗಬೇಕಾದರೆ Metropolitan Authority ಆಗಬೇಕು. ಯಾವ ರೀತಿಯಾಗಿ ದೆಹಲಿ, ಬಾಂಬೆಯಲ್ಲಿದೆ, ಮದ್ರಾಸ್, ಕಲ್ಕತ್ತಾ, ಹೈದರಾಬಾದನಲ್ಲಿಯೂ ಕೂಡ ಇದೆ, Metropolitan Authority consisting of Water Supply Board, B.D.A, Slum Board, Housing Board ಇವೆಲ್ಲವನ್ನು consultation ಮಾಡಬೇಕು. ಇವತ್ತು ಬಿ.ಡಿ.ಎ.ನವರು ಲೇಔಟ್ ಮಾಡುತ್ತಾರೆ, ನೀರು ಕೊಡತಕ್ಕಂಥ ಶಕ್ತಿಯಿಲ್ಲ. There is no co-ordination at all. ಅದಕ್ಕೆ ಮೆಟ್ರೋ ಪಾಲಿಟನ್

ಅಥಾರಿಟಿ ಬಗ್ಗೆ ಕೂಡ ನಾವು ಪ್ರಾರಂಭ ಮಾಡಿದ್ದೇವೆ, ಮುಂದೆ ಏನಾಗಿದೆ ಅದರ ಬಗ್ಗೆ you have to take a decision, ಅದಕ್ಕೆ ನಾವು ವಿರೋಧ ಮಾಡತಕ್ಕಂಥದ್ದು ಅಲ್ಲ, ನೀವು ಒಮ್ಮೆಗೆ 100 ಇದ್ದುದನ್ನು 150 ಮಾಡಿ 800 sq.k.m.ಏತಕ್ಕೆ ವಿಸ್ತರಣೆ ಮಾಡಿದ್ದೀರಿ? ಅದರಿಂದ ಏನು benefit ಇದೆಯೆಂದು ನಮಗೆ ಗೊತ್ತಾಗುತ್ತಿಲ್ಲ, ತಾವು ಉತ್ತರ ಕೊಡತಕ್ಕಂಥ ಕಾಲದಲ್ಲಿ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಹೇಳಬೇಕೆಂದು ಕೇಳುತ್ತೇನೆ.

**ಶ್ರೀ ಕೆ. ಶ್ರೀನಿವಾಸಗೌಡ** :- ನಮ್ಮ ದೇಶದಲ್ಲಿ ಪ್ಲಾನಿಂಗ್ ಕೇವಲ 5 ವರ್ಷಗಳಿಗೆ ಇಟ್ಟುಕೊಳ್ಳುತ್ತಾರೆ. ನೀವೇನು Grater Bangalore ಮಾಡುತ್ತಿದ್ದೀರಿ, ಅದನ್ನು ಮುಂದಿನ 100 ವರ್ಷಗಳ ದೃಷ್ಟಿಯಿಟ್ಟುಕೊಂಡು ಮಾಡಿ, ಮೇಯರ್ ಹುದ್ದೆಗು ನೇರ ಚುನಾವಣೆ ನಡೆಸಿ. 150 ಸದಸ್ಯರ ಕೌನ್ಸಿಲ್ ಒಂದು ತೀರ್ಮಾನಕ್ಕೆ ಬರಲು ಸಾಧ್ಯವೇ? ಆದರೆ ಬೇರೆ ಕಾರ್ಪೋರೇಷನ್ ಮಾಡುವುದು ನಿಮ್ಮ ಮುಂದಿಲ್ಲ, ಇದರ ಬಗ್ಗೆ ಯೋಚಿಸಬೇಕೆಂದು ಕೋರುತ್ತೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** :- ಅಧ್ಯಕ್ಷರೇ ಸುದೀರ್ಘ ಚರ್ಚೆ ನಡೆದು ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಎ ಕೃಷ್ಣಪ್ಪನವರು ನಮಗೆ ವಿಷನ್ ಇಲ್ಲ ಎಂದರು. ಅವರು ಹೇಳುವ ವಿಷನ್ ಬಗ್ಗೆ ಚರ್ಚೆ ಮಾಡೋಣ. ನಾನು ಪುಟ್ಟೇನಹಳ್ಳಿ ಬಡಾವಣೆಗೆ inspection ಗೆ ಹೋದ ಸಂದರ್ಭದಲ್ಲಿ ಗಂಡ ಬಿಟ್ಟ ಒಬ್ಬ ಹೆಣ್ಣುಮಗಳು, 6 ವರ್ಷದ ಮಗಳಿದ್ದಾಳೆ, ಅವಳು ರಾಜಕಾಲುವೆಯಲ್ಲಿ ಮನೆ ಕಟ್ಟಿದ್ದಾಳೆ, BDA ನವರು ಆ ಮನೆ ಒಡೆಯಲು ನೋಟೀಸ್ ಕೊಟ್ಟಿದ್ದರು. ಅವಳು ಯಾವುದೋ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿ, ಸಾಲ ಮಾಡಿ, ಆ ರಾಜಕಾಲುವೆಯಲ್ಲಿ ಯಾರೋ ಆ ಅಮಾಯಕ ಹೆಣ್ಣುಮಗಳಿಗೆ ನಿವೇಶನ ಮಾರಿ ಬೊಮ್ಮನಹಳ್ಳಿ ನಗರಸಭೆಯಿಂದ ನಕ್ಷೆಯೂ ಮಂಜೂರಾಗಿದೆ. ಆ ಹೆಣ್ಣುಮಗಳನ್ನು ನಾನು ಮಾನವೀಯವಾಗಿ ನೋಡಬೇಕೋ ಅಥವಾ ಅವಳು ಕಟ್ಟಿಕೊಂಡಿರುವ ಮನೆ ಒಡೆಯಬೇಕೋ ತೀರ್ಮಾನ ಹೇಳಬೇಕು. ಮನೆ ಒಡೆಯಿರಿ ಅನ್ನುತ್ತಾರೆ ಅವರು. ಅಥವಾ ಇಂಥ ಅಮಾಯಕರನ್ನು ದಿಕ್ಕುತಪ್ಪಿಸುವ ಭೂಗಳ್ಳರನ್ನು ಜೈಲಿಗೆ ಹಾಕಬೇಕೋ? ಹಿಂದೆ ಇಂತಹ ಘಟನೆ ಏನಾಗಿದೆ ಆ ರೀತಿ ವಿಷನ್ ಇಟ್ಟುಕೊಂಡು ಇಂಥವರಿಗೆ ನಾವು ಸಹಕಾರ ಕೊಡಬೇಕೇ ಅಂತ ಕೇಳಬಯಸುತ್ತೇನೆ. ಇವತ್ತು 100 ರಿಂದ 150ಕ್ಕೆ ಹೆಚ್ಚಿಸಬೇಕೆಂದು ನಾವೇನು ವಿಧೇಯಕ ತಂದಿದ್ದೇವೆ ಇದು ತರಾತುರಿ ನಿರ್ಧಾರವೆಂದರು, ವಿರೋಧ ಪಕ್ಷದ

ನಾಯಕರು. ಇದು ತರಾತುರಿಯ ನಿರ್ಧಾರವಲ್ಲ. ಈಗಾಗಲೇ pre notify ಮಾಡಿ, ಜನರ ಅಭಿಪ್ರಾಯ ಕೇಳಿ, ನಗರಸಭೆ ಅಭಿಪ್ರಾಯಗಳನ್ನೂ ಕೇಳಿ. ಗ್ರಾಮ ಪಂಚಾಯಿತಿ ಅಭಿಪ್ರಾಯಗಳೆಲ್ಲದರ ಆಧಾರದ ಮೇಲೆ 740 sq. ಕಿ.ಮೀಗೆ ವಿಸ್ತರಿಸುವ ಈ ಕಾರ್ಯಕ್ರಮದಡಿ ಕೃಷ್ಣಪ್ಪನವರು ಇನ್ನೂ 15–20 ಹಳ್ಳಿ ಸೇರಿಸಬೇಕು ಅಂತ ಅಧಿಕಾರಿಗಳಿಗೆ ಪತ್ರ ಕೊಟ್ಟಿರುವುದೂ ಇದೆ. ಇದು ಯಾವುದೇ ಕಾರಣಕ್ಕೂ ತರಾತುರಿ ನಿರ್ಧಾರವಲ್ಲ. ಕಳೆದ 5–6 ವರ್ಷಗಳಲ್ಲಿ ಬೆಂಗಳೂರು ಬೆಳೆದಿರುವುದು, ಪದೇ ಪದೇ ಕೃಷ್ಣಪ್ಪನವರು ನಮ್ಮ ಕಾಲದಲ್ಲಿ ಬೃಹತ್ ಕೈಗಾರಿಕೆಗಳು ಬಂದವು ಅಂತ, ಆ ಕೈಗಾರಿಕೆಗಳನ್ನು ತಂದಿರುವ ಸಂದರ್ಭದಲ್ಲಿ ನಿಮ್ಮ ವಿಷನ್ ಸರಿಯಾಗಿ implement ಮಾಡಿದ್ದರೆ, ಧರಂಸಿಂಗ್‌ರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಸುರಿದ ಅತಿವೃಷ್ಟಿಯಿಂದ ಬೆಂಗಳೂರಿನಲ್ಲಿ ಆದ ಅನಾಹುತಗಳಿಗೆ ಕಾರಣ ಆ ವಿಷನ್. 83, 94ನೇ ಇಸವಿಗಳಲ್ಲಿ ನಾವು ದೊಡ್ಡ ಸಾಧನೆ ಮಾಡಿದೆವು ಅಂತ ನಾನು ಎಲ್ಲೂ ಹೇಳುತ್ತಿಲ್ಲ. ಎಸ್.ಎಂ. ಕೃಷ್ಣ ಇನ್ನೊಂದು ಟರ್ಮ್ ಇದ್ದಿದ್ದರೆ ಬೆಂಗಳೂರು ಸಿಂಗಪುರವಾಗುತ್ತಿತ್ತು ಎಂದಿರಲ್ಲ ಅದಕ್ಕೆ ಹೇಳಿದ ಅಷ್ಟೇ.

**ಶ್ರೀ ಧರಂ ಸಿಂಗ್ :–** ನಮ್ಮ ಕಾಲದಲ್ಲಿ fly overs ಪ್ರಾರಂಭಿಸಲಿಲ್ಲವೇ ಭೂಗಳ್ಳರನ್ನು ಜೈಲಿಗೆ ಕಳಿಸಲು ಬಿಲ್ ಪಾಸ್ ಮಾಡಿಕೊಟ್ಟಿದ್ದೇವೆ, ಕಳಿಸಿ, ನಿಮಗೆ ಧೈರ್ಯವಿದ್ದರೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ :–** ತಾವು ಇವತ್ತು ಬೆಳಗಿನಿಂದ ಏಕೆ ಇಷ್ಟೊಂದು ಕೋಪದಲ್ಲಿದ್ದಿರೋ ನನಗೆ ಗೊತ್ತಿಲ್ಲ. ನೀವು ಬಹಳ ಶಾಂತಮೂರ್ತಿಗಳು, ನಿಮ್ಮ ತಾಳ್ಮೆ ನೋಡಿಯೇ ನಾನೂ ತಾಳ್ಮೆಯಿಂದಿರಬೇಕೆನ್ನಿಸಿದ್ದು ನೀವೇ ನನಗೆ ಗುರುಗಳು. ಅಧ್ಯಕ್ಷರೇ ಈ ವಿಷಯಗಳ ಬಗ್ಗೆ ನಾನು ರಾಜಕೀಯ ಬೆರೆಸಲು ಹೋಗುವುದಿಲ್ಲ. ಪ್ರಚಾರಕ್ಕೂ ಹೋಗುವುದಿಲ್ಲ. ಯಾಕೆಂದರೆ ಪ್ರಚಾರಕ್ಕಿಂತ ಹೆಚ್ಚಾಗಿ ಒಂದು ಸರ್ಕಾರ ನಡೆಸುವಾಗ ಜವಾಬ್ದಾರಿ ನಿರ್ವಹಣೆಯಲ್ಲಿ ಪ್ರಾಮಾಣಿಕತೆ ಇರಬೇಕು ಎಂಬ ಭಾವನೆಯಲ್ಲಿ ಇವತ್ತು ಕೆಲಸ ಮಾಡುತ್ತಿದ್ದೇನೆ. ಈಗಾಗಲೇ ಕಸ್ತೂರಿರಂಗನ್ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ರಚನೆ ಕುರಿತು ಒಂದು ಸಮಿತಿ ರಚಿಸಿದ್ದೇವೆ. ಶ್ರೀನಿವಾಸ ಗೌಡರು ಕೋಲಾರವನ್ನು ಮನಸಿನಲ್ಲಿಟ್ಟು ನೂರು ವರ್ಷದ ವಿಷನ್ ಇಟ್ಟುಕೊಳ್ಳಬೇಕು ಎಂದಿರಬಹುದು. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡೇ 150 ಸ್ಥಾನಕ್ಕೇರಿಸಲು ಹೊರಟಿದ್ದೇವೆ. ನರ್ಮ್ ಮಾಡಿ ರೂ. 22,400 ಕೋಟಿ ಬರುತ್ತದೆ. ಜನಪ್ರತಿನಿಧಿಗಳು ಇರದಿದ್ದರೆ ಕೇಂದ್ರದಿಂದ ಹಣ ಬರುವುದಿಲ್ಲ ಎಂದು ಕೆಲವು

ಸದಸ್ಯರು ಹೇಳಿದರು. ಈ ಪ್ರಾಜೆಕ್ಟ್ ಅಪ್ರೂ ಆಗುವಾಗ ಜನಪ್ರತಿನಿಧಿಗಳಿದ್ದರು, ಕೇಂದ್ರ ಸರ್ಕಾರ ಇದಕ್ಕೆ ಸಂಪೂರ್ಣ ಒಪ್ಪಿಗೆ ಕೊಟ್ಟಿದೆ, ಇದರಲ್ಲಿ ನಿಧಾನ ಗತಿ ಪ್ರಶ್ನೆ ಉದ್ಭವಿಸುವುದಿಲ್ಲ. ಜೊತೆಗೆ ಕಾರ್ಪೊರೇಷನ್ ಬಜೆಟ್ ಮೇಲೂ ಕೃಷ್ಣಪ್ಪ ಹೇಳಿದರು. ಹೊಸ ಜೋನ್‌ಗಳಿಗೆ ಒದಗಿಸುವುದಕ್ಕಾಗಿ 603 ಕೋಟಿ ಬಜೆಟ್ನಲ್ಲಿ ಇಡಲಾಗಿದೆ. ಕುಡಿಯುವ ನೀರಿನ ಕುರಿತು, ಮುಂದಿನ 3–4 ವರ್ಷಗಳಲ್ಲಿ 4,500 ಕೋಟಿ ವೆಚ್ಚದಲ್ಲಿ ಬೆಂಗಳೂರಿಗೆ ಕುಡಿಯುವ ನೀರೊದಗಿಸಲು ಜಲಮಂಡಳಿಯಿಂದ ಪ್ರಕ್ರಿಯೆ ಪ್ರಾರಂಭವಾಗಿರುವುದರ ಬಗ್ಗೆಯೂ ನಾವು ಗಮನಹರಿಸಿದ್ದೇವೆ. ಇದರಲ್ಲಿ ಯಾವ ಅನುಮಾನಗಳೂ ಬೇಕಾಗಿಲ್ಲ. ಇದನ್ನೆಲ್ಲ ಗಮನದಲ್ಲಿಟ್ಟೇ ಈ ಒಂದು ಬೃಹತ್ ಬೆಂಗಳೂರಿನ ವಿಷಯದಲ್ಲಿ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿರತಕ್ಕದ್ದು. ಇದರಲ್ಲಿ ಯಾವುದೇ ರೀತಿಯ ತರಾತುರಿಯ ನಿರ್ಧಾರವನ್ನು ಮಾಡಿಲ್ಲ. ಇವತ್ತು ಸದನದ ಗಮನಕ್ಕೆ ತರತಕ್ಕದ್ದು ಸುಮಾರು 114 ಜನ preliminary notification ಅನ್ನು ಮಾಡಿದ್ದಾಗ ಏನು objection ಗಳನ್ನು ಹಾಕಿದ್ದರು, ಅದರಲ್ಲಿ 80 ಜನ ಇದಕ್ಕೆ favour ಆಗಿ ಈ ಒಂದು ಕಾರ್ಯಕ್ರಮ ಆಗಬೇಕೆಂದು ಹೇಳಿ 34 ಜನ ಇದು ಬೇಡ ಎಂದು ಹೇಳಿ objection ಗಳನ್ನು raise ಮಾಡಿದ್ದಾರೆ. ಗ್ರಾಮಪಂಚಾಯಿತಿಗಳಲ್ಲಿ 32 ಗ್ರಾಮ ಪಂಚಾಯಿತಿಗಳು ಈ ಒಂದು ಬೃಹತ್ ಮಹಾನಗರಪಾಲಿಕೆಗೆ ನಮ್ಮನ್ನು ತರಬೇಕೆಂದು ಹೇಳಿ ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಎಂಟು ಗ್ರಾಮ ಪಂಚಾಯಿತಿಯವರು ಬೇಡ ಎನ್ನುವುದಕ್ಕೆ, ಅದನ್ನು ಹೇಳಿರುವ ಕಾರಣ ಅವರ ಗ್ರಾಮ ಪಂಚಾಯಿತಿ ಅವಧಿ ಸಂಪೂರ್ಣವಾಗಿಲ್ಲ, ಆ ದೃಷ್ಟಿಯಿಂದ ಹೇಳಿದ್ದರು. ಅದರ ಜೊತೆಗೆ CMC ಗಳಲ್ಲಿ ಆರು CMC ಯವರು ಈ ಒಂದು ಬೃಹತ್ ಮಹಾ ನಗರಪಾಲಿಕೆಗೆ ನಮ್ಮ ಒಂದು CMC ಗಳನ್ನು ಸೇರಿಸಬೇಕೆಂದು ಒಪ್ಪಿಗೆ ಕೊಟ್ಟಿರತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದೇ ರೀತಿ ಇವತ್ತು ಬೆಂಗಳೂರು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈ de-limitation ಮಾಡುವುದಕ್ಕೆ ಮಾಧುಸ್ವಾಮಿಯವರೇನು ಈ ಒಂದು ವಾರ್ಡ್‌ಗಳನ್ನು ಮಾಡತಕ್ಕ ಸಂದರ್ಭದಲ್ಲಿ ಭೌಗೋಳಿಕವಾಗಿ ಮತ್ತೆ ಜನಸಂಖ್ಯೆ ಆಧಾರದ ಮೇಲೆ ಮಾಡತಕ್ಕ ಸಂದರ್ಭದಲ್ಲಿ ಅದು ಯಾವ ರೀತಿ ಆಗಬೇಕೆನ್ನುವ ಬಗ್ಗೆ ಅವರು ಸಲಹೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಗಮನ ಹರಿಸುವುದಕ್ಕೆ ಈಗಾಗಲೇ ನಾವು ತೀರ್ಮಾನವನ್ನು ಮಾಡಿದ್ದೇವೆ. ಈ ಒಂದು ಭೌಗೋಳಿಕವಾಗಿ ಮತ್ತು ಜನಸಂಖ್ಯೆಯ ಆಧಾರದ ಮೇಲೆ

ಮಾಡಬೇಕಾದರೆ ಈ ಒಂದು de-limitation ವಿಷಯದಲ್ಲಿ ನಾವು ಈಗಾಗಲೇ ಒಂದು private agency ಯನ್ನು consult ಮಾಡುವುದಕ್ಕೂ ಸಹ ತೀರ್ಮಾನವನ್ನು ಮಾಡಿದ್ದೇವೆ, ಇದನ್ನೆಲ್ಲ ಗಮನದಲ್ಲಿಟ್ಟೇ ಈ ಒಂದು ಹೊಸ ಕಾರ್ಯಕ್ರಮವನ್ನು ತರುತ್ತಿರುವುದು. ಅದೇ ರೀತಿ ಇವತ್ತೇನು JNNURM project ವಿಷಯದಲ್ಲೂ ತಾವು ಹೇಳುತ್ತಿದ್ದೀರಿ. ಇದು ಕೇಂದ್ರ ಸರ್ಕಾರದ ಹಣವೆಂದು ಹೇಳಿ, ಕೇಂದ್ರ ಸರ್ಕಾರ ಸಂಪೂರ್ಣ ಹಣವನ್ನು ಕೊಡುವುದಿಲ್ಲ. 35% ಕೇಂದ್ರ ಸರ್ಕಾರ ಹಣವನ್ನು ಕೊಡತಕ್ಕದ್ದು. ರಾಜ್ಯ ಸರ್ಕಾರ 15% ಕೊಡತಕ್ಕದ್ದು. ಬೆಂಗಳೂರು ಮಹಾನಗರ ಪಾಲಿಕೆಯವರು 35% ಹಣವನ್ನು ಈ ಒಂದು ಕಾರ್ಯಕ್ರಮಕ್ಕೆ ಕೊಡಬೇಕಾಗುತ್ತದೆ. ಇದು ಸಂಪೂರ್ಣ ಕೇಂದ್ರ ಸರ್ಕಾರದ ಹಣವಲ್ಲ. ಕೇವಲ 35% ಹಣವನ್ನು ಮಾತ್ರ ಈ ಕೇಂದ್ರ ಸರ್ಕಾರ ಈ ಒಂದು ಕಾರ್ಯಕ್ರಮಕ್ಕೆ ಕೊಡತಕ್ಕದ್ದು. ಹಾಗೂ ಬೆಂಗಳೂರಿನ transportation ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಬೆಂಗಳೂರು ನಗರದಲ್ಲಿ Land Transport Authority ಯನ್ನು ತಂದಿರತಕ್ಕದ್ದು ರಾಷ್ಟ್ರದಲ್ಲೇ ಮೊದಲನೇ ನಗರ ಇದು. ಇಲ್ಲಿ ನಾವು Land Transport Authority ಯನ್ನು ತರುವುದರ ಮುಖಾಂತರ ಇವತ್ತು transportation ವಿಷಯದಲ್ಲೂ ಈಗಾಗಲೇ ನಾವು ಹೆಚ್ಚಿನ ಗಮನವನ್ನು ಕೊಡುವುದಕ್ಕೆ ಸರ್ಕಾರ ಗಮನ ಕೊಟ್ಟಿದೆ. ಈ ವಿಷಯದಲ್ಲಿ ಯಾವುದೇ ರೀತಿಯ ತರಾತುರಿಯ ನಿರ್ಣಯವನ್ನು ಮಾಡಿಲ್ಲ. ಬೆಂಗಳೂರು ನಗರ Garden City ಎಂದು ತಾವೆಲ್ಲ ಹೇಳಿದ್ದೀರಿ, ಇವತ್ತು Hyderabad ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ನಾವು ಇವತ್ತು ತಲೆ ತಗ್ಗಿಸುತ್ತೇನೆ. ನಮ್ಮ ಬೆಂಗಳೂರು ನಗರದ ಬಗ್ಗೆ ಇಷ್ಟು ಸಣ್ಣತನದಲ್ಲಿ ಯಾವ ಸದಸ್ಯರು ಮಾತನಾಡತಕ್ಕದ್ದು ಸರಿಯಲ್ಲ. ಹಾಗೆ ಮಾತನಾಡಿದರೆ ಕೆಂಪೇಗೌಡರು ನಿರ್ಮಾಣ ಮಾಡಿರುವ ಈ ನಗರಕ್ಕೆ ನಾವೆಲ್ಲ ಅವಮಾನ ಮಾಡಿದ ಹಾಗೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಹೈದರಾಬಾದ್ ನಗರದಲ್ಲಿರತಕ್ಕ ಪರಿಸ್ಥಿತಿಯೇ ಬೇರೆ. ಬೆಂಗಳೂರು ನಗರದ ಪರಿಸ್ಥಿತಿಯೇ ಬೇರೆ. ಹೈದರಾಬಾದ್ ನಗರಕ್ಕೆ ಅವರು ಮಾಡಿರುವ ಕಾರ್ಯಕ್ರಮಗಳು ಅಲ್ಲಿರತಕ್ಕ ಒತ್ತಡಗಳಿಗೆ ಅನುಗುಣವಾಗಿದೆ, ಆದರೆ ಬೆಂಗಳೂರು ನಗರ ಕಳೆದ ಆರು ವರ್ಷಗಳಲ್ಲಿ ಯಾರೂ ನಿರೀಕ್ಷೆ ಮಾಡದೇ ಇರತಕ್ಕ ರೀತಿಯಲ್ಲಿ ಬೆಳೆದಿರತಕ್ಕ ಒಂದು ಸನ್ನಿವೇಶ ಏನಿದೆ, ಇದರಲ್ಲಿ ನಾನು ಯಾವ ಸರ್ಕಾರಗಳಿಗೂ ದೋಷವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಇವತ್ತು ಹಿಂದೆ ನಡೆಸಿರುವ ಸರ್ಕಾರಗಳು ಬೆಂಗಳೂರು ನಗರ ಐದಾರು ವರ್ಷಗಳಲ್ಲಿ ಈ ಒಂದು ರೀತಿಯಲ್ಲಿ ಬೆಳವಣಿಗೆಯಾಗುತ್ತದೆಂದು

ಹೇಳಿ ನಿರೀಕ್ಷೆ ಮಾಡಿರಲಿಲ್ಲ. ಆ ಒಂದು ರೀತಿಯ ಸಂದರ್ಭದಲ್ಲಿ ಇವತ್ತೇನು ಬೆಂಗಳೂರು ನಗರ ಇವತ್ತು ವಿಸ್ಮಯ ಮೂಡಿಸತಕ್ಕ ರೀತಿಯಲ್ಲಿ ಏನು ಬೆಳೆದಿದೆ, ಬೆಂಗಳೂರು ನಗರದಲ್ಲಿ investment ಮಾಡತಕ್ಕವರ ಸಂಖ್ಯೆ ಕಡಿಮೆಯಾಗಿಲ್ಲ. ಎಲ್ಲರ ಗಮನ ಬೆಂಗಳೂರು ನಗರದ ಕಡೇನೆ ಇದೆ. ಆದರೆ investment ಮಾಡತಕ್ಕವರು ಬೆಂಗಳೂರು ನಗರದಲ್ಲಿರುವ ಭೂಮಿಯ ಮೇಲೆ ಹೆಚ್ಚಿನ ಗಮನವನ್ನು ಕೊಡತಕ್ಕ ವ್ಯವಸ್ಥೆ ಕೂಡ ಈ ರಾಜ್ಯದಲ್ಲಿದೆ. ಇದನ್ನೆಲ್ಲ ನಾವು ಗಮನದಲ್ಲಿಟ್ಟುಕೊಂಡೇ ಒಂದು ತೀರ್ಮಾನವನ್ನು ಮಾಡಬೇಕಾದರೆ ಹಿಂದೆ ಆಗಿರತಕ್ಕ ಅನಾಹುತಗಳು ಮತ್ತೆ ಆಗಬಾರದೆನ್ನುವ ದೃಷ್ಟಿಯಿಂದಲೇ ಕೆಲವು ನಿರ್ಧಾರಗಳನ್ನು ಮಾಡಬೇಕಾದರೆ ಯೋಚನೆ ಮಾಡಿ ನಿರ್ಧಾರ ಮಾಡುತ್ತಿದ್ದೇವೆ. ಈಗಲೂ investors ಗಳ ಸಂಖ್ಯೆ ಕಡಿಮೆಯಾಗಿಲ್ಲ. ಬೆಂಗಳೂರು ನಗರವೇ ಇವತ್ತು ರಾಷ್ಟ್ರದಲ್ಲಿ investment ಮಾಡತಕ್ಕವರಿಗೆ ಇಡೀ ರಾಷ್ಟ್ರದಿಂದಲೇ ಅಲ್ಲ, ವಿಶ್ವದಿಂದ ಬರತಕ್ಕವರು ಮೊದಲು ಮೊದಲು ಬೆಂಗಳೂರು ನಗರವನ್ನೇ ಅವರು ಪರಿಗಣನೆಗೆ ತೆಗೆದುಕೊಳ್ಳುತ್ತಿದ್ದಾರೆ. Visitors ಬಗ್ಗೆ ಹೇಳುತ್ತಿದ್ದರು. ಹಿಂದೆ ಇದ್ದ ಸರ್ಕಾರದಲ್ಲಿ ಎಷ್ಟೋ ದೊಡ್ಡ ಸಂಖ್ಯೆ ಬಂತು ಎಂದು ಹೇಳಿ. ನಮ್ಮಲ್ಲೂ ಬರುತ್ತಿದ್ದಾರೆ. ಕಳೆದ 13 ತಿಂಗಳಲ್ಲಿ ನಾನೂ ಪ್ರತಿನಿತ್ಯ ಹೊರದೇಶಗಳಿಂದ ಬರತಕ್ಕಂತಹವರನ್ನು ಬಹಳ ಭೇಟಿ ಮಾಡುತ್ತೇನೆ. 13 ತಿಂಗಳಲ್ಲಿ ಅದರ ಉಪಯುಕ್ತತೆ ಎಷ್ಟಾಗುತ್ತಿದೆ ಎನ್ನುವುದನ್ನು ನೋಡಿದ್ದೇನೆ. ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಈ ಬೃಹತ್ ಮಹಾನಗರಪಾಲಿಕೆ ನಿರ್ಮಾಣ ಮಾಡತಕ್ಕ ಸಂದರ್ಭದಲ್ಲಿ ಸದನದ ಸದಸ್ಯರು ನೀವೇನು ಕೆಲವರು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದೀರಿ. ಆ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇವತ್ತು ಸನ್ಮಾನ್ಯ ಸೋಮಣ್ಣನವರು ಹೇಳಿದ್ದಾರೆ. ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ಅವರು ನಗರಸಭಾ ಸದಸ್ಯರಾಗಿ ಒಂದು ಬಾರಿ ವಿಧಾನಸಭೆಯ ಸದಸ್ಯರಿಗೂ ಈ ಒಂದು ಬೆಂಗಳೂರು ನಗರವನ್ನು represent ಮಾಡಿದ್ದರು ಎಂದು ಕಾಣುತ್ತದೆ. ನಾವಿನ್ನು ಆಗ ಚಿಕ್ಕ ಹುಡುಗರು. ಇಲ್ಲಿ ಅವರು ಶಾಸಕರಾಗಿಯೂ ಕೆಲಸವನ್ನು ಮಾಡಿದ್ದಾರೆ. ಇವತ್ತು ಮೇಯರ್ ವಿಷಯದಲ್ಲಿ ಏನು ಚರ್ಚೆಯನ್ನು ಮಾಡಿದ್ದೀರಿ, ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆ, ಆ ಸಮಿತಿಯ ವರದಿಗಳು ಬಂದ ನಂತರ ಸದಸ್ಯರುಗಳು ತಾವೇನು ಸಲಹೆಗಳನ್ನು ಕೊಟ್ಟಿದ್ದೀರಿ, ಆ ಸಲಹೆಗಳನ್ನು ಅಳವಡಿಸುವುದಕ್ಕೂ ಈ ಸಂದರ್ಭದಲ್ಲಿ ತೀರ್ಮಾನವನ್ನು ಮಾಡುತ್ತೇವೆಂದು ಹೇಳಿ

ಈ ಒಂದು ಪರ್ಯಾಲೋಚನೆಗೆ ಸದನ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಎ. ಕೃಷ್ಣಪ್ಪ** :- ಮಾನ್ಯ ಅಧ್ಯಕ್ಷರೇ, ನೀವೂ ಬೇಜಾರು ಮಾಡಿಕೊಳ್ಳುತ್ತೀರಿ, ಅವರಿಗೂ ಬೇಜಾರು. ಇಂಥ ಮೇಜರ್ programmes ಇಷ್ಟು ಪ್ರಸ್ತಾಪ ಮಾಡಿದ್ದಕ್ಕೆ ಒಂದಕ್ಕೂ ಉತ್ತರವನ್ನು ಕೊಡಲಿಲ್ಲ. Re-cycling of water ತಮಿಳುನಾಡಿಗೆ ಹೋಗುತ್ತಿದ್ದರೆ 60 tmc ಅದಕ್ಕೆ ಏನಾದರೂ ಉತ್ತರ ಕೊಟ್ಟರೆ? ಇಲ್ಲ. ಸೋಲಾರ್ ಎನರ್ಜಿ ಬಗ್ಗೆ atleast ಈ ಮನೆಯಲ್ಲಿ ಹೇಳಬೇಕು ಮಾನ್ಯ ಮುಖ್ಯಮಂತ್ರಿಗಳೇ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** :- ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ limit ಮಾಡಿದೆ. ಇಲ್ಲದಿದ್ದರೆ ಅದಕ್ಕೆಲ್ಲ ಬೇಕೆಂದರೆ ಉತ್ತರವನ್ನು ಕೊಡೋಣ.

**ಶ್ರೀ ಎ. ಕೃಷ್ಣಪ್ಪ** :- ಯಾವುದನ್ನೂ ಹೇಳಲಿಲ್ಲ.

**ಶ್ರೀ ಧರ್ಮಸಿಂಗ್** :- ಬಿಲ್ ಗೆ ಸಂಬಂಧಪಟ್ಟ ವಿಷಯವನ್ನು ಹೇಳಿ. ನೀವು ಭೂಗಳ್ಳರ ಬಗ್ಗೆ ಹೋಗುತ್ತಿದ್ದೀರಿ. ಬೇಕಾದರೆ ಬಿಲ್ ಅನ್ನು ಪಾಸು ಮಾಡಿಕೊಡುತ್ತೇವೆಂದು ಹೇಳಿದ್ದೇವೆ. ಮತ್ತೊಂದು ಮೆಟ್ರೊ ಬಗ್ಗೆ ಏನನ್ನೂ ಹೇಳಲಿಲ್ಲ.

**ಶ್ರೀ ಎ. ಕೃಷ್ಣಪ್ಪ** :- 800 sq ಕಿಲೋ ಮೀಟರ್ ಏರಿಯಾದಲ್ಲಿ ಏನೇನು ಅಗತ್ಯವಾಗಿ ಬೇಕಾಗಿದೆ ಎಂದು ಹತ್ತಾರು ವಿಚಾರಗಳನ್ನು ಹೇಳಿದ್ದೇವೆ. ಮುಖ್ಯಮಂತ್ರಿಗಳು ಇವತ್ತು ಈ ಮನೆಯಲ್ಲಿದ್ದಾರೆ.

**ಅಧ್ಯಕ್ಷರು** :- ಹೇಳುತ್ತಾರೆ. ನಿಮ್ಮ ಪ್ರಶ್ನೆಗೆ ಉತ್ತರ ಹೇಳುತ್ತಾರೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** :- ಈಗಾಗಲೇ ಹೊಸ Zone ಗಳನ್ನು ಮಾಡುವುದಕ್ಕೆ..........

**ಶ್ರೀ ಪ್ರಕಾಶ್ ಹುಕ್ಕೇರಿ** :- ಕ್ಷೇತ್ರ ಮರುವಿಂಗಡಣೆಯಾಗುತ್ತಿದೆ. ನಾವು ಎರಡು ಗ್ರಾಮಪಂಚಾಯಿತಿಗಳನ್ನು ವಿಂಗಡಣೆ ಮಾಡಬೇಕೆಂದು ಹೇಳಿ ಒಂದು ಪ್ರಸ್ತಾಪ ಕೊಟ್ಟಿದ್ದೇವೆ. ಆಗ ತಮ್ಮಿಂದ ಕ್ಷೇತ್ರ ಮರುವಿಂಗಡಣೆ ಆಗುವತನಕ ಯಾವುದನ್ನೂ ಕೂಡ ಯಾವ ಹಳ್ಳಿಯಾಗಲಿ, ಯಾವ ಪಂಚಾಯಿತಿಯೇ ಆಗಲಿ

ಒಡೆಯುವುದಕ್ಕೆ ಬರುವುದಿಲ್ಲವೆಂದು ನಿಮ್ಮ ಸರ್ಕಾರದ ಕಡೆಯಿಂದ ನಮಗೆ ಉತ್ತರ ಬಂದಿದೆ. ಆದರೆ ತಾವು 32 ಗ್ರಾಮ ಪಂಚಾಯಿತಿಗಳನ್ನು ಇವತ್ತು ಮಹಾನಗರ ಪಾಲಿಕೆಗೆ ಸೇರಿಸುತ್ತಿದ್ದೀರಿ. ಅದು ಹೇಗೆ ಮಾಡುವುದಕ್ಕೆ ಬರುತ್ತದೆಂದು ನಮಗೆ ಸ್ವಲ್ಪ ಹೇಳಬೇಕು. ನಾವೇ ಒಂದು proposal ಕೊಟ್ಟಿದ್ದೇವೆ. RDPR Secretary ಅವರು ಆಗುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ :–** ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೊಸದಾಗಿ ಸಿಬ್ಬಂದಿಗಳನ್ನು ಇದಕ್ಕೇನು ಬೃಹತ್ ಬೆಂಗಳೂರು..........

**ಶ್ರೀ ಎ. ಕೃಷ್ಣಪ್ಪ :–** ಮಾನ್ಯ ಸಭಾಧ್ಯಕ್ಷರೇ, Zonal Office ಗಳನ್ನು ಮಾಡುವಾಗ ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಅನ್ನೇ neglect ಮಾಡಿಬಿಟ್ಟಿದ್ದಾರೆ. ಅದರ ಬಗ್ಗೆ ಕೂಡ ಏನನ್ನೂ ಹೇಳಲಿಲ್ಲ. ಇನ್ನು ಮುಖ್ಯಮಂತ್ರಿಗಳಿಂದ ನಾವೇನು ಈ ಮನೆಯಲ್ಲಿ expect ಮಾಡುವುದು? ನಮಗೇನಾದರೂ ಕೆಲವು ಪರಿಹಾರಗಳನ್ನು ಅವರು ಹೇಳುತ್ತಾರೆ. ಜನರ ದೃಷ್ಟಿಯಿಂದ, ಆಡಳಿತ ದೃಷ್ಟಿಯಿಂದ ಅಥವಾ it is an emotional subject, ಇದು sentimental subject, ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನ್ನು neglect ಮಾಡಿಬಿಟ್ಟು ಇವರು Zonal Office ಗಳನ್ನು ತೆಗೆದುಕೊಂಡು ಎಲ್ಲೋ ಹಾಕಿದರೆ ಹೇಗೆ? ಯಾವುದಕ್ಕೂ ಇವರು ಉತ್ತರ ಕೊಡುವುದಿಲ್ಲ. ಜನರಲ್ ಆಗಿ ಏನೊ ಹೇಳಿಬಿಟ್ಟು ಕುಳಿತುಕೊಳ್ಳುತ್ತಿದ್ದಾರೆ. ನಮಗೆ ಉತ್ತರ ಕೊಡಬೇಕು.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ :–** ಮಾನ್ಯ ಅಧ್ಯಕ್ಷರೆ, ಈ ಎಂಟು Zonal Office ಗಳನ್ನು ಮಾಡತಕ್ಕದ್ದು ಏನಿದೆ, ಅದರಲ್ಲಿ ಜನಸಾಮಾನ್ಯರಿಗೆ ಪ್ರತಿನಿತ್ಯ ಈ ಕಛೇರಿಗಳಲ್ಲಿ ಅವರ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುವುದಕ್ಕೆ ಸುಲಭವಾಗಿ ಅವರು ತಲುಪತಕ್ಕಂಥ ಒಂದು ಬಡಾವಣೆಗಳನ್ನು ಗುರುತಿಸತಕ್ಕಂಥದ್ದು. ಇವತ್ತು ಬ್ಯಾಟರಾಯನಪುರ ಮತ್ತು ಯಲಹಂಕದಲ್ಲೂ ಏನು ಚರ್ಚೆ ನಡೆಯುತ್ತಿದೆ, ಅಲ್ಲೂ ಇವತ್ತು ಸಾರ್ವಜನಿಕರಿಗೆ ಅನುಕೂಲವಾಗುವ ಒಂದು ದೃಷ್ಟಿಯಿಂದ ಅಲ್ಲಿ ಕೆಲವು ತೀರ್ಮಾನ ಮಾಡುತ್ತಿದ್ದೇವೆ. ಅದರಲ್ಲಿ ಬೇರೆ ರೀತಿಯ ಒಂದು ನಿಮಗೆ ಇಲ್ಲವೇ ಆ ಭಾಗದ ಜನರಿಗೆ ಕೃಷ್ಣರಾಜಪುರಂ ಕ್ಷೇತ್ರದ ಹೆಸರು ಅದನ್ನು ತೆಗೆಯಬೇಕೆನ್ನುವ ದೃಷ್ಟಿಯಿಂದ ಇಲ್ಲ. ಅಲ್ಲಿರತಕ್ಕ ನಾಗರೀಕರಿಗೆ ಅನುಕೂಲ ಆಗಬೇಕೆನ್ನುವ ದೃಷ್ಟಿಯಿಂದ ಇವತ್ತು ಈ ರೀತಿಯ ಒಂದು ತೀರ್ಮಾನಗಳಾಗಿದೆ ಎಂದು ಹೇಳುವುದಕ್ಕೆ

ಬಯಸುತ್ತೇನೆ. ಈಗಾಗಲೇ Joint Commissioner ಗಳು ಮತ್ತು Deputy Commissioner ಗಳನ್ನು..........

(ಗೊಂದಲ)

**ಶ್ರೀ ಎಂ.ಪಿ. ವೆಂಕಟೇಶ್ :-** ಮಾನ್ಯ ಕೃಷ್ಣಪ್ಪನವರೇ, ದಯವಿಟ್ಟು ಸ್ವಲ್ಪ ಕುಳಿತುಕೊಳ್ಳಿ. ಉತ್ತರ ನಿಮಗೆ ಹೇಗೆ ಬೇಕೋ ಹಾಗೆ ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ :-** ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಈಗಾಗಲೇ ನೀರಿನ ಸಮಸ್ಯೆ ಏನಿದೆ, ಹೊಸದಾಗಿ recycling plants ಹಾಕುವುದಕ್ಕೆ ಹಲವಾರು ಉದ್ಯಮಿಗಳು ಏನು ಬಂದಿದ್ದಾರೆ, ಅದರ ಬಗ್ಗೆ ಈಗಾಗಲೇ ನಾವು ಗಮನಹರಿಸಿದ್ದೇವೆ. ಹೊಸ recycling plants ಇರಬಹುದು, ಇವತ್ತು ನಾವು ಉಪಯೋಗಿಸಿರುವ ನೀರನ್ನು ಮತ್ತೆ ಉಪಯೋಗಿಸುವುದಕ್ಕೆ ಸಂಬಂಧಿಸಿದಂತೆ ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲವೋ, ಇವತ್ತು ಅದನ್ನು ಉಪಯೋಗಿಸುವುದಕ್ಕೂ ಈಗಾಗಲೇ ಕೆಲವು ಬೇರೆ ಏನು ಕಂಪನಿಗಳು ಇಲ್ಲಿಗೆ ಬಂದಿವೆ, ಅವರ ಜೊತೆಗೆ ಚರ್ಚೆಯ ಹಂತದಲ್ಲಿದ್ದೇವೆ. recycling plants ಹಾಕುವುದರ ಮೂಲಕ ಇವತ್ತು ಬೆಂಗಳೂರಿನ ನೀರಿನ ಸಮಸ್ಯೆಯನ್ನು ನಿವಾರಿಸುವುದಕ್ಕೆ ಇದರ ಬಗ್ಗೆ ಈಗಾಗಲೇ ನಾವೆಲ್ಲರೂ ಸಮಗ್ರವಾಗಿ ಈ ವಿಷಯದಲ್ಲಿ ಗಮನಹರಿಸಿದ್ದೇವೆಂದು ಹೇಳಬಯಸುತ್ತೇನೆ. ಇನ್ನು ಮೆಟ್ರೊ ವಿಷಯದಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಏನು ಪ್ರಶ್ನೆಗಳನ್ನು ಕೇಳಿದ್ದಾರೆ, Metro project ನಿಗದಿತ ಅವಧಿಗೆ ಮುಗಿಯಬೇಕೆಂದು ಕೆಲಸ ಪ್ರಾರಂಭ ಮಾಡಿದ್ದೇವೆ. ಇವತ್ತು ಯಾವುದೇ ರೀತಿಯಲ್ಲೂ ನಿಧಾನಗತಿಯಾಗಿಲ್ಲ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ' ನನ್ನ ಕಾಲದಲ್ಲಿ ಮಾಡಿದ್ದೇವೆ' ಎಂದು ಏನು ಹೇಳಿದ್ದಾರೆ, ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದುದರಿಂದ, ಇದರಲ್ಲಿನ credit ಅನ್ನು ನೀವೇ ತೆಗೆದುಕೊಂಡು ಬಿಡಿ. Metro Project ವಿಷಯದಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಸಂಪೂರ್ಣ credit ಕೊಡೋಣ. ಸಮಯ ಏನು ನಿಗದಿ ಮಾಡಿದ್ದೇವೆ, ಆ ನಿಗದಿತ ಅವಧಿಯೊಳಗೆ ಕೆಲಸವನ್ನು ಸಂಪೂರ್ಣಗೊಳಿಸತಕ್ಕಂಥಾದ್ದು, ಅದರ ಜೊತೆಗೆ, ಹಿಂದಿನ ಸರ್ಕಾರಗಳಲ್ಲಿ Indira Nagar fly over ಇರಬಹುದು, Javadeva fly over ಇರಬಹುದು, ಆ

ಕಾಮಗಾರಿಗಳೆಲ್ಲವೂ ಏನು ನಿಂತಿದ್ದವು, ಅದೆಲ್ಲವನ್ನೂ ಇವತ್ತು ಸಂಪೂರ್ಣಗೊಳಿಸುವುದಕ್ಕೆ ನಾವು ಏನು ಸಮಯ ನಿಗದಿ ಮಾಡಿಕೊಂಡಿದ್ದೇವೆ, ಆ ನಿಗದಿತ ಅವಧಿಯೊಳಗೇ ಕೆಲಸ ಮಾಡುವುದರ ಮುಖಾಂತರ ಬೆಂಗಳೂರಿನ ಹಲವಾರು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾನು ಗಮನಹರಿಸಿದ್ದೇನೆ.

ಪರ್ಯಾಲೋಚನಾ ಪ್ರಸ್ತಾವ

**ಅಧ್ಯಕ್ಷರು** :- ಪ್ರಸ್ತಾವ ಏನೆಂದರೆ, "2006 ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಅಧ್ಯಕ್ಷರು** :- "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಅಧ್ಯಕ್ಷರು** :- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** :- ಮಾನ್ಯ ಅಧ್ಯಕ್ಷರೆ, 2006 ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು :–** ಪ್ರಸ್ತಾವ ಏನೆಂದರೆ, "2006 ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ – 3)

**(ಈ ಹಂತದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸುತ್ತಾ, ಕಾಂಗ್ರೆಸ್ಸಿನ ಮಾನ್ಯ ಸದಸ್ಯರುಗಳು ಸನ್ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)**

**ಅಧ್ಯಕ್ಷರು :–** ಈಗ ಸದನವನ್ನು 3 : 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 2 : 24 ಗಂಟೆಗೆ ಮುಕ್ತಾಯಗೊಂಡು, ಪುನಃ 3 : 30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**(3 : 30)**

**(ಸದನವು ಪುನಃ 3 : 47 ಗಂಟೆಗೆ ಸಮಾವೇಶಗೊಂಡಿತು)**

**ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು.**

**8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :**

**ವಿಷಯ :–** ಇನ್‌ಫೋಸಿಸ್ ನಾರಾಯಣ ಮೂರ್ತಿಯವರ ಪರವಾಗಿ ಶ್ರೀ ಎಸ್.ಎಲ್. ಭೈರಪ್ಪನವರು ಮಾತನಾಡಿರುವ ಬಗ್ಗೆ :

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :–** ಮಾನ್ಯ ಉಪಾಧ್ಯಕ್ಷರೆ, ಒಂದು ಪ್ರಮುಖವಾದಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಈ ಸದನದಲ್ಲಿ ಶ್ರೀಮಾನ್.........

**ಉಪಾಧ್ಯಕ್ಷರು :–** ಯಾವ ವಿಷಯವು ತಾವು ಪ್ರಸ್ತಾಪ ಮಾಡುತ್ತಿದ್ದೀರಿ?

**ಶ್ರೀ ವಾಟಾಳ್ ನಾಗರಾಜ್ :–** ನಾರಾಯಣ ಮೂರ್ತಿಯವರು.......